ಮಂಗಳವಾರ, ಡಿಸೆಂಬರ್ 14, 2021 | ₹ 6.00

ಪ್ರಜಾ ವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

21 ವರ್ಷಗಳ ಬಳಿಕ ಭಾರತದ ಮುಡಿಗೆ ಪ್ರತಿಷ್ಠಿತ ಪಟ್ಟ

ಹರ್ನಾಜ್ 'ಭುವನ ಸುಂದರಿ'

ಈಲಟ್, ಇಸ್ರೇಲ್ (ಪಿಟಿಐ): ಭಾರತದ ನಟಿ ಹಾಗೂ ರೂಪದರ್ಶಿ ಹರ್ನಾಜ್ ಕೌರ್ ಸಂಧು ಅವರು 'ಭುವನ ಸುಂದರಿ' ಕಿರೀಟವನ್ನು ಸೋಮವಾರ ಮುಡಿಗೇರಿಸಿಕೊಂಡಿದ್ದಾರೆ.

21 ವರ್ಷಗಳ ನಂತರ ಭಾರತಕ್ಕೆ 'ಭುವನ ಸುಂದರಿ' ಪಟ್ಟ ಒಲಿದಂತಾಗಿದೆ. ಈ ಹಿಂದೆ ನಟಿಯರಾದ ಸುಷ್ಮಿತಾ ಸೇನ್ (1994) ಹಾಗೂ ಲಾರಾ ದತ್ತಾ (2000) ಅವರು ಈ ಗೌರವಕ್ಕೆ ಭಾಜನರಾಗಿದ್ದರು.

ಪರಾಗ್ವೆಯ 22 ವರ್ಷದ ನಾದಿಯಾ ಫೆರೆರಾ ಮೊದಲ ರನ್ನರ್ ಅಪ್ ಹಾಗೂ ದಕ್ಷಿಣ ಆಫ್ರಿಕಾದ 24 ವರ್ಷದ ಲಲೇಲಾ ಸ್ವಾನ್ ಎರಡನೇ ರನ್ನರ್ ಅಪ್ ಸ್ಥಾನ ಪಡೆದರು.

ಕೆಂಪು ಸಮುದ್ರ ತೀರದಲ್ಲಿರುವ ಈಲಟ್ ನಗರದ ಐಷಾರಾಮಿ ರೆಸಾರ್ಟ್‌ನಲ್ಲಿ ಭುವನ ಸುಂದರಿ ಸ್ಪರ್ಧೆಯ 70ನೇ ಆವೃತ್ತಿಯ ಕಾರ್ಯಕ್ರಮ ನಡೆಯಿತು. ಚಂಡೀಗಡ ಮೂಲದ, 21ರ ಹರೆಯದ ಹರ್ನಾಜ್ ಕೌರ್ ಅವರು ಅಂತಿಮ ಸುತ್ತಿನಲ್ಲಿ 'ಭುವನ ಸುಂದರಿ' ಪಟ್ಟವನ್ನು ತಮ್ಮದಾಗಿಸಿಕೊಂಡರು.

ಹಿಂದಿನ ವರ್ಷ ಇದೇ ಗೌರವಕ್ಕೆ ಪಾತ್ರರಾಗಿದ್ದ, ಮೆಕ್ಸಿಕೊದ ಆ್ಯಂಡ್ರಿಯಾ ಮೆಜಾ ಅವರು ಹರ್ನಾಜ್ ಅವರಿಗೆ ಕಿರೀಟ ತೊಡಿಸಿದರು. ಈಲಟ್‌ನಲ್ಲಿ ನೆಲೆಸಿರುವ ಭಾರತೀಯರು ಸೇರಿದಂತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಇತರರು ಹರ್ನಾಜ್ ಅವರ ಸಾಧನೆಯ ಅಮೂಲ್ಯ ಕ್ಷಣಗಳಿಗೆ ಸಾಕ್ಷಿಯಾದರು.

ಹರ್ನಾಜ್ ಕೌರ್ ಅವರು ಸಾರ್ವಜನಿಕ ಆಡಳಿತದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿದ್ದಾರೆ.

'21 ವರ್ಷಗಳ ನಂತರ ಭಾರತಕ್ಕೆ ಈ ಮಹೋನ್ನತ ಗೌರವ ತಂದುಕೊಡುತ್ತಿದ್ದು, ಇದು ಅತ್ಯಂತ ಹೆಮ್ಮೆಯ ಕ್ಷಣ' ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

'ನನ್ನನ್ನು ಬೆಂಬಲಿಸಿದ್ದಕ್ಕಾಗಿ ದೇವರು, ಪೋಷಕರು ಹಾಗೂ ಮಿಸ್ ಇಂಡಿಯಾ ಸಂಸ್ಥೆಗೆ ನಾನು ಕೃತಜ್ಞಳಾಗಿದ್ದೇನೆ. ನನ್ನ ಗೆಲುವಿಗಾಗಿ ಪ್ರಾರ್ಥಿಸಿದ ಹಾಗೂ ಹಾರೈಸಿದ ಪ್ರತಿಯೊಬ್ಬರಿಗೂ ಧನ್ಯವಾದ ಅರ್ಪಿಸುತ್ತೇನೆ' ಎಂದೂ ಹೇಳಿದ್ದಾರೆ.



ಇಸ್ರೇಲ್‌ನ ಈಲಟ್ ನಗರದಲ್ಲಿ 'ಭುವನ ಸುಂದರಿ' ಪಟ್ಟ ಮುಡಿಗೇರಿಸಿಕೊಂಡ ಭಾರತದ ಹರ್ನಾಜ್ ಕೌರ್ ಸಂಧು ಅವರು ಸಂಭ್ರಮದಿಂದ ಕೈಬೀಸಿದರು

—ಎಪಿ/ಪಿಟಿಐ ಚಿತ್ರ

ಪರಿಷತ್: ಹಲವರ ಭವಿಷ್ಯ ಇಂದು ನಿರ್ಧಾರ

ಬೆಂಗಳೂರು: ರಾಜ್ಯದ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ನ 25 ಕ್ಷೇತ್ರಗಳಿಗೆ ಇದೇ 10 ರಂದು ನಡೆದ ಚುನಾವಣೆಯ ಮತಗಳ ಎಣಿಕೆ ಮಂಗಳವಾರ ನಡೆಯಲಿದ್ದು, ಬಿಜೆಪಿ ಮತ್ತು ಕಾಂಗ್ರೆಸ್‌ನ ಪ್ರಮುಖ ನಾಯಕರ ಭವಿಷ್ಯ ನಿರ್ಧಾರವಾಗಲಿದೆ.

ಸಮಾಜ ಕಲ್ಯಾಣ ಸಚಿವ ಹಾಗೂ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, ಉಪ ಸಭಾಪತಿ ಎಂ.ಕೆ.ಪ್ರಾಣೇಶ್, ಸರ್ಕಾರದ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ ಅಗ್ನಿಪರೀಕ್ಷೆ ಎದುರಿಸಿದ್ದಾರೆ. ಬೊಮ್ಮಾಯಿ ಸರ್ಕಾರದಲ್ಲಿ ವಿಧಾನಪರಿಷತ್ತಿನ ಏಕೈಕ ಸಚಿವರಾಗಿರುವ ಶ್ರೀನಿವಾಸ ಪೂಜಾರಿ ಗೆಲುವು ಸಾಧಿಸಿದರೆ, ಸಭಾನಾಯಕರಾಗಿಯೇ ಮುಂದುವರಿಯಲಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಪರಿಷತ್ತಿನ ಹಾಲಿ ಸದಸ್ಯ ಕಾಂಗ್ರೆಸ್‌ನ ಕೆ.ಸಿ.ಕೊಂಡಯ್ಯ, ಜೆಡಿಎಸ್‌ನ ಸೂರಜ್ ರೇವಣ್ಣ, ಕಾಂಗ್ರೆಸ್ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ತಮ್ಮ ಚನ್ನರಾಜ ಹಟ್ಟಿಹೊಳಿ, ಜಾರಕಿಹೊಳಿ ಕುಟುಂಬದ ಪಕ್ಷೇತರ ಅಭ್ಯರ್ಥಿ ಲಖನ್ ಜಾರಕಿಹೊಳಿ, ಬಿಜೆಪಿ ಶಾಸಕ ಜಗದೀಶ ಶೆಟ್ಟರ್ ತಮ್ಮ ಪ್ರದೀಪ ಶೆಟ್ಟರ್ ಕಣದಲ್ಲಿರುವ ಪ್ರಮುಖರು.

'ಕನ್ನಡ ಕಲಿಕೆ: ಸದ್ಯಕ್ಕೆ ಬಲವಂತದ ಕ್ರಮ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಶಿಕ್ಷಣ ಹಂತದಲ್ಲಿ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ ಕಲಿಕೆ ಕಡ್ಡಾಯಗೊಳಿಸಿ ಹೊರಡಿಸಿರುವ ಆದೇಶದ ಅನುಸಾರ ಸದ್ಯಕ್ಕೆ ಯಾವುದೇ ಬಲವಂತದ ಕ್ರಮ ಜರುಗಿಸದಂತೆ ರಾಜ್ಯ ಸರ್ಕಾರ ಹಾಗೂ ವಿಶ್ವವಿದ್ಯಾಲಯಗಳಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಸರ್ಕಾರದ ಆದೇಶ ರದ್ದು ಕೋರಿ ಸಂಸ್ಕೃತ ಭಾರತಿ (ಕರ್ನಾಟಕ) ಟ್ರಸ್ಟ್,



ಮಹಾ ವಿದ್ಯಾಲಯ ಸಂಸ್ಕೃತ ಪ್ರಾಧ್ಯಾಪಕ ಸಂಘ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಈ ಹಿಂದಿನ ವಿಚಾರಣೆ ವೇಳೆ ನ್ಯಾಯಪೀಠವು, 'ರಾಜ್ಯ ಸರ್ಕಾರದ ಕ್ರಮದ ಬಗ್ಗೆ ಕೇಂದ್ರ ಸರ್ಕಾರ ಯಾವ ನಿಲುವು ತಳೆದಿದೆ ಎಂದು ಕೇಳಿತ್ತು. ಅಂತೆಯೇ, ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗಾಗಿ ಭಾಷೆ ಕಲಿಕೆ ಕಡ್ಡಾಯಗೊಳಿಸಬಹುದೇ ಎಂಬುದನ್ನು ಸ್ಪಷ್ಟಪಡಿಸಿ' ಎಂದೂ ಕೇಂದ್ರ ಸರ್ಕಾರದ ಪರ ವಕೀಲರಿಗೆ ಸೂಚಿಸಿತ್ತು.

ಸೋಮವಾರ ವಿಚಾರಣೆಗೆ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಂ.ಬಿ. ನರಗುಂದ, 'ಪ್ರಕರಣದ ಬಗ್ಗೆ ಕೇಂದ್ರ ಸರ್ಕಾರದಿಂದ ಮಾಹಿತಿ ಪಡೆದು ನ್ಯಾಯಾಲಯಕ್ಕೆ ಒದಗಿಸಲು ಒಂದಷ್ಟು ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಕೋರಿಕೆ ಮಾನ್ಯ ಮಾಡಿದ ನ್ಯಾಯಪೀಠ, 'ಅರ್ಜಿಯ ಮುಂದಿನ ವಿಚಾರಣೆವರೆಗೆ ಕನ್ನಡ ಕಡ್ಡಾಯ ವಿಚಾರದಲ್ಲಿ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು' ಎಂದು ಸರ್ಕಾರ ಹಾಗೂ ವಿವಿಗಳಿಗೆ ಸೂಚಿಸಿ, ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿದೆ.

ಘಾಟ್ ದುಸ್ಥಿತಿ: 'ಪ್ರಜಾವಾಣಿ' ವರದಿ ಉಲ್ಲೇಖಿಸಿದ ಕೋಟ್ಯಾನ್

'ಘಾಟ್ ರಸ್ತೆಗಳ ಅಭಿವೃದ್ಧಿಗೆ ₹2,069 ಕೋಟಿ'

ಪ್ರಜಾವಾಣಿ ವಾರ್ತೆ



ಸಿ.ಸಿ. ಪಾಟೀಲ

ಬೆಳಗಾವಿ(ಸುವರ್ಣ ವಿಧಾನಸೌಧ): ರಾಜ್ಯದ ಪ್ರಮುಖ 18 ಘಾಟ್ ರಸ್ತೆಗಳ ಸುರಕ್ಷತೆಗಾಗಿ ಕ್ರಮ ಕೈಗೊಂಡಿದ್ದು, ರಾಷ್ಟ್ರೀಯ ಹೆದ್ದಾರಿ ವಲಯ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಗಳ ಅಡಿ ಬರುವ ಘಾಟ್ ರಸ್ತೆಗಳ ಅಭಿವೃದ್ಧಿಗೆ ಸುಮಾರು ₹2,069 ಕೋಟಿ ಖರ್ಚು ಮಾಡಲಾಗುತ್ತಿದೆ ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಹೇಳಿದರು.

ಅತಿ ಹೆಚ್ಚು ಭೂಕುಸಿತಕ್ಕೆ ಒಳಗಾಗುತ್ತಿರುವ ಶಿರಾಡಿ ಘಾಟ್, ಚಾರ್ಮಾಡಿ ಘಾಟ್‌ಗಳಲ್ಲಿ ಕಾರ್ಯಾದೇಶ ನೀಡಿ ಕಾಮಗಾರಿಗಳನ್ನು ಕೂಡಲೇ ಆರಂಭಿಸಲಾಗುವುದು ಎಂದು ವಿಧಾನಸಭೆಯಲ್ಲಿ ಬಿಜೆಪಿಯ ಉಮಾನಾಥ ಕೋಟ್ಯಾನ್ ಅವರ ಪ್ರಶ್ನೆಗೆ ಉತ್ತರಿಸಿದರು.

ರಾಜ್ಯದ ಪ್ರಮುಖ ಘಾಟ್ ರಸ್ತೆಗಳ ದುಸ್ಥಿತಿಯ ಬಗ್ಗೆ 'ಪ್ರಜಾವಾಣಿ' ವರದಿಯನ್ನು ಕೋಟ್ಯಾನ್ ಉಲ್ಲೇಖಿಸಿದರು.

ಚಾರ್ಮಾಡಿ ರಕ್ಷಿತಾರಣ್ಯದಲ್ಲಿ ದ್ವಿಪಥ ರಸ್ತೆ!

ಚಾರ್ಮಾಡಿ ಘಾಟ್ ರಸ್ತೆಯಲ್ಲಿ 10.40 ಕಿ.ಮೀ ಉದ್ದದಷ್ಟು ದ್ವಿಪಥ ರಸ್ತೆಯಾಗಿ ಅಗಲೀಕರಿಸುವ ಕಾಮಗಾರಿಗೆ ₹ 217.29 ಕೋಟಿ ವೆಚ್ಚವಾಗಲಿದೆ. ನ್ಯಾಷನಲ್ ಇನ್ಫ್ರಾಸ್ಟ್ರಕ್ಚರ್ ಪೈಪ್‌ಲೈನ್ ಪ್ರಾಜೆಕ್ಟ್ ಅಡಿ ಕೈಗೊಳ್ಳಲು ಪ್ರಸ್ತಾವನೆ ಸಲ್ಲಿಸಲಾಗುವುದು. ಈ ರಸ್ತೆಯು ರಕ್ಷಿತಾರಣ್ಯ ಪ್ರದೇಶದಲ್ಲಿ ಹಾದು ಹೋಗಲಿದ್ದು, ಇದಕ್ಕೆ ಅರಣ್ಯ ಇಲಾಖೆಯ ಅನುಮತಿ ಅಗತ್ಯವಿದೆ ಎಂದು ಸಚಿವ ಸಿ.ಸಿ.ಪಾಟೀಲ ಹೇಳಿದರು.

ಸಚಿವರು ನೀಡಿದ ವಿವರ:

- ಸಂಪಾಜೆ ಘಾಟ್‌ನಲ್ಲಿ 18 ಸ್ಥಳಗಳಲ್ಲಿ 2018–19 ನೇ ಸಾಲಿನಲ್ಲಿ ಭೂಕುಸಿತ ಉಂಟಾಗಿದ್ದು, ರಸ್ತೆ ಬದಿಗಳಲ್ಲಿ ನೂತನ ತಂತ್ರಜ್ಞಾನ ಬಳಸಿ ಕಾಂಕ್ರೀಟ್ ತಡೆಗೋಡೆಗಳನ್ನು ನಿರ್ಮಾಣ ಮಾಡಲಾಗುವುದು. ಇದಕ್ಕೆ ₹58.84 ಕೋಟಿ ವೆಚ್ಚವಾಗಲಿದೆ. ಅಲ್ಲದೆ, ₹30.49 ಕೋಟಿ ವೆಚ್ಚದಲ್ಲಿ ರಸ್ತೆ ಬಲಪಡಿಸಲಾಗುವುದು. ಭೂಕುಸಿತ ಮತ್ತು ಮತ್ತಿತರ ಅನಾಹುತಗಳನ್ನು ತಡೆಯಲು ವಿವಿಧ ವಿನ್ಯಾಸಗಳ ಶಾಶ್ವತ ತಡೆಗೋಡೆ ನಿರ್ಮಾಣಕ್ಕಾಗಿ ₹86.30 ಕೋಟಿಗೆ ಪ್ರಸ್ತಾಪ ನೀಡಲಾಗಿದೆ
- ಅರಬೈಲ್ ಘಾಟ್‌ನ ಅಂಕೋಲಾ–ಗೂಟಿ ರಸ್ತೆಯ ಬಲವರ್ಧನೆಗೆ ₹26.93 ಕೋಟಿ ಮತ್ತು ಶಾಶ್ವತ ಭೂಕುಸಿತ ತಡೆಯ ಕಾಮಗಾರಿಗೆ ₹152 ಕೋಟಿ ಅಂದಾಜು ತಯಾರಿಸಿ ಕೇಂದ್ರಕ್ಕೆ ಸಲ್ಲಿಸಲಾಗಿದೆ.
- ಆಗುಂಬೆ, ಮಾಳಾ, ಕೊಲ್ಲೂರು ಘಾಟ್ ರಸ್ತೆಗಳಲ್ಲಿ ಭೂಕುಸಿತ ತಡೆಗೆ ನೂತನ ತಂತ್ರಜ್ಞಾನ ಬಳಸಿ ಘಾಟ್ ರಸ್ತೆ ಅಭಿವೃದ್ಧಿಗಾಗಿ ಡಿಪಿಆರ್ ತಯಾರಿ. ನಾಗೋಡಿ ಘಾಟ್‌ನಲ್ಲಿ ತಡೆಗೋಡೆ ನಿರ್ಮಿಸಲು ₹4.23 ಕೋಟಿಗಳಿಗೆ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಇಲಾಖೆ ಒಪ್ಪಿಗೆ ನೀಡಿದೆ.
- ಉತ್ತರ ಕನ್ನಡ ಜಿಲ್ಲೆ ತೈನ್‌ಘಾಟ್‌ನಲ್ಲಿ 'ಪೇವ್ಡ್ ಶೌಲ್ಡರ್' ಒಳಗೊಂಡ ದ್ವಿಪಥ ರಸ್ತೆ ಮತ್ತು 'ಪೇವ್ಡ್ ಶೌಲ್ಡರ್' ಇಲ್ಲದ ಎರಡು ಪಥದ ರಸ್ತೆ ನಿರ್ಮಾಣ ಮಾಡಲಾಗುವುದು. ಇವುಗಳ ವೆಚ್ಚ ಕ್ರಮವಾಗಿ ₹856.20 ಕೋಟಿ ಮತ್ತು ₹486 ಕೋಟಿ.
- ಉತ್ತರ ಕನ್ನಡ ಜಿಲ್ಲೆಯ ದೇವಿಮಾನ್ ಘಾಟ್‌ನಲ್ಲಿ ಹೆದ್ದಾರಿ ಕಾಮಗಾರಿಗಾಗಿ ₹360 ಕೋಟಿ ವೆಚ್ಚ ಮಾಡಲಾಗುವುದು.
- ಬಾಳೆಬರೆ ಘಾಟ್ ಅಭಿವೃದ್ಧಿಗೆ ₹3.10 ಕೋಟಿ
- ಬಸಿಲೆ ಘಾಟ್ ರಸ್ತೆಯ ಅಭಿವೃದ್ಧಿಗೆ ₹14 ಕೋಟಿ

ಶಿರಾಡಿ ಘಾಟ್‌ನಲ್ಲಿ ಭೂಕುಸಿತ ಉಂಟಾಗುತ್ತಿರುವ ಸ್ಥಳಗಳಲ್ಲಿ 'ಮೈಕ್ರೋ ಫಿಲ್ಲಿಂಗ್ ಅಂಡ್ ಸಾಯಿಲ್ ನೈಲಿಂಗ್' ತಂತ್ರಜ್ಞಾನ ಬಳಸಿ ರಸ್ತೆ ಅಭಿವೃದ್ಧಿಗೆ ₹36.52 ಕೋಟಿ ಮಂಜೂರು ಮಾಡಲಾಗಿದೆ. ಶೀಘ್ರದಲ್ಲೇ ಕಾರ್ಯಾದೇಶ ನೀಡಿ ಕಾಮಾಗಾರಿ ನೀಡಲಾಗುವುದು. ಚಾರ್ಮಡಿ ಘಾಟ್‌ನಲ್ಲಿ 6 ಕಣಿವೆ ಸ್ಥಳಗಳಲ್ಲಿ ಭೂಕುಸಿತ ಉಂಟಾಗಿದ್ದು, 'ಮೈಕ್ರೋ ಫಿಲ್ಲಿಂಗ್ ಅಂಡ್ ಸಾಯಿಲ್ ನೈಲಿಂಗ್' ತಂತ್ರಜ್ಞಾನ ಬಳಸಿ ₹19.36 ಕೋಟಿ ವೆಚ್ಚದಲ್ಲಿ ಒಟ್ಟು 13 ಕಿ.ಮೀ ರಸ್ತೆಯನ್ನು ನಿರ್ವಹಣೆ ಮಾಡಲಾಗುವುದು ಎಂದು ಹೇಳಿದರು.

'ಪರ–ವಿರೋಧ ಸಹಜ: ಚರ್ಚಿಸ್ತೀವಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮತಾಂತರ ನಿಷೇಧ ಮಸೂದೆಯ ಕರಡು ಪ್ರತಿ ಕಾನೂನು ಇಲಾಖೆಯ ಮುಂದಿದೆ. ಅದು ಸಚಿವ ಸಂಪುಟಕ್ಕೆ ಬಂದ ಬಳಿಕ ಸದನದಲ್ಲಿ ಮಂಡಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರದಲ್ಲಿ ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿದ ಅವರು, 'ಹಲವಾರು ಕಾನೂನುಗಳ ಬಗ್ಗೆ ಪರ–ವಿರೋಧ ಇದ್ದೇ ಇರುತ್ತದೆ. ಸರ್ಕಾರವು ಜನರ ಹಿತಕ್ಕಾಗಿ ಕೆಲವು ಕಾನೂನುಗಳನ್ನು ತರಲೇಬೇಕಾಗುತ್ತದೆ. ಅಧಿವೇಶನದಲ್ಲಿ ಚರ್ಚೆ ಮಾಡುತ್ತೇವೆ' ಎಂದು ಸಮರ್ಥಿಸಿಕೊಂಡರು.

ಕೃಷಿ ಉದ್ದೇಶಕ್ಕೆ ಕನಿಷ್ಠ ವಿಸ್ತೀರ್ಣ ಮಿತಿ ಸಡಿಲಿಕೆ: ಮಾಧುಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಉದ್ದೇಶಕ್ಕಾಗಿಯೇ ಬಳಸುವ ಜಮೀನುಗಳಿಗೆ ಕನಿಷ್ಠ ವಿಸ್ತೀರ್ಣ ಮಿತಿಯಿಂದ ವಿನಾಯಿತಿ ನೀಡಲಾಗುವುದು ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಭರವಸೆ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಗಮನ ಸೆಳೆಯುವ ಸೂಚನೆ ಮಂಡಿಸಿದ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ, 'ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಮೂರು ಗುಂಟೆ ಹಾಗೂ ಉಳಿದ ಎಲ್ಲ ಜಿಲ್ಲೆಗಳಲ್ಲಿ ಐದು ಗುಂಟೆಗಿಂತ ಕಡಿಮೆ ವಿಸ್ತೀರ್ಣದ ಜಮೀನುಗಳನ್ನು ಪರಭಾರೆ ಮಾಡಿರುವುದನ್ನು ನಿಷೇಧಿಸಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ. ಇದರಿಂದ ಹಳ್ಳಿಯ ಜನರಿಗೆ ತೊಂದರೆ ಆಗುತ್ತಿದೆ. ತಕ್ಷಣವೇ ಈ ಮಿತಿಯನ್ನು ಸಡಿಲಿಸಬೇಕು' ಎಂದು ಆಗ್ರಹಿಸಿದರು.

ಅದಕ್ಕೆ ಉತ್ತರ ನೀಡಿದ ಮಾಧುಸ್ವಾಮಿ, 'ನಗರ ಪ್ರದೇಶಗಳಲ್ಲಿ ಜಮೀನುಗಳನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ವಿಭಜಿಸಿ ಮಾರಾಟ ಮಾಡುವ ಪ್ರವೃತ್ತಿ ಹೆಚ್ಚುತ್ತಿದೆ. ಅವು ನಂತರದಲ್ಲಿ ಕಂದಾಯ ನಿವೇಶನಗಳಾಗಿ ನೋಂದಣಿ ಆಗುತ್ತಿವೆ. ಇದರಿಂದ ಯೋಜಿತ ನಗರಾಭಿವೃದ್ಧಿಗೆ ಅಡ್ಡಿಯಾಗಿದೆ. ಕಂದಾಯ ನಿವೇಶನಗಳ ನೋಂದಣಿ ಮತ್ತು ಬಳಕೆ ನಿಯಂತ್ರಿಸಲು ಈ ಆದೇಶ ಹೊರಡಿಸಲಾಗಿದೆ' ಎಂದರು.

'ಕಂದಾಯ ನಿವೇಶನಗಳ ಹಾವಳಿ ಇರುವುದು ನಗರಗಳಲ್ಲಿ. ಗ್ರಾಮೀಣ ಪ್ರದೇಶದಲ್ಲಿ ಅಂತಹ ಸಮಸ್ಯೆ ಇಲ್ಲ. ಈಗ ವಿಧಿಸಿರುವ ಮಿತಿಯಿಂದ ಹಳ್ಳಿಯ ಜನರು ಕೃಷಿ ಉದ್ದೇಶಕ್ಕಾಗಿ ತುಂಡು ಜಮೀನು ಖರೀದಿಸಲಾಗದ ಮತ್ತು ಕೃಷಿ ಜಮೀನಿನಲ್ಲಿ ಮನೆ ನಿರ್ಮಿಸಲು ಆಗದ ಸ್ಥಿತಿಯಲ್ಲಿದ್ದಾರೆ. ಕೃಷಿ ಉದ್ದೇಶಕ್ಕೆ ಬಳಸುವ ಜಮೀನುಗಳಿಗೆ ಕನಿಷ್ಠ ವಿಸ್ತೀರ್ಣ ಮಿತಿ ಆದೇಶದಿಂದ ವಿನಾಯಿತಿ ನೀಡಬೇಕು' ಎಂದು ಶ್ರೀಕಂಠೇಗೌಡ ಒತ್ತಾಯಿಸಿದರು.

ಕೃಷಿ ಉದ್ದೇಶಕ್ಕೆ ಸೀಮಿತವಾಗಿ ಕನಿಷ್ಠ ವಿಸ್ತೀರ್ಣ ಮಿತಿಯಿಂದ ವಿನಾಯಿತಿ ನೀಡಲು ಸರ್ಕಾರ ಸಿದ್ಧವಾಗಿದೆ. ಕಂದಾಯ ಸಚಿವರ ಜತೆ ಈ ಕುರಿತು ಚರ್ಚಿಸಿ, ಆದೇಶ ಹೊರಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಕಾನೂನು ಸಚಿವರು ಭರವಸೆ ನೀಡಿದರು.

'ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಹಾಜರಿ ಕಡ್ಡಾಯ'

ಬೆಳಗಾವಿ (ಸುವರ್ಣ ವಿಧಾನಸೌಧ): 'ಸರ್ಕಾರಿ ವೈದ್ಯರು ಕರ್ತವ್ಯದ ಅವಧಿಯಲ್ಲಿ ಕಡ್ಡಾಯವಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಹಾಜರಿ ಇರುವುದನ್ನು ಖಚಿತಪಡಿಸಿಕೊಳ್ಳಲು ಜಿಯೋ ಟ್ರ್ಯಾಕ್ ತಂತ್ರಜ್ಞಾನ ಅಳವಡಿಸಲಾಗುತ್ತಿದೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಲಕ್ಷ್ಮಣ ಸವದಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ವೈದ್ಯರ ಕೊರತೆ ನೀಗಿಸಲು ವಿಶೇಷ ನೇಮಕಾತಿ ಆದೇಶ ಹೊರಡಿಸಲಾಗಿದೆ. ಈಗಾಗಲೇ ಸಾವಿರಕ್ಕೂ ಹೆಚ್ಚು ವೈದ್ಯರು ನೇಮಕ ಆಗಿದ್ದಾರೆ. ಬಾಕಿ ಇರುವ 150 ವೈದ್ಯರ ನೇಮಕಾತಿಗಾಗಿ ಚುನಾವಣೆ ನೀತಿ ಸಂಹಿತೆ ಮುಗಿದ ಬಳಿಕ ಕ್ರಮ ಕೈಗೊಳ್ಳಲಾಗುವುದು' ಎಂದರು.

'ವೈದ್ಯರ ಕೊರತೆ ನಿಭಾಯಿಸಲು ಒಂದು ವರ್ಷ ಗ್ರಾಮೀಣ ಸೇವೆ ಕಡ್ಡಾಯಗೊಳಿಸಲಾಗಿದೆ. 2,300 ವೈದ್ಯರನ್ನು ವಿವಿಧ ಕಾಲೇಜುಗಳಿಂದ ಪಡೆಯಲಾಗಿದೆ' ಎಂದು ಹೇಳಿದರು.

'ವೈದ್ಯಕೀಯ ಸೀಟು ಹಿಂದಿರುಗಿಸುವವರ ಮೇಲೆ ಕಠಿಣ ಕ್ರಮ'

ಬೆಳಗಾವಿ (ಸುವರ್ಣ ವಿಧಾನಸೌಧ): 'ಖಾಸಗಿ ವೈದ್ಯಕೀಯ ಕಾಲೇಜುಗಳ ಸರ್ಕಾರಿ ಕೋಟಾದ ಸೀಟುಗಳನ್ನು ಮಾಪ್ ಅಪ್ ಸುತ್ತಿನ ಬಳಿಕ ಹಿಂದಿರುಗಿಸುವವರ ಮೇಲೆ ದೊಡ್ಡ ಮೊತ್ತದ ದಂಡ ವಿಧಿಸುವ ಜೊತೆಗೆ, ಕಟ್ಟುನಿಟ್ಟಿನ ನೀತಿ ರೂಪಿಸಲು ಉದ್ದೇಶಿಸಲಾಗಿದೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ವಿಧಾನಪರಿಷತ್‌ನಲ್ಲಿ ಈ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಎನ್. ರವಿಕುಮಾರ್, '2019–2020 ಮತ್ತು 2020–21ನೇ ಸಾಲಿನಲ್ಲಿ ಸರ್ಕಾರಿ ಕೋಟಾದ 1,227 ವೈದ್ಯಕೀಯ ಸೀಟುಗಳನ್ನು ಖಾಸಗಿಯವರಿಗೆ ಹಿಂದಿರುಗಿಸಲಾಗಿದೆ. 2021–22ರ ಸಾಲಿನಲ್ಲಿ ಶಿಕ್ಷಣ ಸಂಸ್ಥೆಗಳಿಂದ ಸರ್ಕಾರ ವಾಪಸು ಪಡೆದು ಅರ್ಹ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರ್ಕಾರಿ ಕೋಟಾದ ಸೀಟುಗಳನ್ನು ಕೌನ್ಸೆಲಿಂಗ್ ಮೂಲಕ ಹಂಚಿಕೆಯ ಆಯ್ಕೆಗೆ ಅವಕಾಶ ಮಾಡಿಕೊಡುವ ಕುರಿತು ಸರ್ಕಾರದ ನಿಲುವೇನು' ಎಂದು ಪ್ರಶ್ನಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಸುಧಾಕರ್, 'ಮೂರು ಹಂತಗಳಲ್ಲಿ ಕೌನ್ಸೆಲಿಂಗ್ ನಡೆಸಲಾಗುತ್ತದೆ. ಮೊದಲ ಸುತ್ತಿನಲ್ಲಿ ಸೀಟು ಪಡೆದವರು ಕಾಲೇಜಿಗೆ ದಾಖಲಾಗದೇ ಇದ್ದರೆ ಎರಡನೇ ಸುತ್ತಿನಲ್ಲಿ ತಮ್ಮ ಸೀಟನ್ನು ಬೇರೆಯವರಿಗೆ ಬಿಟ್ಟುಕೊಡಲು ಅವಕಾಶ ಇದೆ. ಅದೇ ರೀತಿ ಎರಡನೇ ಸುತ್ತಿನಲ್ಲಿ ಸೀಟು ಪಡೆದವರು ಮಾಪ್ ಅಪ್ ಸುತ್ತಿಗೆ ಮೊದಲು ಬಿಟ್ಟುಕೊಡಲು ಅವಕಾಶ ಇದೆ. ಮಾಪ್ ಅಪ್ ಸುತ್ತಿನಲ್ಲಿ ಸೀಟು ಪಡೆದುಕೊಂಡವರು ದಾಖಲಾಗಲೇಬೇಕು. ಇಲ್ಲದೇ ಇದ್ದರೆ ದಂಡ ಕಟ್ಟಬೇಕಾಗುತ್ತದೆ' ಎಂದರು.

'ಬೆಳಿಗ್ಗೆ 9.30ರಿಂದ 4.30ರವರೆಗೆ ವೈದ್ಯರು ಗ್ರಾಮೀಣ ಭಾಗದ ಚಿಕಿತ್ಸಾ ಕೇಂದ್ರದಲ್ಲಿ ಉಳಿದು ಚಿಕಿತ್ಸೆ ನೀಡಬೇಕು. ಕೆಲವರು ವೈಯಕ್ತಿಕವಾಗಿ ಕ್ಲಿನಿಕ್ ನಡೆಸುತ್ತಿರಬಹುದು. ಆದರೆ, ಸರ್ಕಾರಿ ಕರ್ತವ್ಯದ ಅವಧಿಯಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಇರುವುದನ್ನು ಖಚಿತಪಡಿಸಿಕೊಳ್ಳಲು ಈಗಾಗಲೇ ಸಿಸಿಟಿವಿ ಸೇರಿದಂತೆ ಇತರ ಉಪಕ್ರಮಗಳನ್ನು ಜಾರಿಗೊಳಿಸಲಾಗಿದೆ. ಹಿಂದೆ ವೈದ್ಯರ ಕೊರತೆ ಇತ್ತು. ತಪ್ಪು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲು ಕಷ್ಟವಿತ್ತು. ಈಗ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರು ಬರುತ್ತಿದ್ದಾರೆ. ಹೀಗಾಗಿ, ಸರ್ಕಾರಿ ಸೇವೆಯ ಅವಧಿಯಲ್ಲಿ ಖಾಸಗಿ ಆಸ್ಪತ್ರೆ ಅಥವಾ ಕ್ಲಿನಿಕ್‌ಗೆ ಹೋದರೆ ಕಠಿಣ ಕ್ರಮ ಜರುಗಿಸಲು ಮುಂದಿನ ದಿನಗಳಲ್ಲಿ ನೀತಿ ಜಾರಿಗೆ ತರಲಾಗುವುದು' ಎಂದರು.

'ಕಂದಾಯ ಜಮೀನು ಮಂಜೂರಿಗೆ ಅಡ್ಡಿ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಳಗಾವಿ(ಸುವರ್ಣ ವಿಧಾನಸೌಧ): ಅಕ್ರಮ–ಸಕ್ರಮದಡಿ ಕಂದಾಯ ಜಮೀನು ಮಂಜೂರು ಮಾಡಲು ಯಾವುದೇ ಅಡೆ–ತಡೆ ಇಲ್ಲ ಎಂದು ಕಂದಾಯ ಸಚಿವ ಆರ್.ಅಶೋಕ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಸೋಮವಾರ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಅಕ್ರಮ ಸಕ್ರಮದಡಿ ಕಂದಾಯ ಜಮೀನು ಮಂಜೂರು ಮಾಡಲು ಪರಿಶೀಲನೆಗಾಗಿ ಅರಣ್ಯ ಇಲಾಖೆಗೆ ಯಾವುದೇ ಪ್ರಸ್ತಾವನೆಯನ್ನೂ ಕಳಿಸಿಲ್ಲ– ಕಳುಹಿಸುವುದೂ ಇಲ್ಲ ಭರವಸೆ ನೀಡಿದರು.

'ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮಕ್ಕೆ ಸಮಿತಿಯನ್ನು ರಚಿಸಲಾಗಿತ್ತು. ಅದರ ಅಧ್ಯಕ್ಷನಾಗಿ ನಾನು 9 ಸಭೆಗಳನ್ನು ನಡೆಸಿದ್ದೇನೆ. ಆದರೆ, ಅಕ್ರಮ ಸಕ್ರಮ ಅರ್ಜಿಗಳ ಸ್ಥಿರೀಕರಣಕ್ಕೆ ಅರಣ್ಯ ಇಲಾಖೆಗೆ ಕಡತಗಳನ್ನು ಕಳುಹಿಸಲಾಗಿದೆ' ಎಂದು ರಾಜೇಗೌಡ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಅಶೋಕ, 'ಇದರ ಪರಿಶೀಲನೆಯನ್ನು ಅರಣ್ಯ ಇಲಾಖೆಯೇ ನಡೆಸಲಿ ಎಂದು ಉಲ್ಲೇಖಿಸಿ ನಿಮ್ಮ ಕಡೆಯಿಂದಲೇ ಕಡತಗಳು ಹೋಗಿವೆ' ಎಂದರು.

ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 94 ಎ, 94 ಬಿ ಮತ್ತು 94 ಎ(4) ಅಡಿ ಅರಣ್ಯ ಭೂಮಿಯಲ್ಲಿನ ಯಾವುದೇ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಅವಕಾಶವಿಲ್ಲ. ಆದರೆ, ಸಮಿತಿಯು ಸೂಚಿಸುವ ಪ್ರಕರಣಗಳಲ್ಲಿ ಸಾಗುವಳಿ ಚೀಟಿ ನೀಡಲು ಯಾವುದೇ ತೊಂದರೆಗಳಿರುವುದಿಲ್ಲ ಎಂದು ಅಶೋಕ ಹೇಳಿದರು.

ಪೋಸ್ಟ್‌ಮನ್ ಮೂಲಕ ಪಿಂಚಣಿ: ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾಜಿಕ ಭದ್ರತಾ ಪಿಂಚಣಿಯನ್ನು ಇನ್ನು ಮುಂದೆ ಪೋಸ್ಟ್‌ಮನ್‌ಗಳ ಮೂಲಕವೇ ವಿತರಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ್ ಅವರ ಪ್ರಶ್ನೆಗೆ ಉತ್ತರಿಸಿದರು.

ಸಿಂಧಿ ಹಸುವಿನ ಹಿಂದೆ ಸೂಜಿ...!

'ಸಿಂಧಿ ಹಸುವಿನ ಹಿಂದೆ ಸೂಜಿ ಹಿಡಿದುಕೊಂಡು ನಿಂತರೆ ಮಾತ್ರ ಅವು ಸರಿಯಾಗಿ ಇರುತ್ತವೆ. ಇಲ್ಲಾಂದ್ರೆ ಮುಟ್ಟಿದರೆ ಮುನಿಯ...' – ಹೀಗೆಂದು ಹೇಳಿದವರು ಜೆಡಿಎಸ್‌ನ ಕೆ.ಎಲ್.ಶಿವಲಿಂಗೇಗೌಡ.

'ಕೋವಿಡ್ ನಂತರ ಗ್ರಾಮೀಣ ಭಾಗದಲ್ಲಿ ಸಾಕಷ್ಟು ಜನ ಹೈನುಗಾರಿಕೆಯನ್ನೇ ನೆಚ್ಚಿಕೊಂಡಿದ್ದಾರೆ. ಆದರೆ, ₹50 ಸಾವಿರಕ್ಕೆ ಸಿಂಧಿ ಹಸು ಕೊಂಡು ತಂದರೆ ಅವು ಮೂರು ದಿನವೂ ಬದುಕುತ್ತಿಲ್ಲ. ಸರ್ಕಾರ ಇತ್ತ ಗಮನ ಹರಿಸಬೇಕು' ಎಂದು ಅವರು ಅಳಲು ತೋಡಿಕೊಂಡರು.

ವಿಧಾನಸಭೆಯಲ್ಲಿ ಜೆಡಿಎಸ್‌ನ ನಿಸರ್ಗ ನಾರಾಯಣಸ್ವಾಮಿ ಅವರು ಪ್ರಶ್ನೆಯ ವೇಳೆ ಮಧ್ಯ ಪ್ರವೇಶಿಸಿ ಮಾತನಾಡಿದರು. ಜೆಡಿಎಸ್‌ನ ಎ.ಟಿ. ರಾಮಸ್ವಾಮಿ ಮಾತನಾಡಿ, ಪಶು ವೈದ್ಯಾಧಿಕಾರಿಗಳನ್ನು ನೇಮಿಸಿ ಎಂದರು.


ಇದಕ್ಕೆ ಪ್ರತಿಕ್ರಿಯಿಸಿದ ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ, ಪ್ರಸ್ತುತ 900 ಪಶುವೈದ್ಯಾಧಿಕಾರಿಗಳ ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದರು.

ಸಚಿವ ವಿ. ಸುನೀಲ್‌ಕುಮಾರ್ ಸ್ಪಷ್ಟನೆ

'ಪರ್ವ ನಾಟಕ, ಸರ್ಕಾರ ಮೂಗು ತೂರಿಸುವುದಿಲ್ಲ'

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): 'ಎಸ್.ಎಲ್. ಭೈರಪ್ಪ ಅವರ 'ಪರ್ವ' ಕಾದಂಬರಿ ಆಧಾರಿತ ನಾಟಕ ನಿರ್ದೇಶನ ಮಾಡಿರುವುದು ಪ್ರಕಾಶ್ ಬೆಳವಾಡಿ. ಮೈಸೂರಿನ ರಂಗಾಯಣ ಮೂಲಕ ಈ ನಾಟಕ ಪ್ರದರ್ಶನ ಏರ್ಪಡಿಸಲಾಗುತ್ತಿದೆ. ನಾಟಕದ ನಿರ್ದೇಶನದಲ್ಲಿ ಸರ್ಕಾರ ಮೂಗು ತೂರಿಸುವುದಿಲ್ಲ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್‌ಕುಮಾರ್ ಸ್ಪಷ್ಟಪಡಿಸಿದರು.



ವಿ. ಸುನೀಲ್ ಕುಮಾರ್

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಪಿ.ಆರ್. ರಮೇಶ್, 'ಸರಸ್ವತಿ ಸನ್ಮಾನ್ ಪ್ರಶಸ್ತಿ ಪುರಸ್ಕೃತ ಭೈರಪ್ಪ ಅವರ 'ಪರ್ವ' ಕಾದಂಬರಿ ಆಧರಿಸಿದ ನಾಟಕ ಪ್ರದರ್ಶನಕ್ಕೆ ರಾಜ್ಯ ಸರ್ಕಾರ ₹ 1 ಕೋಟಿ ಖರ್ಚು ಮಾಡುತ್ತಿದೆ. ಕಾದಂಬರಿಯಲ್ಲಿ ಸನಾತನ ಆಹಾರ ಪದ್ಧತಿಯ ಕುರಿತು ಉಲ್ಲೇಖಿಸಲಾಗಿದೆ. ಸನಾತನ ಧರ್ಮದಲ್ಲಿ ಮಾಂಸಾಹಾರ ಜಾರಿಯಲ್ಲಿತ್ತು ಎಂದು ಕಾದಂಬರಿಯಲ್ಲಿ ಲೇಖಕ ಭೈರಪ್ಪ ಅವರು ಉಲ್ಲೇಖಿಸಿದ್ದಾರೆ. ಕಾದಂಬರಿಯಲ್ಲಿರುವ ಸಂಭಾಷಣೆಗಳನ್ನು ಯಥಾವತ್ತಾಗಿ ನಾಟಕದಲ್ಲಿಯೂ ಅಳವಡಿಸಬೇಕು' ಎಂದು ಆಗ್ರಹಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಸಚಿವರು, 'ಪರ್ವ ನಾಟಕವನ್ನು ರಾಜ್ಯದಲ್ಲಿ 21 ಕಡೆ ಪ್ರದರ್ಶನ ಮಾಡಲಾಗಿದೆ. ನಾಟಕ ಪ್ರದರ್ಶನ ವಿಷಯದಲ್ಲಿ ಸರ್ಕಾರ ಮಧ್ಯಪ್ರವೇಶಿಸುವುದಿಲ್ಲ. ಸರ್ಕಾರ ರಂಗಾಯಣಕ್ಕೆ ಅನುದಾನ ಬಿಡುಗಡೆ ಮಾಡುತ್ತಿದೆ. ನಾಟಕದ ಪ್ರದರ್ಶನಕ್ಕೆ ನವೆಂಬರ್‌ವರೆಗೆ ₹ 70 ಲಕ್ಷ ಖರ್ಚು ಮಾಡಲಾಗಿದೆ. ಈಗಾಗಲೇ ₹ 50 ಲಕ್ಷ ಬಿಡುಗಡೆ ಮಾಡಲಾಗಿದೆ. ಬಾಕಿ ಅನುದಾನವನ್ನು ಶೀಘ್ರವೇ ಬಿಡುಗಡೆ ಮಾಡಲಾಗುವುದು' ಎಂದರು.

'ನಾಟಕ ಪ್ರದರ್ಶನಕ್ಕೆ ಸರ್ಕಾರ ಅನುದಾನ ನೀಡುತ್ತಿದೆ. ಹೀಗಾಗಿ ಸೂಕ್ತ ಸಲಹೆಯನ್ನೂ ನೀಡಬೇಕು' ಎಂದೂ ರಮೇಶ್ ಒತ್ತಾಯಿಸಿದರು.

ಮಂಗಳವಾರ, ಡಿಸೆಂಬರ್ 14, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 345 | ಪುಟ 14
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮಕುಶಲ
ಅಳು ಬಲಹೀನತೆಯ ಲಕ್ಷಣವಲ್ಲ;
ಬಹುದೀರ್ಘಕಾಲ ಬದುಕಿನ
ಹೋರಾಟದಲ್ಲಿ ಗಟ್ಟಿಯಾಗಿ ನಿಂತು,
ಬಂದದ್ದನ್ನೆಲ್ಲಾ ಧೈರ್ಯವಾಗಿ ಎದುರಿಸುವ
ಛಾತಿಯಿರುವವರೂ ಅಳುತ್ತಾರೆ.



ಆಳ-ಅಗಲ ಚುನಾವಣೆ ದಾರಿಯಲ್ಲಿ ಕಾಶಿ ಹೆದ್ದಾರಿ
'ಪುನೀತ್‌ಗೆ ಪದ್ಮಶ್ರೀ ಪ್ರಶಸ್ತಿ: ಕೇಂದ್ರಕ್ಕೆ ಶಿಫಾರಸು' 5
ಉಗ್ರರ ದಾಳಿ: ಎಎಸ್‌ಐ ಸೇರಿ ಇಬ್ಬರು ಸಾವು 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,283 ▼	17,368 ▼	₹49,730 (ಬೆಂಗಳೂರು)	₹62,400 (ಬೆಂಗಳೂರು)	75.78

₹ 27,341 ಕೋಟಿ ವೆಚ್ಚ • ಹಿಂದುಳಿದೇ ಇರುವ ತಾಲ್ಲೂಕುಗಳು

66ರಲ್ಲಿ ಬಡತನ; 131ರಲ್ಲಿ ಹಸಿವು!

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದ ಹಿಂದುಳಿದ 153 ತಾಲ್ಲೂಕುಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರವು 'ವಿಶೇಷ ಅಭಿವೃದ್ಧಿ ಯೋಜನೆ'ಯಡಿ 2007ರಿಂದ 2021ರ ವರೆಗೆ ₹ 27,341 ಕೋಟಿ ವೆಚ್ಚ ಮಾಡಿದೆ. ಇಷ್ಟೊಂದು ಹಣ ಸುರಿದರೂ 'ಸುಸ್ಥಿರ ಅಭಿವೃದ್ಧಿ ಗುರಿ' (ಎಸ್‌ಡಿಜಿ) ಸಾಧಿಸುವಲ್ಲಿ ಈ ತಾಲ್ಲೂಕುಗಳು ಭಾರಿ ಹಿಂದುಳಿದಿವೆ.

ನೀತಿ ಆಯೋಗದ 'ಎಸ್‌ಡಿಜಿ ಸೂಚ್ಯಂಕ- 2021'ದಲ್ಲಿರುವ ಅಂಶಗಳು ಪ್ರಾದೇಶಿಕ ಅಸಮಾನತೆಯ ಬಗ್ಗೆ ಕನ್ನಡಿ ಹಿಡಿದಿವೆ. ಅದರ ಪ್ರಕಾರ, ರಾಜ್ಯದ ಸರಾಸರಿಗೆ ಹೋಲಿಸಿದರೆ ಈ 153 ತಾಲ್ಲೂಕುಗಳ ಪೈಕಿ, 66ರಲ್ಲಿ ಇನ್ನೂ ಬಡತನವಿದೆ. 131 ತಾಲ್ಲೂಕುಗಳು ಹಸಿವು ಮುಕ್ತ ಆಗಿಲ್ಲ!

ಡಿ.ಎಂ. ನಂಜುಂಡಪ್ಪ ವರದಿಯಲ್ಲಿದ್ದ 114 ತಾಲ್ಲೂಕುಗಳು ಹಾಗೂ ಇದರಲ್ಲಿ ವಿಭಜನೆಯಾಗಿ ಹೊಸತಾಗಿ ರಚನೆಯಾಗಿರುವ 39 ತಾಲ್ಲೂಕುಗಳ ಅಭಿವೃದ್ಧಿಗೆ ವಿಶೇಷ ಅಭಿವೃದ್ಧಿ ಯೋಜನೆ ಅಡಿ ಅನುದಾನ ಒದಗಿಸಲಾಗಿತ್ತು.

5ನೇ ಪುಟ ನೋಡಿ

ಇನ್ನು ತಾಲ್ಲೂಕು ಸಮಗ್ರ ಅಭಿವೃದ್ಧಿ ಯೋಜನೆ?

ಪ್ರಾದೇಶಿಕ ಸಮತೋಲನ ಯೋಜನೆಗೆ ಆರ್ಥಿಕ ಇಲಾಖೆ ಇನ್ನು ಮುಂದೆ ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿ ಅನುದಾನವನ್ನು ನಿಗದಿಪಡಿಸುವಂತೆ ಯೋಜನಾ ಇಲಾಖೆಗೆ ಸೂಚಿಸಲು ಚಿಂತನೆ ನಡೆದಿದೆ.

'ನೀತಿ ಆಯೋಗದ 49 ಸೂಚಕಗಳಂತೆ ಪ್ರತಿವರ್ಷ ತಾಲ್ಲೂಕುಗಳ ಅಭಿವೃದ್ಧಿ ಆಧರಿಸಿ ಆದ್ಯತೆ ನಿಗದಿಪಡಿಸಿ ಅಭಿವೃದ್ಧಿ ಮತ್ತು ಅಗತ್ಯಗಳಿಗೆ ಅನುಗುಣವಾಗಿ ಅನುದಾನ ಹಂಚಿಕೆ ಮಾಡಲು ಯೋಚಿಸಲಾಗಿದೆ. ಅನುದಾನವನ್ನು ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮುಕ್ತ ಅನುದಾನವಾಗಿ ನೀಡಿದರೆ, ಯೋಜನಾ ಇಲಾಖೆಯ ಅಧಿಕಾರಿಗಳಾದ ತಾಲ್ಲೂಕು ಯೋಜನಾ ಅಧಿಕಾರಿಗಳು ಹಂಚಿಕೆ ಮಾಡಿ ಅನುಷ್ಠಾನ ಮಾಡಬಹುದು. ಅವರು ಪ್ರತಿ ತಿಂಗಳು ಸರ್ಕಾರಕ್ಕೆ ವರದಿ ನೀಡಬೇಕು. ವರ್ಷಾಂತ್ಯದಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಅಭಿವೃದ್ಧಿ ಬೆಳವಣಿಗೆಯ ಬಗ್ಗೆ ಮೌಲ್ಯಮಾಪನ ಮಾಡಿ ಸರ್ಕಾರಕ್ಕೆ ವರದಿ ನೀಡುವಂತೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ತಿಳಿಸುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಉದ್ದೇಶಿಸಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

'ಹಿಂದುಳಿದ ತಾಲ್ಲೂಕು'ಗಳ ವಸ್ತುಸ್ಥಿತಿ

153 ಒಟ್ಟು ತಾಲ್ಲೂಕು

₹35,822 ಕೋಟಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ನಿಗದಿ

₹ 28,972 ಕೋಟಿ ಅನುದಾನ ಬಿಡುಗಡೆ

₹27,341 ಕೋಟಿ ಅನುದಾನ ವೆಚ್ಚ

ಸುಸ್ಥಿರ ಅಭಿವೃದ್ಧಿ– ರಾಜ್ಯದ ಸರಾಸರಿಗಿಂತ ಕಡಿಮೆ

ಗುರಿ	ತಾಲ್ಲೂಕುಗಳ ಸಂಖ್ಯೆ
ಬಡತನ ನಿರ್ಮೂಲನೆ	66
ಹಸಿವು ಮುಕ್ತ	131
ಉತ್ತಮ ಆರೋಗ್ಯ	73
ಗುಣಮಟ್ಟದ ಶಿಕ್ಷಣ	118
ಲಿಂಗ ಅಸಮಾನತೆ	69

ಎಂಇಎಸ್ ಪುಂಡಾಟ, ಅಧ್ಯಕ್ಷನ ಮುಖಕ್ಕೆ ಮಸಿ

ಬೆಳಗಾವಿ: ವಿಧಾನಮಂಡಲ ಚಳಿಗಾಲದ ಅಧಿವೇಶನಕ್ಕೆ ಪರ್ಯಾಯವಾಗಿ, ಇಲ್ಲಿನ ತಿಲಕವಾಡಿಯ ವ್ಯಾಕ್ಸಿನ್ ಡಿಪೊ ಮೈದಾನದ ಬಳಿ ಸೋಮವಾರ ಮಹಾಮೇಳಾವ ಆಯೋಜಿಸಿದ್ದ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಅಧ್ಯಕ್ಷ ದೀಪಕ ದಳವಿ ಅವರ ಮುಖಕ್ಕೆ ಕನ್ನಡ ಸಂಘಟನೆ ಕಾರ್ಯಕರ್ತರು ಮಸಿ ಬಳಿದರು. 6

ಚಿನಕುರಳಿ
ಪ್ರಕಾಶ್ ಶೆಟ್ಟಿ



ಸಚಿವರಾದ ಈಶ್ವರಪ್ಪ, ಸುನಿಲ್ ಕುಮಾರ್ ದೃಢ ನುಡಿ

'ಲವ್ ಜಿಹಾದ್' ತಡೆಗೂ ಮಸೂದೆ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಮತಾಂತರ ನಿಷೇಧಕ್ಕೆ ತರಲು ಉದ್ದೇಶಿಸಿರುವ ಮಸೂದೆ ಚರ್ಚೆಗೆ ಗುರಿಯಾಗಿರುವ ಬೆನ್ನಲ್ಲೇ 'ಲವ್ ಜಿಹಾದ್' ತಡೆಗೂ ಮಸೂದೆಯೊಂದನ್ನು ಮಂಡಿಸಲು ಸರ್ಕಾರ ಮುಂದಾಗಿದೆ. ಸಚಿವರಾದ ಕೆ.ಎಸ್. ಈಶ್ವರಪ್ಪ ಮತ್ತು ವಿ. ಸುನಿಲ್ ಕುಮಾರ್ ಅವರು ವಿಧಾನ ಮಂಡಲದ ಅಧಿವೇಶನದ ಮೊದಲ ದಿನವೇ ಈ ಬಗ್ಗೆ ಹೇಳಿಕೆ ನೀಡಿದ್ದಾರೆ.

ಮತಾಂತರ ನಿಷೇಧ ಮಸೂದೆಯನ್ನು ಈ ಅಧಿವೇಶನದಲ್ಲಿ ಮಂಡಿಸಲು ರಾಜ್ಯ ಸರ್ಕಾರ ಸಿದ್ಧತೆ ನಡೆಸಿದೆ. ಈ ವಿಷಯ ಇನ್ನೂ ಸದನದ ಕಲಾಪ ಪಟ್ಟಿಯಲ್ಲಿ ಸೇರಿಲ್ಲ. 11 ಮಸೂದೆಗಳನ್ನು ಮಂಡಿಸುವುದಾಗಿ ಕಲಾಪ ಸಲಹಾ ಸಮಿತಿಯಲ್ಲಿ ತಿಳಿಸಿರುವ ಸರ್ಕಾರ, ಒಂಬತ್ತು ಮಸೂದೆಗಳ ಮಾಹಿತಿಯನ್ನು ಮಾತ್ರ ಹಂಚಿಕೊಂಡಿದೆ.

ಮತಾಂತರ ನಿಷೇಧ ಮಸೂದೆ ಜತೆಯಲ್ಲೇ 'ಲವ್ ಜಿಹಾದ್' ನಿಯಂತ್ರಣಕ್ಕೂ ಪ್ರತ್ಯೇಕ ಮಸೂದೆಯನ್ನು ಮಂಡಿಸುತ್ತೇವೆ ಎಂದು ಸಚಿವರು ಹೇಳಿದ್ದಾರೆ.

'ಎರಡೂ ಮಸೂದೆಗಳನ್ನು ಅಧಿವೇಶನದ ಕೊನೆಯ ಹಂತದಲ್ಲಿ ಮಂಡಿಸುವ ಸಾಧ್ಯತೆ ಇದೆ' ಎಂದು ಮೂಲಗಳು ಹೇಳಿವೆ.

ಸುದ್ದಿಗಾರರೊಂದಿಗೆ ಮಾತನಾಡಿದ ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, 'ಬಲವಂತದ ಮತಾಂತರ ಮತ್ತು ಲವ್ ಜಿಹಾದ್ ತಡೆಯಲು ನಾವು ಅಧಿಕಾರದಲ್ಲಿದ್ದಾಗ ಈ ಕಾನೂನು ಮಾಡದಿದ್ದರೆ ಹೇಗೆ? ನಮಗೆ ಬಹುಮತ ಇದೆ. ಎರಡೂ ಮಸೂದೆಗಳನ್ನು ಮಂಡಿಸುತ್ತೇವೆ' ಎಂದರು.

5ನೇ ಪುಟ ನೋಡಿ

ಮುಂದಿನ ವಾರ ಮತಾಂತರ ನಿಷೇಧ ಮಸೂದೆ?

ಮತಾಂತರವನ್ನು ನಿಷೇಧಿಸುವ ಉದ್ದೇಶಿಸಿದ ಮಸೂದೆಯನ್ನು ಮುಂದಿನವಾರ ಮಂಡಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ಮೂಲಗಳು ಹೇಳಿವೆ.

ಸರ್ಕಾರಿ ಕಾಮಗಾರಿಗಳ ಗುತ್ತಿಗೆಯಲ್ಲಿ ಶೇ 40ರಷ್ಟು ಲಂಚ, ಬಿಟ್ ಕಾಯಿನ್ ವಿಚಾರಗಳನ್ನು ಮುಂದಿನ ವಾರ ಪ್ರಸ್ತಾಪಿಸಿ, ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ವಿರೋಧ ಪಕ್ಷ ಕಾಂಗ್ರೆಸ್ ತಯಾರಿ ನಡೆಸಿದೆ. ಅದೇ ಹೊತ್ತಿಗೆ, ಮತಾಂತರ ನಿಷೇಧ ಮಸೂದೆ ಮಂಡಿಸಿ, ಚರ್ಚೆಯನ್ನು ಬೇರೆ ದಿಕ್ಕಿಗೆ ತಿರುಗಿಸುವ ಆಲೋಚನೆ ಸರ್ಕಾರದ್ದಾಗಿದೆ ಎಂದು ಮೂಲಗಳು ತಿಳಿಸಿವೆ.



ಕಾಶಿ ವಿಶ್ವನಾಥ ಧಾಮ ಯೋಜನೆಯ ಮೊದಲ ಹಂತದ ಕಾಮಗಾರಿಗಳ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಶಿವಲಿಂಗ ಅಭಿಷೇಕಕ್ಕಾಗಿ ಗಂಗಾಜಲವನ್ನು ತಂದರು –ಪಿಟಿಐ ಚಿತ್ರ

ವೇದ ಘೋಷ ಮಧ್ಯೆ ಕಾಶಿ ಧಾಮಕ್ಕೆ ಮೋದಿ ಚಾಲನೆ

ಪ್ರಜಾವಾಣಿ ವಾರ್ತೆ

ಲಖನೌ: ತಮ್ಮ ಲೋಕಸಭಾ ಕ್ಷೇತ್ರ ವಾರಾಣಸಿಯ ವ್ಯಾಪ್ತಿಯಲ್ಲಿರುವ ಕಾಶಿ ವಿಶ್ವನಾಥ ಧಾಮ ಯೋಜನೆಯ (ಕಾರಿಡಾರ್) ಮೊದಲ ಹಂತವನ್ನು ಪ್ರಧಾನಿ ನರೇಂದ್ರ ಮೋದಿ ಅವರು ವೇದಘೋಷಗಳ ಮಧ್ಯೆ ಸೋಮವಾರ ಉದ್ಘಾಟಿಸಿದರು. ಪಟ್ಟಣದ ಪ್ರಾಚೀನ ಭವ್ಯತೆಯನ್ನು ಅವರು ನೆನಪಿಸಿಕೊಂಡರು. ದೇಶದ ಪ್ರಾಚೀನ ಭವ್ಯತೆಯನ್ನು ಕಣ್ತುಂಬಿಕೊಳ್ಳುವ ಅವಕಾಶವನ್ನು ನವೀಕೃತ ದೇವಾಲಯವು ಭಕ್ತರಿಗೆ ನೀಡುತ್ತದೆ ಎಂದು ಹೇಳಿದರು.

ದೇಶದ ವಿವಿಧ ಭಾಗಗಳಿಂದ ಬಂದ ನೂರಾರು ಸಂತರ ಸಮ್ಮುಖದಲ್ಲಿ ಮೋದಿ ಅವರು ವಿವಿಧ ವಿಧಿ ವಿಧಾನಗಳನ್ನು ನೆರವೇರಿಸಿದರು. ಪ್ರಧಾನಿಯವರು ಪ್ರಸಿದ್ಧ ಕಾಲಭೈರವ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ಗಂಗಾ ನದಿಯಲ್ಲಿ ಮಿಂದು ಗಂಗಾಜಲವನ್ನು ತಂದರು. ಶಿವಲಿಂಗಕ್ಕೆ ಗಂಗಾಜಲದಲ್ಲಿ ಅಭಿಷೇಕ ಮಾಡಿದರು.

ಮೋದಿ ಅವರಿದ್ದ ವಾಹನ ಸಾಲು ಕಾಶಿ ವಿಶ್ವನಾಥ ಧಾಮದತ್ತ ಸಾಗುತ್ತಿದ್ದಂತೆಯೇ ರಸ್ತೆ ಬದಿಯಲ್ಲಿದ್ದ ಜನರು 'ಬಮ್ ಬಮ್ ಭೋಲೆ' ಘೋಷಣೆ ಕೂಗಿದರು. ಐದು ಲಕ್ಷ ಚದರ ಅಡಿ ಪ್ರದೇಶದಲ್ಲಿ ವ್ಯಾಪಿಸಿರುವ ಕಾಶಿ ವಿಶ್ವನಾಥ ಧಾಮವನ್ನು ಉದ್ಘಾಟಿಸಿದ ಬಳಿಕ ಮೋದಿ ಮಾತನಾಡಿದರು. ಪ್ರಾಚೀನ ಮತ್ತು ಆಧುನಿಕತೆಯ ಸಂಗಮದಂತೆ ಈ ಧಾಮವು ಇದೆ ಎಂದು ಅವರು ಬಣ್ಣಿಸಿದರು.

ತಮ್ಮ ವಿವೇಕದ ಮೂಲಕ ಜಗತ್ತಿನ ತಿಳಿವಳಿಕೆ ಹೆಚ್ಚಿಸಿದ ಹಲವು ಮೇರು ವ್ಯಕ್ತಿಗಳು ಕಾಶಿಯಲ್ಲಿ ನೆಲೆಯಾಗಿದ್ದರು. 'ಕಾಶಿಯು ಹಲವು ಏರಿಳಿತಗಳನ್ನು ಕಂಡಿದೆ. ಔರಂಗಜೇಬನಂತಹ (ಮೊಘಲ್ ದೊರೆ) ವ್ಯಕ್ತಿಗಳು ನಮ್ಮ ಸಂಸ್ಕೃತಿಯನ್ನು ಕೊಲ್ಲಲು ಯತ್ನಿಸಿದ್ದಾರೆ. ಶಿವಾಜಿಯಂತಹ ಜನರು ಅದನ್ನು ರಕ್ಷಿಸಿದ್ದಾರೆ' ಎಂದು ಮೋದಿ ಹೇಳಿದರು.

ಕಾಶಿಯನ್ನು ನಾಶಪಡಿಸುವ ಪ್ರಯತ್ನಗಳು ನಡೆದಿದ್ದರೂ ನಗರವು ಅದನ್ನು ಜೀರ್ಣಿಸಿಕೊಂಡು ಬಂದಿದೆ. ತನ್ನ ಸಮೃದ್ಧ ಸಂಸ್ಕೃತಿಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ ಎಂದರು. ಕಾಶಿ ವಿಶ್ವನಾಥ ಧಾಮ ಯೋಜನೆಗೆ ಮೋದಿ ಅವರು 2019ರ ಮಾರ್ಚ್‌ನಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದರು.

ಯೋಜನೆಗೆ ಸಂಬಂಧಿಸಿ ಕೆಲವು ವಿವಾದಗಳೂ ಸೃಷ್ಟಿಯಾಗಿದ್ದವು. ದೇವಾಲಯದ ನವೀಕರಣಕ್ಕಾಗಿ ಕೆಲವು ಅಂಗಡಿಗಳು ಮತ್ತು ಮನೆಗಳನ್ನು ನೆಲಸಮ ಮಾಡಲಾಗಿತ್ತು. ಕೆಲವರು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರು. ಪ್ರಾಚೀನವಾದ ನೂರಾರು ಸಣ್ಣ ದೇವಾಲಯಗಳನ್ನೂ ನಾಶ ಮಾಡಲಾಗಿದೆ.

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಕೆಲವೇ ತಿಂಗಳು ಮೊದಲು ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ದೇಶದ ವಿವಿಧ ಭಾಗಗಳಿಂದ ನೂರಾರು ಸಂತರನ್ನು ಕರೆಸಿಕೊಳ್ಳಲಾಗಿದೆ. ಉತ್ತರ ಪ್ರದೇಶದ ಸಚಿವ ಸಂಪುಟದ ಸಭೆ ಕೂಡ ಇಲ್ಲಿಯೇ ನಡೆಯಲಿದೆ. ಬಿಜೆಪಿ ಆಳ್ವಿಕೆ ಇರುವ ರಾಜ್ಯಗಳ ಮುಖ್ಯಮಂತ್ರಿಗಳು ವಾರಾಣಸಿಯಲ್ಲಿ ಮಂಗಳವಾರ ಸಭೆ ಸೇರಲಿದ್ದಾರೆ.

ಇನ್ನಷ್ಟು ಸುದ್ದಿಗಳು 11

ಪರಿಷತ್: ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಮತ ಎಣಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ವಿಧಾನ ಪರಿಷತ್ ಸದಸ್ಯರ ಆಯ್ಕೆಗಾಗಿ ನಡೆದ ಚುನಾವಣೆಯ ಮತ ಎಣಿಕೆ ಕಾರ್ಯ ಮಂಗಳವಾರ ನಗರದ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ನಡೆಯಲಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಹಾಗೂ ಚುನಾವಣಾಧಿಕಾರಿ ಜೆ.ಮಂಜುನಾಥ್ ತಿಳಿಸಿದರು.

ಮತಪೆಟ್ಟಿಗೆಗಳನ್ನು ಮತ ಎಣಿಕಾ ಕೇಂದ್ರದ ಭದ್ರತಾ ಕೊಠಡಿಯಲ್ಲಿ ಇರಿಸಲಾಗಿದೆ. ಮಂಗಳವಾರ ಬೆಳಿಗ್ಗೆ 7.30ಕ್ಕೆ ಅಭ್ಯರ್ಥಿಗಳ ಹಾಗೂ ಚುನಾವಣಾ ವೀಕ್ಷಕರ ಸಮಕ್ಷಮದಲ್ಲಿ ಭದ್ರತಾ ಕೊಠಡಿಯನ್ನು ತೆರೆಯಲಾಗುವುದು ಎಂದು ತಿಳಿಸಿದ್ದಾರೆ.

ಮತ ಎಣಿಕಾ ಕೊಠಡಿಯಲ್ಲಿ ಒಟ್ಟು ಏಳು ಟೇಬಲ್‌ಗಳನ್ನು ಜೋಡಿಸಲಾಗಿದ್ದು, ಪ್ರತಿ ಟೇಬಲ್‌ಗೆ ಇಬ್ಬರು ಚುನಾವಣಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅಭ್ಯರ್ಥಿ ಪರ ಒಬ್ಬ ಏಜೆಂಟ್‌ಗೆ ಅವಕಾಶ ಕಲ್ಪಿಸಲಾಗಿದೆ. ಕೋವಿಡ್ ನಿಯಮಗಳ ಕಟ್ಟುನಿಟ್ಟಿನ ಪಾಲನೆಯೊಂದಿಗೆ ಮತ ಎಣಿಕಾ ಕಾರ್ಯ ನಡೆಯಲಿದೆ ಎಂದು ಮಾಹಿತಿ ನೀಡಿದ್ದಾರೆ.

ಮತಪೆಟ್ಟಿಗೆಯಿಂದ ಎಲ್ಲ ಮತಪತ್ರಗಳನ್ನು ಹೊರತೆಗೆದು ವೀಕ್ಷಕರ ಹಾಗೂ ಏಜೆಂಟರ ಮುಂದೆಯೇ ತಲಾ 25 ಮತಪತ್ರಗಳ ಕಟ್ಟುಗಳನ್ನು ರಚಿಸಿ ದೊಡ್ಡ ಪಾತ್ರೆಯಲ್ಲಿ ಮಿಶ್ರ ಮಾಡಲಾಗುತ್ತದೆ. ಒಟ್ಟು 2070 ಮತಗಳು ಚಲಾವಣೆಯಾಗಿದ್ದು, ಪ್ರತಿ ಟೇಬಲ್‌ಗೆ ತಲಾ 300 ಮತಪತ್ರಗಳನ್ನು ಎಣಿಕೆಗೆ ಹಂಚಿಕೆ ಮಾಡಲಾಗುವುದು. ಸಿಂಧು ಮತ್ತು ಅಸಿಂಧು ಮತಪತ್ರಗಳನ್ನು ಬೇರ್ಪಡಿಸಲಾಗುವುದು. ನಂತರ, ಸಿಂಧು ಮತಪತ್ರಗಳನ್ನು ಆದ್ಯತೆ ಆಧಾರದಲ್ಲಿ ಎಣಿಸಲಾಗುವುದು ಎಂದು ತಿಳಿಸಿದರು.

ಪರಿಷತ್ ಚುನಾವಣೆ: ಫಲಿತಾಂಶ ತಡೆ ತೆರವು

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಸದಸ್ಯರ ಆಯ್ಕೆಗಾಗಿ ನಡೆದ ಚುನಾವಣೆಯ ಫಲಿತಾಂಶ ಪ್ರಕಟಿಸಲು ಇದ್ದ ಅಡ್ಡಿಯನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ನಿವಾರಿಸಿದೆ. 'ಚುನಾವಣಾ ಫಲಿತಾಂಶವು ರಿಟ್ ಅರ್ಜಿಯ ಅಂತಿಮ ತೀರ್ಪಿಗೆ ಒಳಪಟ್ಟಿರಲಿದೆ' ಎಂದು ಸ್ಪಷ್ಟಪಡಿಸಿದೆ.

'ಬೆಂಗಳೂರು ನಗರ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಸದಸ್ಯರ ಆಯ್ಕೆಗಾಗಿ ನಡೆದ ಚುನಾವಣಾ ಫಲಿತಾಂಶವನ್ನು ನ್ಯಾಯಾಲಯದ ಅನುಮತಿ ಇಲ್ಲದೆ ಪ್ರಕಟಿಸಬಾರದು' ಎಂಬ ಏಕಸದಸ್ಯ ನ್ಯಾಯಪೀಠದ ಮಧ್ಯಂತರ ಆದೇಶ ನೀಡಿತ್ತು. ಇದನ್ನು ಪ್ರಶ್ನಿಸಿ ಕೇಂದ್ರ ಚುನಾವಣಾ ಆಯೋಗ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಈ ಆದೇಶ ನೀಡಿದೆ.

ಕೇಂದ್ರ ಚುನಾವಣಾ ಆಯೋಗದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ ವಾದ ಮಂಡಿಸಿ, 'ಏಕಸದಸ್ಯ ನ್ಯಾಯಪೀಠದ ಮಧ್ಯಂತರ ಆದೇಶದಿಂದ ಚುನಾವಣಾ ಪ್ರಕ್ರಿಯೆಗೆ ಅಡ್ಡಿಯಾಗಿದೆ. ಪುರಸಭೆಗಳ 15 ನಾಮನಿರ್ದೇಶಿತ ಸದಸ್ಯರು ಪುರಸಭೆಯ ಮೀಟಿಂಗ್‌ಗಳಲ್ಲಿ ಮತ ಚಲಾಯಿಸಲು ಸಂವಿಧಾನದ ವಿಧಿ ನಿರ್ಬಂಧ ವಿಧಿಸುತ್ತವೆಯೇ ಹೊರತು ಪರಿಷತ್ ಚುನಾವಣೆಗಲ್ಲ' ಎಂದು ವಿವರಿಸಿದರು.

'ಇದೇ ಸದಸ್ಯರು 2015ರ ವಿಧಾನ ಪರಿಷತ್ ಚುನಾವಣೆಯಲ್ಲಿಯೂ ಮತ ಚಲಾಯಿಸಿರುವ ಕಾರಣ ಏಕಸದಸ್ಯ ನ್ಯಾಯಪೀಠದ ಮಧ್ಯಂತರ ಆದೇಶ ತೆರವು ಮಾಡಬೇಕು' ಎಂದು ಕೋರಿದರು.

ಇದನ್ನು ಪರಿಗಣಿಸಿದ ವಿಭಾಗೀಯ ಪೀಠ, ಏಕಸದಸ್ಯ ನ್ಯಾಯಪೀಠ ನೀಡಿದ್ದ ಮಧ್ಯಂತರ ಆದೇಶವನ್ನು ತೆರವುಗೊಳಿಸಿತು. ಅರ್ಜಿಯ ಅಂತಿಮ ತೀರ್ಪಿಗೆ ಚುನಾವಣಾ ಫಲಿತಾಂಶ ಒಳಪಟ್ಟಿರಲಿದೆ ಎಂದು ಸ್ಪಷ್ಟಪಡಿಸಿತು.

'ಉಸ್ತುವಾರಿ ಬದಲಿಸಿ'

ಬಳ್ಳಾರಿ: 'ಪರಿಸರ ಮತ್ತು ಪ್ರವಾಸೋದ್ಯಮ ಖಾತೆ ಸಚಿವ ಆನಂದ್‌ಸಿಂಗ್ ಅವರಿಗೆ ನೀಡಿರುವ ಬಳ್ಳಾರಿ ಜಿಲ್ಲಾ ಉಸ್ತುವಾರಿಯನ್ನು ಬದಲಾವಣೆ ಮಾಡದಿದ್ದರೆ ಜನವರಿ ತಿಂಗಳಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಸತ್ಯಾಗ್ರಹ ನಡೆಸುತ್ತೇನೆ' ಎಂದು ನಗರದ ಶಾಸಕ ಗಾಲಿ ಸೋಮಶೇಖರರೆಡ್ಡಿ ಎಚ್ಚರಿಕೆ ನೀಡಿದ್ದಾರೆ.

ರಾಜ್ಯ ರಸ್ತೆ ಸಾರಿಗೆ ನೌಕರರ ಧರಣಿ ಇಂದು

ಬೆಂಗಳೂರು: '6ನೇ ವೇತನ ಆಯೋಗದ ಶಿಫಾರಸುಗಳ ಅನ್ವಯ ವೇತನ ಪರಿಷ್ಕರಣೆ, ಇತರ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಇದೇ 14ರಂದು ಧರಣಿ ನಡೆಸುತ್ತೇವೆ' ಎಂದು ರಾಜ್ಯ ರಸ್ತೆ ಸಾರಿಗೆ ನೌಕರರ ಪ್ರಧಾನ ಕಾರ್ಯದರ್ಶಿ ಬಿ. ಜಯದೇವರಾಜ ಅರಸು ತಿಳಿಸಿದರು.


ನಗರದಲ್ಲಿ ಇಂದು

ಮಹರ್ಷಿ ಅರವಿಂದರ ಜನ್ಮದಿನ ಹಾಗೂ ಛಾಯಾಚಿತ್ರ ಪ್ರದರ್ಶನ: ಅತಿಥಿಗಳು–ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕಿ ಎನ್. ಮಂಜುಳಾ, ಅಧ್ಯಕ್ಷತೆ–ಅಜಿತ್ ಸಬ್ನಿಸ್, ಆರ್.ವಿ.ಜಹಾಗೀರದಾರ್, ಆಯೋಜನೆ–ಶ್ರೀಅರವಿಂದೋ ಸೊಸೈಟಿ, ಸ್ಥಳ–ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30ರಿಂದ ಸಂಜೆ 7 (ಡಿ.16ರವರೆಗೆ ಪ್ರದರ್ಶನ ಇರಲಿದೆ)

'ಇಂಧನ ಸಂರಕ್ಷಣೆ ಜಾಗೃತಿ' ಕುರಿತು ವಿಚಾರ ಸಂಕಿರಣ: ರಂಗಾ ರೆಡ್ಡಿ, ಅತಿಥಿಗಳು–ನಾರಾಯಣ ರಾವ್ ಆರ್. ಮಾನೆ, ರಾಮಮೂರ್ತಿ, ಆಯೋಜನೆ–ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸ್ಥಳ–ಸಮ್ಮೇಳನ ಸಭಾಂಗಣ, ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಎನ್‌ಎಂಐಟಿ), ಬನಶಂಕರಿ 2ನೇ ಹಂತ, ಬೆಳಿಗ್ಗೆ 10.30

'ಸಮಗ್ರ ಪೋಷಕಾಂಶಗಳ ನಿರ್ವಹಣೆ' ತರಬೇತಿ ಸಮಾರೋಪ: ಉದ್ಘಾಟನೆ–ಎನ್.ಬಿ.ಪ್ರಕಾಶ್, ಅತಿಥಿಗಳು–ಆರ್. ಶ್ರೀಧರ್, ಎಚ್.ಸಿ.ಪ್ರಕಾಶ್, ಅಧ್ಯಕ್ಷತೆ–ಎನ್.ದೇವಕುಮಾರ್, ಆಯೋಜನೆ–ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ–ಬಾಬು ರಾಜೇಂದ್ರ ಪ್ರಸಾದ್, ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಮಧ್ಯಾಹ್ನ 2

'ಬಾಪೂ' ಬಹುಮಾಧ್ಯಮ ರಂಗಪ್ರಸ್ತುತಿ: ರಚನೆ ಮತ್ತು ನಿರ್ದೇಶನ–ಎನ್.ಎಸ್. ಶಂಕರ್, ಅತಿಥಿಗಳು–ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ಸಿನಿಮಾ ನಿರ್ದೇಶಕ ಗಿರೀಶ್ ಕಾಸರವಳ್ಳಿ, ಆಯೋಜನೆ–ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸ್ಥಳ–ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 6.30



ಗಿರೀಶ್ ಕಾಸರವಳ್ಳಿ

ರೈಲು ಹತ್ತಲು ವಿಮಾನ ಪ್ರಯಾಣಿಕರ ನಿರಾಸಕ್ತಿ • ಲಗೇಜುಗಳನ್ನು ಹೊತ್ತು 3– 4 ವಾಹನ ಏರುವ ತಾಪತ್ರಯ • ದಿನಕ್ಕೆ ಎರಡೇ ರೈಲು ಸಂಚಾರ

ವಿಮಾನ ನಿಲ್ದಾಣ: ರೈಲು ನಿಲುಗಡೆ ತಾಣ ಭಣ ಭಣ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಅತೀ ಕಡಿಮೆ ದರ ಮತ್ತು ಕಡಿಮೆ ಸಮಯದಲ್ಲಿ ವಿಮಾನ ನಿಲ್ದಾಣಕ್ಕೆ ಪ್ರಯಾಣ ಸೌಕರ್ಯ ಕಲ್ಪಿಸಲು ನಿರ್ಮಾಣ ಮಾಡಿದ ರೈಲು ನಿಲುಗಡೆ ತಾಣ ಪ್ರಯಾಣಿಕರಿಲ್ಲದೆ ಭಣಗುಡುತ್ತಿದೆ. ಕೆಲವೊಂದು ಸೇವಾ ನ್ಯೂನತೆಗಳಿಂದಾಗಿ ಪ್ರಯಾಣಿಕರು ಈ ಸೌಕರ್ಯ ಬಳಕೆಗೆ ನಿರಾಸಕ್ತಿ ತೋರಿಸುತ್ತಿದ್ದಾರೆ. ₹3 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ತಾಣವೀಗ ಉಪಯೋಗಕ್ಕೆ ಬಾರದಂತಾಗಿದೆ.

ದೇವನಹಳ್ಳಿ ಸಮೀಪ ರಾಷ್ಟ್ರೀಯ ಹೆದ್ದಾರಿ ಬಳಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಆರಂಭವಾದ ನಂತರ ಬಳ್ಳಾರಿ ರಸ್ತೆಯಲ್ಲಿ ಸಂಚಾರದ ದಟ್ಟಣೆ ಬಗೆಹರಿಯದ ಸಮಸ್ಯೆಯಾಗಿದೆ. ವಿಮಾನ ಪ್ರಯಾಣಿಕರು, ವಿಮಾನ ನಿಲ್ದಾಣ ಮತ್ತು ಕಾರ್ಗೊ ಟರ್ಮಿನಲ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಸೇರಿ ನಿತ್ಯ ಸರಾಸರಿ 1.30 ಲಕ್ಷ ಜನ ನಗರದಿಂದ ವಿಮಾನ ನಿಲ್ದಾಣಕ್ಕೆ ಪ್ರಯಾಣಿಸುತ್ತಾರೆ. ಇವರೆಲ್ಲರೂ ಮೆಜೆಸ್ಟಿಕ್‌ನಿಂದ ವಿಮಾನ ನಿಲ್ದಾಣ ತಲುಪಲು ಗಂಟೆಗಟ್ಟಲೆ ಪ್ರಯಾಣಿಸುವುದು ಅನಿವಾರ್ಯವಾಗಿದೆ.

ಈ ನಡುವೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮತ್ತೊಂದು ರನ್‌ವೇ ಸಿದ್ಧಗೊಳ್ಳುತ್ತಿದೆ. ಇಲ್ಲಿಗೆ ಬಂದು ಹೋಗುವ ವಿಮಾನಗಳ ಸಂಖ್ಯೆ, ಪ್ರಯಾಣಿಕರ ಸಂಖ್ಯೆ ಭವಿಷ್ಯದಲ್ಲಿ ಇನ್ನಷ್ಟು ಹೆಚ್ಚಾಗಲಿವೆ. ಆದರೆ, ಸಂಚಾರ ದಟ್ಟಣೆ ಸೀಳಿಕೊಂಡು ಬೆಂಗಳೂರಿನಿಂದ ವಿಮಾನ ನಿಲ್ದಾಣ ತಲುಪುವುದೇ ಸಾಹಸದ ಕೆಲಸ. ಬಿಎಂಟಿಸಿ ಬಸ್‌ಗಳು ಅಥವಾ ಕ್ಯಾಬ್‌ಗಳಲ್ಲಿ ದುಬಾರಿ ದರ ಪಾವತಿಸಿ ಪ್ರಯಾಣಿಸಬೇಕಾದ ಸ್ಥಿತಿ ಇದೆ.

ಈ ಸಮಸ್ಯೆಗೆ ಪರಿಹಾರ ಆಗಲಿದೆ ಎಂಬ ನಿರೀಕ್ಷೆಯಲ್ಲಿ ರೈಲು ನಿಲುಗಡೆ ತಾಣವನ್ನು ವಿಮಾನ ನಿಲ್ದಾಣದ ಬಳಿ ನಿರ್ಮಾಣ ಮಾಡಲಾಗಿತ್ತು. ₹10 ರಿಂದ ₹15 ವೆಚ್ಚದಲ್ಲಿ ನಗರದಿಂದ ವಿಮಾನ ನಿಲ್ದಾಣ ತಲುಪಬಹುದಾದ ರೈಲು ಸೌಕರ್ಯವನ್ನು ನೈರುತ್ಯ ರೈಲ್ವೆ ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಬಿಐಎಎಲ್) ಸೇರಿ ನಿರ್ಮಿಸಿದ್ದವು.

‘ಬೆಂಗಳೂರು–ದೇವನಹಳ್ಳಿ ನಡುವೆ ವಿಮಾಣ ನಿಲ್ದಾಣದ ಮಗ್ಗುಲಿನಲ್ಲೇ ಹಾದು ಹೋಗುವ ರೈಲು ಮಾರ್ಗದಲ್ಲಿ 2021ರ ಜ.4ರಿಂದ ಈ ನಿಲುಗಡೆ ತಾಣ ಕಾರ್ಯಾಚರಿಸುತ್ತಿದೆ. ಆರಂಭದ ಒಂದೆರಡು ದಿನ ರೈಲು ಸೇವೆಯನ್ನು ಬಳಸಿಕೊಂಡ ಪ್ರಯಾಣಿಕರು, ಈಗ ಅಷ್ಟಾಗಿ ಆಸಕ್ತಿ ತೋರಿಸುತ್ತಿಲ್ಲ. ಒಬ್ಬ ಪ್ರಯಾಣಿಕರೂ ಇಲ್ಲದ ಮತ್ತು ಇಡೀ ರೈಲಿನಲ್ಲಿ ಒಬ್ಬ ಪ್ರಯಾಣಿಕರೊಂದಿಗೆ ಕಾರ್ಯಾಚರಣೆ ಮಾಡಿರುವ ಉದಾಹರಣೆಗಳೂ ಇವೆ’ ಎಂದು ರೈಲ್ವೆ ಇಲಾಖೆ ಅಧಿಕಾರಿಗಳು ಬೇಸರ ವ್ಯಕ್ತಪಡಿಸುತ್ತಾರೆ.

ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾದ ಬಳಿಕವೂ ರೈಲು ಪ್ರಯಾಣಿಕರ ಸಂಖ್ಯೆ ಜಾಸ್ತಿಯಾಗಿಲ್ಲ. ಪ್ರಯಾಣಿಕರ ಕೊರತೆ ಇರುವುದರಿಂದ ಸದ್ಯ ಎರಡು ರೈಲುಗಳು ಮಾತ್ರ ಈ ಮಾರ್ಗದಲ್ಲಿ ಸಂಚರಿಸುತ್ತಿವೆ.

‘ವಿಶ್ವಾಸಾರ್ಹತೆ ಮೂಡಿಸಬೇಕು’


ಅಭಿಷೇಕ್


‘ರೈಲಿನಲ್ಲಿ ಹೋದರೆ ಸಮಯಕ್ಕೆ ಸರಿಯಾಗಿ ತಲುಪುತ್ತೇನೆ ಎಂಬ ವಿಶ್ವಾಸಾರ್ಹತೆಯನ್ನು ರೈಲ್ವೆ ಇಲಾಖೆ ಜನರಲ್ಲಿ ಮೂಡಿಸಬೇಕಿದೆ’ ಎಂದು ರೈಲ್ವೆ ಹೋರಾಟಗಾರ ಅಭಿಷೇಕ್ ಹೇಳಿದರು.

ನಗರದ ರೈಲು ನಿಲ್ದಾಣ ಮಾತ್ರವಲ್ಲ ಮೈಸೂರಿನಿಂದ ನಗರಕ್ಕೆ ಬರುವ ರೈಲೂ ವಿಮಾನ ನಿಲ್ದಾಣದವರೆಗೆ ಹೋಗಿ ಬರುವ ವ್ಯವಸ್ಥೆ ಮಾಡಬೇಕು. ವಿಮಾನ ನಿಲ್ದಾಣದಲ್ಲಿ ರೈಲಿನ ವ್ಯವಸ್ಥೆ ಬಗ್ಗೆ ಮಾಹಿತಿ ಫಲಕಗಳನ್ನು ಅಳವಡಿಸಬೇಕು ಎಂದು ಸಲಹೆ ನೀಡಿದರು.

₹3 ಕೋಟಿ ರೈಲು ನಿಲುಗಡೆ ತಾಣಕ್ಕೆ ಖರ್ಚಾದ ಹಣ

2 ಈ ನಿಲುಗಡೆ ತಾಣದಲ್ಲಿ ನಿಲ್ಲುವ ರೈಲುಗಳ ಸಂಖ್ಯೆ

₹15 ಸಂಗೊಳ್ಳಿ ರಾಯಣ್ಣ ನಗರ ರೈಲು ನಿಲ್ದಾಣದಿಂದ ವಿಮಾನ ನಿಲ್ದಾಣಕ್ಕೆ ಇರುವ ಪ್ರಯಾಣದರ


ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿಯ ರೈಲು ನಿಲುಗಡೆ ತಾಣ –ಪ್ರಜಾವಾಣಿ ಚಿತ್ರ

‘ಸಮಯಕ್ಕೆ ಸರಿಯಾಗಿ ತಲುಪುವ ಖಾತ್ರಿ ಇಲ್ಲ’


ಕೃಷ್ಣ ಪ್ರಸಾದ್

ರೈಲು ಪ್ರಯಾಣಕ್ಕೆ ಜನ ಆಸಕ್ತಿ ತೋರಿಸದಿರಲು ಹಲವು ಕಾರಣಗಳಿವೆ. ಮನೆಯಿಂದ ರೈಲು ನಿಲ್ದಾಣಗಳಿಗೆ ಬೇರೆ ವಾಹನಗಳಲ್ಲಿ ಹೋಗಬೇಕು. ತಮ್ಮ ಬ್ಯಾಗ್‌ಗಳನ್ನು ಹೊತ್ತು ಪ್ಲಾಟ್‌ಫಾರಂಗೆ ಹೋಗಬೇಕು. ನಿರ್ದಿಷ್ಟ ಸಮಯಕ್ಕೆ ರೈಲು ಬರುವ ಖಾತ್ರಿ ಇಲ್ಲ. ರೈಲು ಬರುವುದು ವಿಳಂಬವಾಗಿ ವಿಮಾನ ನಿಲ್ದಾಣಕ್ಕೆ ಹೋಗುವುದು ತಡವಾದರೆ ಆಗಲಿರುವ ತೊಂದರೆಯನ್ನೂ ಪ್ರಯಾಣಿಕರು ಲೆಕ್ಕಾಚಾರ ಮಾಡುತ್ತಾರೆ.

‘ಸಮಯಕ್ಕೆ ಸರಿಯಾಗಿ ರೈಲು ಬಂದರೂ ರೈಲು ಇಳಿದ ಕೂಡಲೇ ವಿಮಾನ ನಿಲ್ದಾಣದೊಳಗೆ ಹೋಗುವ ಅವಕಾಶ ಇಲ್ಲ. ವಿಮಾನ ನಿಲ್ದಾಣಕ್ಕೆ ಹೋಗಲು ಬಿಐಎಎಲ್ ವ್ಯವಸ್ಥೆ ಮಾಡಿರುವ ಬಸ್‌ಗಳನ್ನು ಬಳಸಬೇಕು. ತಮ್ಮ ಸರಕು–ಸರಂಜಾಮುಗಳನ್ನು ಹೊತ್ತು ಮೂರ್ನಾಲ್ಕು ಬಾರಿ ಬಸ್ ಮತ್ತು ರೈಲು ಹತ್ತಿ–ಇಳಿಯುವಷ್ಟು ತಾಳ್ಮೆ ಮತ್ತು ಶ್ರಮ ವಹಿಸಲು ಪ್ರಯಾಣಿಕರು ಬಯಸುವುದಿಲ್ಲ’ ಎನ್ನುತ್ತಾರೆ ರೈಲ್ವೆ ಹೋರಾಟಗಾರ ಕೃಷ್ಣ ಪ್ರಸಾದ್.

‘ವಿಮಾನ ಪ್ರಯಾಣದಿಂದ ಆಯಾಸ ಆಗಿದ್ದವರು ಬೇಗ ಮನೆ ಸೇರಿಕೊಳ್ಳಬೇಕು ಎಂದು ಬಯಸುತ್ತಾರೆ. ಸುತ್ತು ಬಳಸು ಹಾದಿಯನ್ನು ಯಾರೂ ಒಪ್ಪುವುದಿಲ್ಲ. ಆದ್ದರಿಂದ ರೈಲು ಪ್ರಯಾಣಕ್ಕೆ ಜನ ಆಸಕ್ತಿ ತೋರಿಸುತ್ತಿಲ್ಲ’ ಎನ್ನುತ್ತಾರೆ ಅವರು.

ವಿಮಾನ ನಿಲ್ದಾಣಕ್ಕೆ ಬರುವ ಸಿಬ್ಬಂದಿ ಮೂರು ಪಾಳಿಯಲ್ಲಿ ಕೆಲಸ ಮಾಡುತ್ತಾರೆ. ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ಹೋಗಬೇಕಿರುವುದರಿಂದ ರೈಲು ನಿಲ್ದಾಣಕ್ಕೆ ಹೋಗಿ ಕಾದು ಕುಳಿತುಕೊಳ್ಳುವಷ್ಟು ತಾಳ್ಮೆ ಇರುವುದಿಲ್ಲ. ಆದ್ದರಿಂದಲೇ ಸಿಬ್ಬಂದಿ ಕೂಡ ರೈಲು ಪ್ರಯಾಣ ಬಳಸುತ್ತಿಲ್ಲ ಎಂದು ಅವರು ವಿಶ್ಲೇಷಿಸುತ್ತಾರೆ.

‘ವಿಮಾನ ನಿಲ್ದಾಣಕ್ಕೇ ಮೀಸಲಾದ ಪ್ರತ್ಯೇಕ ಮಾರ್ಗ ನಿರ್ಮಾಣವಾಗಬೇಕು. ರೈಲು ಇಳಿದು ಬಸ್ ಹತ್ತಿ ಹೋಗುವ ವ್ಯವಸ್ಥೆ ಇರಬಾರದು. ಈಗಿರುವ ಮಾರ್ಗವನ್ನು ವಿದ್ಯುತ್ ಆಧಾರಿತ ಜೋಡಿ ಮಾರ್ಗವಾಗಿ ಪರಿವರ್ತಿಸಬೇಕು. ಮೆಟ್ರೊ ರೈಲಿನಂತೆ ಕ್ಷಣ ಕ್ಷಣಕ್ಕೂ ರೈಲುಗಳ ವ್ಯವಸ್ಥೆ ಕಲ್ಪಿಸಬೇಕು. ಉಪನಗರ ರೈಲು ಯೋಜನೆಯಲ್ಲಿ ಈ ಮಾರ್ಗವನ್ನು ಆದ್ಯತೆಯಾಗಿ ಪರಿಗಣಿಸಬೇಕು’ ಎಂದು ಅವರು ಸಲಹೆ ನೀಡಿದರು.

ಸಮಯ ಪರಿಪಾಲನೆ ಮಾಡಿ: ಸಲಹೆ

ಪ್ರಯಾಣಿಕರನ್ನು ಸೆಳೆಯಲು ವಿಮಾನ ನಿಲ್ದಾಣ ಪ್ರಾಧಿಕಾರ ಮತ್ತು ರೈಲ್ವೆ ಇಲಾಖೆ ಒಟ್ಟಾಗಿ ಕಾರ್ಯತಂತ್ರ ರೂಪಿಸಬೇಕು ಎಂಬುದು ರೈಲ್ವೆ ಹೋರಾಟಗಾರರ ಸಲಹೆ.

ರೈಲು ಹೊರಡುವ ಮತ್ತು ತಲುಪುವ ಸಮಯ ಮತ್ತು ನಿಲ್ದಾಣವನ್ನು ಆಗಾಗ ಬದಲಿಸಬಾರದು. ಆಗ ಪ್ರಯಾಣಿಕರ ಸಂಖ್ಯೆ ಹೆಚ್ಚಳ ಆಗಬಹುದು ಎನ್ನುತ್ತಾರೆ. ‘ವಿಮಾನ ನಿಲ್ದಾಣ ಸಿಬ್ಬಂದಿಗೆ ಮಾಸಿಕ ಪಾಸ್ ವಿತರಣೆ ಬಗ್ಗೆ ಆಲೋಚಿಸಬೇಕು. ಆದರೆ, ಅವರು ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಹಾಜರಾಗಬೇಕಿರುವ ಕಾರಣ ಯಾವುದೇ ಕಾರಣಕ್ಕೂ ಪ್ರಯಾಣ ವಿಳಂಬ ಆಗದಂತೆ ಸಮಯ ಪರಿಪಾಲನೆ ಮಾಡಬೇಕು. ಸಂಪೂರ್ಣ ಮಾರ್ಗವನ್ನು ವಿದ್ಯುದೀಕರಣಗೊಳಿಸಿ ಮೈಸೂರು, ಹೊಸೂರು, ವೈಟ್‌ಫೀಲ್ಡ್, ತುಮಕೂರು, ಕೆಎಸ್‌ಆರ್ ರೈಲು ನಿಲ್ದಾಣ, ಯಶವಂತಪುರ ನಿಲ್ದಾಣಗಳಿಂದಲೂ ಮೆಮು ರೈಲುಗಳ ಸಂಚಾರ ಆರಂಭಿಸಬೇಕು. ಅದರಲ್ಲಿ ಹವಾನಿಯಂತ್ರಿತ ಬೋಗಿಗಳೂ ಇರುವಂತೆ ನೋಡಿಕೊಳ್ಳಬೇಕು’ ಎಂಬುದು ಅವರ ಸಲಹೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕಾಣೆಯಾಗಿದ್ದಾರೆ



ಶ್ರೀಮತಿ ಮಹಾದೇವಮ್ಮ, 62 ವರ್ಷ
5.2 ಅಡಿ ಎತ್ತರ, ಎಣ್ಣೆಗೆಂಪು ಮೈಬಣ್ಣ, ಸಾದಾರಣ ಶರೀರ, ಗುಂಡುಮುಖ, ಕನ್ನಡ. ತಮಿಳು, ಹಿಂದಿ ಮಾತನಾಡುತ್ತಾರೆ. ಇಂಗ್ಲೀಷ್ ಓದಲು ಬರುತ್ತದೆ. ನೀಲಿ ಬಣ್ಣದ ರೇಷ್ಮೆ ಸೀರೆ ಮತ್ತು ನೇರಳೆ ಬಣ್ಣದ ರವಿಕೆ ಧರಿಸಿರುತ್ತಾರೆ. ಡಿಸೆಂಬರ್ 12–2021 ರಂದು ಬೆಳಿಗ್ಗೆ ಮಂಡ್ಯದಿಂದ ಕಾಣೆಯಾಗಿರುತ್ತಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಸಂಪರ್ಕಿಸಿ: **9886869000, 9845643645** ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ.

‘ಅಟಲ್ ಪಿಂಚಣಿ: 2.77 ಲಕ್ಷ ಮಂದಿಗೆ ಸವಲತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಟಲ್ ಪಿಂಚಣಿ ಯೋಜನೆಯಡಿ 2021–22ನೇ ಸಾಲಿನಲ್ಲಿ 6.33 ಲಕ್ಷ ಫಲಾನುಭವಿಗಳನ್ನು ತಲುಪುವ ಗುರಿ ನಿಗದಿಪಡಿಸಲಾಗಿದೆ. ನವೆಂಬರ್ ಅಂತ್ಯದ ವೇಳೆಗೆ ರಾಜ್ಯದಲ್ಲಿ 2.77 ಲಕ್ಷ ಮಂದಿಗೆ ಮಾತ್ರ ಸವಲತ್ತು ಒದಗಿಸಲಾಗಿದೆ’ ಎಂದು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಪಿಎಫ್‌ಆರ್‌ಡಿಎ) ಕಾರ್ಯನಿರ್ವಾಹಕ ನಿರ್ದೇಶಕ ಅನಂತ ಗೋಪಾಲ್‌ದಾಸ್ ತಿಳಿಸಿದರು.

ಅಟಲ್ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ರಾಜ್ಯಮಟ್ಟದ ಬ್ಯಾಂಕರ್‌ಗಳ ಸಮಿತಿಯು (ಎಸ್‌ಎಲ್‌ಬಿಸಿ) ಪಿಎಫ್‌ಆರ್‌ಡಿಎ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪರಾಮರ್ಶನಾ ಸಭೆಯಲ್ಲಿ ಸೋಮವಾರ ಅವರು ಮಾತನಾಡಿದರು.

‘ಈ ಯೋಜನೆಯನ್ನು ರಾಜ್ಯದ ಎಲ್ಲಾ ಪ್ರದೇಶಗಳಿಗೆ ತಲುಪಿಸುವ ದಿಸೆಯಲ್ಲಿ ಬ್ಯಾಂಕ್‌ಗಳು ಕೆಲಸ ಮಾಡಬೇಕು. 2021–22ನೇ ಆರ್ಥಿಕ ವರ್ಷದಲ್ಲಿ ನಿಗದಿಪಡಿಸಿರುವ ಗುರಿ ಸಾಧನೆಗೂ ಶ್ರಮಿಸಬೇಕು’ ಎಂದು ಅನಂತ ಗೋಪಾಲದಾಸ್ ಹೇಳಿದರು.

‘ಹೊಸ ತಂತ್ರಜ್ಞಾನಗಳನ್ನು ಬಳಸಿಕೊಂಡು ಪಿಂಚಣಿ ವ್ಯಾಪ್ತಿಗೆ ಒಳಪಟ್ಟ ಇತರರಿಗೂ ಯೋಜನೆ ತಲುಪಿಸಲು ಎಲ್ಲಾ ಬ್ಯಾಂಕ್‌ಗಳೂ ಪ್ರಯತ್ನಿಸಬೇಕು’ ಎಂದರು.

‘ರಾಜ್ಯದ ಪ್ರಮುಖ ಬ್ಯಾಂಕ್‌ಗಳ ಪೈಕಿ ಕೆನರಾ ಬ್ಯಾಂಕ್ ಹಾಗೂ ಭಾರತೀಯ ಸ್ಟೇಟ್ ಬ್ಯಾಂಕ್ ಕ್ರಮವಾಗಿ ಶೇ 65 ಮತ್ತು ಶೇ 63ರಷ್ಟು ಗುರಿ ಸಾಧಿಸಿವೆ. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಶೇ 74 ಹಾಗೂ ಕರ್ನಾಟಕ ಗ್ರಾಮೀಣ ಬ್ಯಾಂಕ್ ಶೇ 42ರಷ್ಟು ಗುರಿ ಸಾಧನೆ ಮಾಡಿವೆ’ ಎಂದು ಮಾಹಿತಿ ನೀಡಿದರು.


ಕಾರ್ಯಕ್ರಮದಲ್ಲಿ ಅನಂತ ಗೋಪಾಲ್‌ದಾಸ್ ಮಾತನಾಡಿದರು. (ಎಡದಿಂದ) ಕೆನರಾ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ಎ.ಮುರಳಿಕೃಷ್ಣ, ಎನ್‌ಯುಎಲ್‌ಎಂ ಉಪ ನಿರ್ದೇಶಕಿ ಸಪ್ತಶ್ರೀ, ನಬಾರ್ಡ್ ಪ್ರಧಾನ ವ್ಯವಸ್ಥಾಪಕ ಸಿ.ವಿ.ರೆಡ್ಡಿ ಹಾಗೂ ಕೆನರಾ ಬ್ಯಾಂಕ್‌ನ ಉಪ ಪ್ರಧಾನ ವ್ಯವಸ್ಥಾಪಕ ಪಿ.ಸಿ. ದಾಮೋದರನ್ ಇದ್ದರು

ವಿದ್ಯುತ್ ವ್ಯತ್ಯಯ

ಬೆಂಗಳೂರು: ಇದೇ 14ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಮಾಳಗಾಳ, ರಾಮಕೃಷ್ಣಪ್ಪ ಬಡಾವಣೆ, ರಾಜೀವಗಾಂಧಿ ನಗರ, ಭೈರವೇಶ್ವರ ನಗರ, ಭೂಮಿಕಾ ಬಡಾವಣೆ, ಪಟ್ಟಣಗೆರೆ, ಸಿದ್ಧಗಂಗಪ್ಪ ಬಡಾವಣೆ, ಮಾರಣ್ಣ ಬಡಾವಣೆ, ಅನಿಬೆಸೆಂಟ್ ಸ್ಕೂಲ್, ದುಬಾಸಿಪಾಳ್ಯ, ಭುವನೇಶ್ವರಿ ನಗರ, ಉಪಾಧ್ಯಾಯ ಲೇಔಟ್, ಉಪಕಾರ ಲೇಔಟ್, ಆರ್.ಆರ್. ರೆಸಿಡೆನ್ಸಿ, ಗಂಗಾನಗರ, ಯಮುನಾ ನಗರ ಸ್ಕೂಲ್. ಲಕ್ಷ್ಮೀ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು.


ಬೆಂಗಳೂರು ಗಾಯನ ಸಮಾಜ ಆಯೋಜಿಸಿದ್ದ 51ನೇ ಸಂಗೀತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಮ್ಮೇಳನಾಧ್ಯಕ್ಷ ಎಂ.ಸೂರ್ಯ ಪ್ರಸಾದ್ ಅವರಿಗೆ ‘ಸಂಗೀತ ಕಲಾರತ್ನ’ ಬಿರುದು ಹಾಗೂ ‘ವಿ.ಟಿ.ಶ್ರೀನಿವಾಸನ್ ಪ್ರಶಸ್ತಿ’ ನೀಡಿ ಸನ್ಮಾನಿಸಲಾಯಿತು. (ಎಡದಿಂದ) ರಾಮಾನುಜ ಜೀಯರ್ ಸ್ವಾಮೀಜಿ, ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಗಾಯನ ಸಮಾಜದ ಉಪಾಧ್ಯಕ್ಷ ಅಚ್ಯುತರಾವ್ ಪದಕಿ, ಮೃದಂಗ ವಿದ್ವಾಂಸ ಎ.ವಿ.ಆನಂದ್ ಇದ್ದರು.

17 ರಿಂದ ಸಂಗೀತ ಉತ್ಸವ


ಟಿ.ಎನ್. ಶೇಷಗೋಪಾಲನ್

ಬೆಂಗಳೂರು: ಶ್ರೀ ರಾಮಸೇವಾ ಮಂಡಲಿ ಟ್ರಸ್ಟ್‌ನ 27ನೇ ವರ್ಷದ ಎಸ್.ವಿ.ನಾರಾಯಣಸ್ವಾಮಿ ರಾವ್ ಸ್ಮಾರಕ ಅಂತರರಾಷ್ಟ್ರೀಯ ಸಂಗೀತ ಉತ್ಸವ ಮತ್ತು 2021ನೇ ಸಾಲಿನ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಇದೇ 17ರಂದು ಕೆ.ಆರ್.ರಸ್ತೆಯಲ್ಲಿರುವ ಬೆಂಗಳೂರು ಗಾಯನ ಸಮಾಜದ ಸಭಾಂಗಣದಲ್ಲಿ ಶುರುವಾಗಲಿದೆ.

‘17ರಂದು ಸಂಜೆ 4ರಿಂದ 6ರವರೆಗೆ ಸಂಗೀತ ಕಲಾನಿಧಿ ವಾಲಯಪಟ್ಟಿ ಎ.ಆರ್. ಸುಬ್ರಮಣಿಯಂ ಹಾಗೂ ತಂಡದವರಿಂದ ಕಾರ್ಯಕ್ರಮ ನಡೆಯಲಿದೆ. ಸಂಜೆ 6.15ಕ್ಕೆ ಬಿಜೆಪಿ ಮುಖಂಡ ಎಸ್.ಎಂ.ಕೃಷ್ಣ ಅವರು ಸಂಗೀತ ಉತ್ಸವ ಉದ್ಘಾಟಿಸಲಿದ್ದಾರೆ. 18ರಂದು ಸಂಜೆ 5.15ಕ್ಕೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಸಂಗೀತ ಕಲಾನಿಧಿ, ವಿದ್ವಾನ್ ಮಧುರೈ ಟಿ.ಎನ್.ಶೇಷಗೋಪಾಲನ್ ಅವರಿಗೆ 2021ನೇ ಸಾಲಿನ ಎಸ್.ವಿ.ನಾರಾಯಣಸ್ವಾಮಿ ರಾವ್ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ’ ಎಂದು ಪ್ರಕಟಣೆ ತಿಳಿಸಿದ.

‘₹500 ಮತ್ತು ₹300 ಮೊತ್ತದ ‘ಡೋನರ್ ಪಾಸ್’ಗಳನ್ನು ಹೊಂದಿರುವವರು ಸ್ಥಳದಲ್ಲಿ ಸಂಗೀತಗಾರರ 27 ಕಛೇರಿಗಳನ್ನು ಕಣ್ತುಂಬಿಕೊಳ್ಳಬಹುದು. ಆನ್‌ಲೈನ್‌ನಲ್ಲೂ (https://shaale.com/watch/svn) ನೇರ ಪ್ರಸಾರ ಇರಲಿದೆ. ಅದಕ್ಕೂ ₹500 ಶುಲ್ಕ ನಿಗದಿಪಡಿಸಲಾಗಿದೆ’ ಎಂದು ಹೇಳಿದೆ.

ಪ್ರೋತ್ಸಾಹ: ‘ಇದೇ 20 ಮತ್ತು 21ರಂದು ನಡೆಯುವ 10 ಸಂಗೀತ ಕಛೇರಿಗಳನ್ನು ಉದಯೋನ್ಮುಖ ಕಲಾವಿದರಿಗಾಗಿಯೇ ಮೀಸಲಿಡಲಾಗಿದೆ. ಉಚಿತ ಪ್ರವೇಶ ಇರಲಿದೆ’ ಎಂದು ಶ್ರೀ ರಾಮಸೇವಾ ಮಂಡಲಿಯ ವ್ಯವಸ್ಥಾಪಕ ಟ್ರಸ್ಟಿ ಎಸ್.ಎನ್. ರಾಮಪ್ರಸಾದ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಬಿ.ಕೆ. ಹರಿಪ್ರಸಾದ್ ಪ್ರಶ್ನೆಗೆ ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಉತ್ತರ

ನಕಲಿ ಅಂಕಪಟ್ಟಿ: ಅಧಿಕಾರಿಗಳ ಮೇಲೆ ಕ್ರಮ ಇಲ್ಲ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): 'ಬೆಂಗಳೂರು ವಿಶ್ವವಿದ್ಯಾಲಯ ಯಾವುದೇ ನಕಲಿ ಅಂಕಪಟ್ಟಿ, ನಕಲಿ ಪದವಿ ಪ್ರದಾನ ಮಾಡಿಲ್ಲ. ಹೀಗಾಗಿ, ವಿಶ್ವವಿದ್ಯಾಲಯದ ಅಧಿಕಾರಿಗಳ ವಿರುದ್ಧ ನಕಲಿ ಅಂಕಪಟ್ಟಿ ಪ್ರಕರಣ ಸಂಬಂಧ ಕ್ರಮಕೈಗೊಳ್ಳುವ ಪ್ರಶ್ನೆಯೇ ಇಲ್ಲ. ಆದರೆ, ನಕಲಿ ಅಂಕಪಟ್ಟಿ ನೀಡಿ ಹುದ್ದೆ ಗಿಟ್ಟಿಸಿಕೊಂಡವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಬಿ.ಕೆ. ಹರಿಪ್ರಸಾದ್ ಪ್ರಶ್ನೆಗೆ ಉತ್ತರಿಸಿದ ಅವರು, 'ನಕಲಿ ಅಂಕಪಟ್ಟಿ ಸಂಬಂಧಿಸಿದಂತೆ ಮೂರು ಪ್ರಕರಣಗಳು ದಾಖಲಾಗಿವೆ. ಆದರೆ, ವಿಶ್ವವಿದ್ಯಾಲಯದಿಂದ ನಕಲಿ ಅಂಕ ಪಟ್ಟಿ ನೀಡಿದೆ ಎಂಬ ಕಾರಣಕ್ಕೆ ಅಲ್ಲ. ನೇಮಕಾತಿ ವೇಳೆ ಈ ವಿಶ್ವವಿದ್ಯಾಲಯದ ಹೆಸರಿನಲ್ಲಿ ಪಡೆದ ನಕಲಿ ಅಂಕ ಪಟ್ಟಿ ನೀಡಲಾಗಿದೆ ಎಂಬ ಕಾರಣಕ್ಕೆ ಅಂಕಪಟ್ಟಿಗಳನ್ನು ವಿಶ್ವವಿದ್ಯಾಲಯದ ಪರಿಶೀಲನೆಗೆ ಕಳುಹಿಸಿದಾಗ ಪ್ರಕರಣ ಬಯಲಿಗೆ ಬಂದಿದೆ. ಪ್ರಕರಣ ಪತ್ತೆಯಾಗುತ್ತಿದ್ದಂತೆ ದೂರು ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದರು.

'ಮುಂದಿನ ದಿನಗಳಲ್ಲಿ ಇಂಥ ಸಮಸ್ಯೆ ಆಗದ ರೀತಿ ಎಚ್ಚರಿಕೆ ವಹಿಸಲು ಡಿಜಿ ಲಾಕರ್ ವ್ಯವಸ್ಥೆ ಜಾರಿಗೆ ತರಲಾಗುತ್ತದೆ. ಆ ಮೂಲಕ, ಪ್ರತಿಯೊಬ್ಬ ವ್ಯಕ್ತಿಯ ದಾಖಲಾತಿ ಪರಿಶೀಲನೆ ಮಾಡಬಹುದಾಗಿದೆ' ಎಂದರು.

ಶಾಸಕ, ಸಚಿವರಿಂದಲೇ ನಕಲಿ ಅಂಕ ಪಟ್ಟಿ: ಬೆಂಗಳೂರು ವಿಶ್ವವಿದ್ಯಾಲಯದ ವಿರುದ್ಧ ಕ್ರಮಕ್ಕೆ ಸರ್ಕಾರ ಮುಂದಾಗದಿರುವುದಕ್ಕೆ ಕಿಡಿಕಾರಿದ ಬಿ.ಕೆ. ಹರಿಪ್ರಸಾದ್, 'ಇದೊಂದು ಗಂಭೀರ ಸ್ವರೂಪದ ಪ್ರಕರಣ. ಶಾಸಕರು, ಸಚಿವರು, ಕೇಂದ್ರ ಸಚಿವರು ಕೂಡ ನಕಲಿ ಅಂಕಪಟ್ಟಿ ಪಡೆದಿದ್ದಾರೆ. ಬೇಕಾದರೆ ಹೆಸರುಗಳನ್ನೂ ಬಹಿರಂಗಪಡಿಸುತ್ತೇನೆ' ಎಂದರು. ಅದಕ್ಕೆ ಪ್ರತಿಕ್ರಿಯಿಸಿದ ಅಶ್ವತ್ಥನಾರಾಯಣ, 'ಪಟ್ಟಿ ಇದ್ದರೆ ಹೇಳಬಹುದು' ಎಂದು ಕಾಲೆಳೆದರು.

ಆಗ ಮಧ್ಯಪ್ರವೇಶಿಸಿದ ಸಭಾಪತಿ ಬಸವರಾಜ ಹೊರಟ್ಟಿ, 'ಸದನದ ಹೊರಗೆ ಇದ್ದ ನಕಲಿ ಅಂಕಪಟ್ಟಿ ವಿವಾದ ಈಗ ಸದನದ ಒಳಗೂ ಬಂದುಬಿಡ್ತಾ' ಎಂದು ಹಾಸ್ಯ ಚಟಾಕಿ ಹಾರಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಕ್ಕೆ 10 ವರ್ಷದ ಗುರಿ: 'ಶಿಕ್ಷಣ ವ್ಯವಸ್ಥೆಯಲ್ಲಿ ಇರುವ ನ್ಯೂನತೆ ಸರಿಪಡಿಸುವ ಎಲ್ಲ ವ್ಯವಸ್ಥೆಯನ್ನು ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಹೊಂದಿದೆ. ಈ ನೀತಿಯ ಜಾರಿಗೆ 10 ವರ್ಷದ ಗುರಿಯೊಂದಿಗೆ ಅಗತ್ಯ ಅನುದಾನ ಒದಗಿಸಲಾಗುವುದು' ಎಂದು ಅಶ್ವತ್ಥನಾರಾಯಣ ತಿಳಿಸಿದರು.

ಜೆಡಿಎಸ್‌ನ ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಈ ನೀತಿ ಜಾರಿಯ ಮೂಲಕ ಪ್ರಾಥಮಿಕ ಶಾಲೆಗಳಲ್ಲಿ ಶೇ 100ರಷ್ಟು ದಾಖಲಾತಿ, ಕಲಿಕೆಯಲ್ಲಿ ಗುಣಮಟ್ಟ ತರಲಾಗುವುದು' ಎಂದರು.

'₹ 11.65 ಕೋಟಿ ಬಾಕಿ ಪಾವತಿಗೆ ಕ್ರಮ'

ಬೆಳಗಾವಿ (ಸುವರ್ಣ ವಿಧಾನಸೌಧ): ಬೆಳಗಾವಿಯ ರಾಮದುರ್ಗ ತಾಲ್ಲೂಕಿನ ಉದಪುಡಿಯ ಶಿವಸಾಗರ್ ಶುಗರ್ಸ್ ಕಂಪನಿಯು 2015–16ನೇ ಹಂಗಾಮಿನಲ್ಲಿ ಕಬ್ಬು ಪೂರೈಸಿರುವ ರೈತರಿಗೆ ಬಾಕಿ ಉಳಿಸಿಕೊಂಡಿರುವ ₹ 11.65 ಕೋಟಿ ಬಾಕಿಯನ್ನು 2022ರ ಮಾರ್ಚ್ ಅಂತ್ಯದೊಳಗೆ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಕ್ಕರೆ ಸಚಿವ ಶಂಕರ ಬಿ. ಪಾಟೀಲ ಮುನೇನಕೊಪ್ಪ ತಿಳಿಸಿದರು. ವಿಧಾನ ಪರಿಷತ್‌ನಲ್ಲಿ ಸೋಮವಾರ ಸರ್ಕಾರದ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, 'ಶಿವಸಾಗರ್ ಶುಗರ್ಸ್ ಕಂಪನಿ ನಷ್ಟದಲ್ಲಿದ್ದು, ಅದನ್ನು ಅರಿಹಂತ್ ಶುಗರ್ಸ್ ಕಂಪನಿಗೆ ವಹಿಸಿಕೊಡಲಾಗಿದೆ. ಈಗಾಗಲೇ ₹ 3 ಕೋಟಿ ಬಾಕಿ ಪಾವತಿಸಲಾಗಿದೆ. ಉಳಿದ ಮೊತ್ತವನ್ನು ಮಾರ್ಚ್ ಅಂತ್ಯದೊಳಗೆ ಪಾವತಿಸಲಾಗುವುದು' ಎಂದರು.

2018–19ರಲ್ಲಿ ಕಬ್ಬು ಒದಗಿಸಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು ₹ 8.93 ಕೋಟಿ ಪಾವತಿಸಬೇಕಿದೆ. 2019–20ರಲ್ಲಿ ₹ 5.80 ಕೋಟಿ ಬಾಕಿ ಇದೆ. ಈ ಮೊತ್ತವನ್ನು ರೈತರಿಗೆ ಕೊಡಿಸಲು ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಬಿಜೆಪಿಯ ಲಕ್ಷ್ಮಣ ಸವದಿ ಮಾತನಾಡಿ, 'ಎಥೆನಾಲ್ ಉತ್ಪಾದನೆ ಹೆಚ್ಚಿಸಲು ನೀತಿ ರೂಪಿಸಬೇಕು. ಸಕ್ಕರೆ ಕಾರ್ಖಾನೆಗಳ ಸಮೀಪದಲ್ಲಿ ಸರ್ಕಾರದಿಂದ ವೇ ಬ್ರಿಡ್ಜ್ ನಿರ್ಮಿಸಬೇಕು' ಎಂದು ಸಲಹೆ ನೀಡಿದರು.

ಹೆಲಿಕಾಪ್ಟರ್ ದುರಂತ: ತನಿಖೆಗೆ ಒತ್ತಾಯ

ಬೆಳಗಾವಿ (ಸುವರ್ಣ ವಿಧಾನಸೌಧ): ಸೇನಾ ಮುಖ್ಯಸ್ಥರಾದ ಬಿಪಿನ್ ರಾವತ್ ಸೇರಿದಂತೆ ಸೇನೆಯ ಹಿರಿಯ ಅಧಿಕಾರಿಗಳಿದ್ದ ಹೆಲಿಕಾಪ್ಟರ್ ದುರಂತದ ಬಗ್ಗೆ ತನಿಖೆ ನಡೆಸುವಂತೆ ಉಭಯಸದನಗಳಲ್ಲಿ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರು ಆಗ್ರಹಿಸಿದರು.

ವಿಧಾನಸಭೆಯಲ್ಲಿ ಸಂತಾಪ ಸೂಚನೆಯಡಿ ಮಾತನಾಡಿದ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ, 'ಹೆಲಿಕಾಪ್ಟರ್ ದುರಂತದ ಬಗ್ಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಿಂದ ತನಿಖೆ ನಡೆಸಬೇಕು. ರಾವತ್ ಸಾವನ್ನು ಸಂಭ್ರಮಿಸಿ ದ್ವೇಷದ ರಾಜಕಾರಣ ಮಾಡುತ್ತಿರುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿದರು.

'ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಗೆ ಸರ್ಕಾರ ಬದ್ಧ'

ಬೆಳಗಾವಿ (ಸುವರ್ಣ ವಿಧಾನಸೌಧ): 'ರಾಜ್ಯದಲ್ಲಿರುವ ಎಲ್ಲ ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಿಸಲು ಸರ್ಕಾರ ಬದ್ಧವಾಗಿದೆ' ಎಂದು ಪ್ರವಾಸೋದ್ಯಮ ಸಚಿವ ಆನಂದ್‌ಸಿಂಗ್ ಪರ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಪರಿಷತ್‌ನಲ್ಲಿ ಬಿಜೆಪಿಯ ತೇಜಸ್ವಿನಿ ಗೌಡ ಅವರ ಪ್ರಶ್ನೆಗೆ ಉತ್ತರಿಸಿ ಅವರು, 'ಸ್ಮಾರಕಗಳ ಸಂರಕ್ಷಿತ ಪ್ರದೇಶದಿಂದ 100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಕಾಮಗಾರಿ ಕೈಗೆತ್ತಿಕೊಳ್ಳಲು ಪುರಾತತ್ವ ಇಲಾಖೆಯಿಂದ ಅನುಮತಿ ಪಡೆಯಬೇಕಿದೆ. ಮುಂದಿನ ತಿಂಗಳಲ್ಲಿ ಸಭೆ ನಡೆಸಿ, ಸೀಮಿತ ಪ್ರದೇಶದ ಅಭಿವೃದ್ಧಿಗೆ ಅನುಮತಿ ಪಡೆದು ಕಾಮಗಾರಿ ಕೈಗೊಳ್ಳಲು ಯತ್ನಿಸಲಾಗುವುದು' ಎಂದರು

'ಪ್ರಾರ್ಥನಾ ಮಂದಿರಗಳ ವಿದ್ಯುತ್ ಬಿಲ್ ಬಾಕಿ ಮನ್ನಾ ಇಲ್ಲ'


'ರಾಜ್ಯದಲ್ಲಿರುವ ಯಾವುದೇ ಧರ್ಮದ, ಯಾವುದೇ ಪ್ರಾರ್ಥನಾ ಮಂದಿರದ ವಿದ್ಯುತ್ ಬಿಲ್ ಬಾಕಿ ಮನ್ನಾ ಮಾಡುವುದಿಲ್ಲ' ಎಂದು ಇಂಧನ ಸಚಿವ ಸುನೀಲ್ ಕುಮಾರ್ ಸ್ಪಷ್ಟಪಡಿಸಿದರು. ವಿಧಾನಪರಿಷತ್‌ನಲ್ಲಿ ಬಿಜೆಪಿಯ ಮುನಿರಾಜುಗೌಡ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಎಲ್ಲ ಧರ್ಮಗಳ ಹಲವು ಪ್ರಾರ್ಥನಾ ಮಂದಿರಗಳ ವಿದ್ಯುತ್ ಬಾಕಿ ಇದೆ. ಆದರೆ, ಬಾಕಿ ಬಿಲ್ ಮನ್ನಾ ಮಾಡುವ ಪ್ರಸ್ತಾವ ಸರ್ಕಾರದ ಮುಂದಿಲ್ಲ. ಆದರೆ, ಯಾವುದೇ ಪ್ರಾರ್ಥನಾ ಮಂದಿರ ಅನಧಿಕೃತ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದರೆ ಕಡಿತ ಮಾಡಲಾಗುವುದು' ಎಂದು ಭರವಸೆ ನೀಡಿದರು.

ಸುದ್ದಿ 2 ನಿಮಿಷ

ಡಾ.ದೇವರ ಕೊಂಡಾರೆಡ್ಡಿಗೆ 'ಸೋದೆ ಸದಾಶಿವರಾಯ' ಪ್ರಶಸ್ತಿ

ಶಿರಸಿ: ತಾಲ್ಲೂಕಿನ ಸೋದೆ ಅರಸ ಸದಾಶಿವರಾಯ ನೆನಪಿಗಾಗಿ ನೀಡುವ 'ಸೋದೆ ಸದಾಶಿವರಾಯ ಪ್ರಶಸ್ತಿ'ಗೆ ಶಾಸನತಜ್ಞ ಡಾ.ದೇವರ ಕೊಂಡಾರೆಡ್ಡಿ ಅವರನ್ನು ಆಯ್ಕೆ ಮಾಡಲಾಗಿದೆ.

ಸೋಂದಾ ಸ್ವರ್ಣವಲ್ಲೀ ಮಠ, ವಾದಿರಾಜ ಮಠ, ಜೈನ ಮಠ, ಪರಂಪರೆ ಇಲಾಖೆ, ಜಾಗೃತ ವೇದಿಕೆ ಸೋಂದಾ ಮತ್ತು ಸೋದೆ ಸದಾಶಿವರಾಯ ಪ್ರಶಸ್ತಿ ಸಮಿತಿಯ ಸಹಭಾಗಿತ್ವದಲ್ಲಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಜ.8, 9ರಂದು



ಸೋಂದಾದಲ್ಲಿ ನಡೆಯುವ ಇತಿಹಾಸೋತ್ಸವ ಮತ್ತು ರಾಷ್ಟ್ರಮಟ್ಟದ ಇತಿಹಾಸ ಸಮ್ಮೇಳನದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು.

ಸದಾಶಿವರಾಯ ಪೇಟ ತೊಡಿಸಿ ಪ್ರಶಸ್ತಿ ಪ್ರದಾನ ಮಾಡುವುದು ಇದರ ವಿಶೇಷವಾಗಿದೆ. ಪ್ರಶಸ್ತಿಯು ₹10 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಎರಡು ದಿನಗಳ ಸಮ್ಮೇಳನಕ್ಕೆ ಬೆಂಗಳೂರಿನ, ಗಣಿತಶಾಸ್ತ್ರಜ್ಞ ಡಾ.ಬಾಲಚಂದ್ರ ರಾವ್ ಅಧ್ಯಕ್ಷರಾಗಿದ್ದಾರೆ.

ಸೋಂದಾದ ಮೂರು ಮಠಗಳ ಸ್ವಾಮೀಜಿಗಳು, ಗಣ್ಯರು, ವಿಜ್ಞಾನಿಗಳು, ಇತಿಹಾಸಕಾರರ ಸಮ್ಮುಖದಲ್ಲಿ ಸಮ್ಮೇಳನ ನಡೆಯಲಿದೆ. ಈ ವರ್ಷದ ಸಮ್ಮೇಳನ ಭಾರತದ ಭವ್ಯತೆಯನ್ನು ಅನಾವರಣಗೊಳಿಸಲಿದೆ ಎಂದು ಸಮ್ಮೇಳನದ ಸಂಚಾಲಕ ಲಕ್ಷ್ಮೀಶ್ ಸೋಂದಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರುಣ್ ಸಿಂಗ್‌ಗೆ ಚಿಕಿತ್ಸೆ: ಚರ್ಮ ಪಡೆದ ಕಮಾಂಡೊ ಆಸ್ಪತ್ರೆ

ಬೆಂಗಳೂರು: ಹೆಲಿಕಾಪ್ಟರ್ ದುರಂತದಲ್ಲಿ ತೀವ್ರವಾಗಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಯ ಚರ್ಮ ಬ್ಯಾಂಕ್‌ನಿಂದ ನಗರದ ಕಮಾಂಡೊ ಆಸ್ಪತ್ರೆಗೆ ಚರ್ಮ ರವಾನಿಸಲಾಗಿದೆ.

ಕಮಾಂಡೊ ಆಸ್ಪತ್ರೆಯು ವಿಕ್ಟೋರಿಯಾ ಆಸ್ಪತ್ರೆಯ ಚರ್ಮ ಬ್ಯಾಂಕ್‌ನಿಂದ ಚರ್ಮ ಪಡೆದಿರುವುದು ಇದೇ ಮೊದಲು.

'ವರುಣ್ ಸಿಂಗ್ ಅವರ ದೇಹದಲ್ಲಿ ಅಪಾರ ಪ್ರಮಾಣದ ಸುಟ್ಟ ಗಾಯಗಳಾಗಿವೆ. ಅವರಿಗೆ ಸಾಕಷ್ಟು ಚರ್ಮದ ಅಗತ್ಯವಿದೆ. ಕಮಾಂಡೊ ಆಸ್ಪತ್ರೆಯವರ ಮನವಿ ಮೇರೆಗೆ 1 ಸಾವಿರ ಚದರ ಸೆಂ.ಮೀ. ಚರ್ಮವನ್ನು ನೀಡಲಾಗಿದೆ. ಇನ್ನಷ್ಟು ಚರ್ಮ ಬೇಕಾದರೆ ಮುಂಬೈ ಮತ್ತು ಚೆನ್ನೈನಲ್ಲಿರುವ ಚರ್ಮ ಬ್ಯಾಂಕ್‌ಗಳಿಂದ ತರಿಸಿ ಕೊಡಲಾಗುತ್ತದೆ' ಎಂದು ವಿಕ್ಟೋರಿಯಾ ಆಸ್ಪತ್ರೆಯ ಮೂಲಗಳು ತಿಳಿಸಿವೆ.

'ನಟ ಪುನೀತ್ ರಾಜ್‌ಕುಮಾರ್ ಅವರ ನಿಧನದ ನಂತರ ಅಂಗಾಂಗ ದಾನ ಮಾಡುವವರ ಸಂಖ್ಯೆ ಹೆಚ್ಚಳವಾಗಿದೆ. ಚರ್ಮ ದಾನಿಗಳ ಸಂಖ್ಯೆಯೂ ಏರಿದೆ. ಈಗ ತಿಂಗಳಲ್ಲಿ ಸರಾಸರಿ ಇಬ್ಬರು ಚರ್ಮ ದಾನ ಮಾಡುತ್ತಿದ್ದಾರೆ' ಎಂದೂ ಮೂಲಗಳು ಹೇಳಿವೆ.



ಬೆಂಗಳೂರಿನಲ್ಲಿ ಭಾನುವಾರ ನಡೆದ 'ಕನ್ನಡ ನುಡಿ ಸಮ್ಮೇಳನ'ದಲ್ಲಿ ಸುಮಾ ಪಾಲನೇತ್ರ ಮತ್ತು ಪಾಲನೇತ್ರ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಮಂಡ್ಯ ಜಿಲ್ಲೆ ಯುವ ಬರಹಗಾರರ ಬಳಗದ ಅಧ್ಯಕ್ಷ ಸತೀಶ್ ಜವರೇಗೌಡ, ಮಲ್ಲೇಪುರಂ ಜಿ. ವೆಂಕಟೇಶ್, ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಸುರೇಶ್ ಜೀವನ್ಮುಖಿ, ವಿ. ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ವಿ. ಸೋಮಣ್ಣ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಇದ್ದಾರೆ –ಪ್ರಜಾವಾಣಿ ಚಿತ್ರ

ಟೆಂಡರ್ ಕರೆದೇ ವೈಟ್ ಟಾಪಿಂಗ್‌ಗೆ ಆದೇಶ

ಜ್ಞಾನಭಾರತಿ: ಟೆಂಡರ್ ಪ್ರಕ್ರಿಯೆ ತಪ್ಪಿಸಿಕೊಳ್ಳುವ ಬಿಬಿಎಂಪಿ ಪ್ರಯತ್ನಕ್ಕೆ ತಡೆ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ವೈಟ್ ಟಾಪಿಂಗ್ ಎರಡನೇ ಹಂತದ ಯೋಜನೆಯಡಿ ಜ್ಞಾನ ಭಾರತಿ ಆವರಣದಲ್ಲಿ ವೈಟ್ ಟಾಪಿಂಗ್ ಕಾಮಗಾರಿಯನ್ನು ಟೆಂಡರ್ ಆಹ್ವಾನಿಸದೆಯೇ ನಡೆಸಲು ಮುಂದಾಗಿದ್ದ ಬಿಬಿಎಂಪಿ ಪ್ರಯತ್ನಕ್ಕೆ ಹಿನ್ನಡೆ ಆಗಿದೆ. ಟೆಂಡರ್ ಕರೆದೇ ಈ ಕಾಮಗಾರಿ ನಡೆಸುವಂತೆ ಸರ್ಕಾರ ಬಿಬಿಎಂಪಿಗೆ ಸೋಮವಾರ ನಿರ್ದೇಶನ ನೀಡಿದೆ.

ಬೆಂಗಳೂರಿನ ವಿಶೇಷ ಮೂಲಸೌಕರ್ಯ ಯೋಜನೆಯಡಿ 2017–18ರಲ್ಲಿ ಸರ್ಕಾರ ಬಿಬಿಎಂಪಿಗೆ ₹2,191 ಕೋಟಿ ಅನುದಾನ ಮಂಜೂರು ಮಾಡಿತ್ತು. ಈ ಮೊತ್ತದಲ್ಲಿ ಎರಡನೇ ಹಂತದ ವೈಟ್‌ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಈ ಪ್ಯಾಕೇಜ್‌ನಲ್ಲಿ ಇಲ್ಲದ ಕಾಮಗಾರಿಯನ್ನು ಟೆಂಡರ್ ಕರೆಯದೆಯೇ ನಡೆಸಲು ಬಿಬಿಎಂಪಿ ಮುಂದಾಗಿತ್ತು.

'ನಾಗರಬಾವಿ, ವಿಶ್ವೇಶ್ವರಯ್ಯ ಬಡಾವಣೆ, ಉಲ್ಲಾಳು, ರಾಜರಾಜೇಶ್ವರಿನಗರ, ಕೆಂಗೇರಿ ಮತ್ತು ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಜ್ಞಾನಭಾರತಿ ಆವರಣದ ಮೂಲಕ ಹಾದು ಹೋಗುತ್ತಿದೆ. ಮೈಸೂರು ರಸ್ತೆಯಲ್ಲಿ ಮೆಟ್ರೊ ರೈಲು ನಿಲ್ದಾಣ ಕೂಡ ಇದ್ದು, ವಾಹನ ದಟ್ಟಣೆ ಇನ್ನಷ್ಟು ಹೆಚ್ಚಾಗುತ್ತಿದೆ. ಈಗಿರುವ ರಸ್ತೆ ಹಾಳಾಗಿರುವುದರಿಂದ ವೈಟ್‌ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಬೇಕು' ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ ಮುಖ್ಯಮಂತ್ರಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದರು.

ಪ್ರಗತಿಯಲ್ಲಿರುವ ಯೋಜನೆಯಲ್ಲಿ ಉಳಿತಾಯ ಆಗಿರುವ ಮೊತ್ತ ಇದ್ದರೆ ಕಾಮಗಾರಿ ಕೈಗೆತ್ತಿಕೊಳ್ಳಲು ಅಂದಾಜುಪಟ್ಟಿ ಸಿದ್ಧಪಡಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದರು.

ಮಹದೇವಪುರ, ಬ್ಯಾಟರಾಯನಪುರ, ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ನಾಲ್ಕು ಕಾಮಗಾರಿಗಳನ್ನು ಕೈಬಿಟ್ಟು ಪ್ಯಾಕೇಜ್‌ನೊಳಗೆ ಜ್ಞಾನಭಾರತಿ ಆವರಣದ ಕಾಮಗಾರಿಯನ್ನು ಸೇರಿಸಲಾಗಿತ್ತು.

₹35.50 ಕೋಟಿ ಮೊತ್ತದಲ್ಲಿ ಆರು ಪಥದ ರಸ್ತೆ ಅಭಿವೃದ್ಧಿಪಡಿಸಲು ಮುಖ್ಯಮಂತ್ರಿ ಅವರಿಂದ ಅನುಮೋದನೆಯನ್ನೂ ಪಡೆಯಲಾಗಿತ್ತು. ಈ ಕಾಮಗಾರಿಗೆ ಹೊಸದಾಗಿ ಟೆಂಡರ್ ಕರೆಯಬೇಕು ಎಂಬ ಷರತ್ತನ್ನು ಸಡಿಲಗೊಳಿಸಲು ಬಿಬಿಎಂಪಿ ಮುಖ್ಯ ಆಯುಕ್ತರು ಪ್ರಸ್ತಾವನೆ ಸಲ್ಲಿಸಿದ್ದರು.

'ಹೊಸದಾಗಿ ಟೆಂಡರ್ ಕರೆದರೆ ಮೂಲ ಗುತ್ತಿಗೆದಾರರಾದ ಶಂಕರನಾರಾಯಣ ಕನ್‌ಸ್ಟ್ರಕ್ಷನ್ ಪ್ರೈವೆಟ್ ಲಿಮಿಟೆಡ್‌ನಿಂದ ₹35.50 ಕೋಟಿ ವಾಪಸ್ ಪಡೆಯಬೇಕಾಗುತ್ತದೆ. ಗುತ್ತಿಗೆದಾರರು ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆಯೂ ಇರುತ್ತದೆ. ಹೊಸದಾಗಿ ಟೆಂಡರ್ ಕರೆಯಲು ಮುಂದಾದರೆ ಮೊತ್ತ ಕೂಡ ಹೆಚ್ಚಾಗಲಿದೆ' ಎಂದು ಕಾರಣ ನೀಡಿದ್ದರು. ಈ ಕುರಿತು 'ಪ್ರಜಾವಾಣಿ' ನ.29ರಿಂದ ಸರಣಿ ವರದಿ ಪ್ರಕಟಿಸಿತ್ತು. ಟೆಂಡರ್ ಪ್ರಕ್ರಿಯೆ ನಡೆಸದೆ ಕಾಮಗಾರಿ ವಹಿಸುವ ಪ್ರಯತ್ನಕ್ಕೆ ಸಾರ್ವಜನಿಕ ವಯದಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು. ಸರ್ಕಾರ ಕಡೆಗೂ ನಿರ್ಧಾರ ಬದಲಿಸಿ ಟೆಂಡರ್ ಪ್ರಕ್ರಿಯೆ ನಡೆಸಲು ಬಿಬಿಎಂಪಿಗೆ ಸೂಚಿಸಿದೆ.

1.03 ಕಿಲೋ ಮೀಟರ್ ಉದ್ದದ ರಸ್ತೆಗೆ ₹35.50 ಕೋಟಿ ಖರ್ಚು ಮಾಡುತ್ತಿರುವ ಬಗ್ಗೆಯೂ ಆಕ್ಷೇಪ ವ್ಯಕ್ತವಾಗಿತ್ತು. 1.03 ಕಿ.ಮೀ ಅಲ್ಲ, 2.43 ಕಿ.ಮೀ ಉದ್ದದ ರಸ್ತೆಗೆ ವೈಟ್ ಟಾಪಿಂಗ್ ನಡೆಸಲಾಗುವುದು ಎಂದು ಬಿಬಿಎಂಪಿ ಸ್ಪಷ್ಟನೆ ನೀಡಿತ್ತು.

ಬಿಬಿಎಂಪಿ ವ್ಯಾಪ್ತಿಗೆ 4 ಗ್ರಾಮಗಳು

ಬೆಂಗಳೂರು: ಹೊಸ ಗ್ರಾಮಗಳ ಸೇರ್ಪಡೆಯಿಂದ ಬಿಬಿಎಂಪಿಯ ವ್ಯಾಪ್ತಿ 4 ಚದರ ಕಿಲೋ ಮೀಟರ್ ಪ್ರದೇಶದಷ್ಟು ವಿಸ್ತಾರವಾಗಲಿದೆ. ಹೆಮ್ಮಿಗೆಪುರಕ್ಕೆ (ವಾರ್ಡ್ 198) ಎರಡು ಗ್ರಾಮಗಳು ಮತ್ತು ಅಬ್ಬಿಗೆರೆಗೆ (ವಾರ್ಡ್ 112) ಮೂರು ಗ್ರಾಮಗಳನ್ನು ಸೇರ್ಪಡೆ ಮಾಡಲಾಗಿದೆ. ಈ ಹೊಸ ಪ್ರದೇಶಗಳ ಸೇರ್ಪಡೆಯಿಂದ ಬೆಂಗಳೂರು ನಗರವು 712 ಚದರ ಕಿಲೋ ಮೀಟರ್‌ನಿಂದ 716 ಚದರ ಕಿಲೋ ಮೀಟರ್‌ಗೆ ಹೆಚ್ಚಲಿದೆ. ಈ ಬಗ್ಗೆ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಬಹು ಮಾಧ್ಯಮ

ಯಶವಂತಪುರದಲ್ಲಿ 2018ರಲ್ಲಿ ನಡೆದಿದ್ದ ಕೊಲೆ ಪ್ರಕರಣ

ಯುವಕನ ಹತ್ಯೆ: ಮೂವರಿಗೆ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್ ಮ್ಯಾನೇಜ್‌ಮೆಂಟ್ ತರಬೇತಿಗಾಗಿ ನಗರಕ್ಕೆ ಬಂದಿದ್ದ ಜಗದೀಪ್ ಸಿಂಗ್ ಎಂಬುವರನ್ನು ಕೊಲೆ ಮಾಡಿದ್ದ ಮೂವರು ಅಪರಾಧಿಗಳಿಗೆ ಜೈಲು ಶಿಕ್ಷೆ ವಿಧಿಸಿ ನಗರ ನ್ಯಾಯಾಲಯ (ಸಿಸಿಎಚ್– 57ನೇ) ಆದೇಶ ಹೊರಡಿಸಿದೆ. ಪ್ರಕರಣದ ಮೊದಲ ಅಪರಾಧಿ ಗುರಯ್ಯ ಅಲಿಯಾಸ್ ಚಟ್ಟಬಾಬು ಎಂಬಾತನಿಗೆ ಜೀವಾವಧಿ ಶಿಕ್ಷೆ ಹಾಗೂ ₹ 30 ಸಾವಿರ ದಂಡ ವಿಧಿಸಲಾಗಿದೆ. ಎರಡನೇ ಅಪರಾಧಿ ಜಿ. ಪ್ರವೀಣ್ ಹಾಗೂ ಮೂರನೇ ಅಪರಾಧಿ ಎಂ. ಕಿಶೋರ್‌ನನ್ನು 10 ವರ್ಷ ಕಾರಾಗೃಹ ಶಿಕ್ಷೆಗೆ ಗುರಿಪಡಿಸಲಾಗಿದೆ.

ಯಶವಂತಪುರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕೊಲೆ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಕೆ.ಜಿ. ಚಿಂತಾ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಕೆ.ಎಸ್. ವೀಣಾ ವಾದಿಸಿದ್ದರು.

ಪ್ರಕರಣದ ವಿವರ: 2018ರ ಅಕ್ಟೋಬರ್ 19ರಂದು ರಾತ್ರಿ ಊಟಕ್ಕೆಂದು ಹೋಟೆಲ್‌ಗೆ ಹೋಗಲು ಮುಂದಾಗಿದ್ದ ಜಗದೀಪ್ ಹಾಗೂ ಸ್ನೇಹಿತರು, ಕೊಠಡಿಯಿಂದ ಹೊರಗೆ ಬಂದು ರಸ್ತೆಯಲ್ಲಿ ನಿಂತುಕೊಂಡಿದ್ದರು. ಅದೇ ಸಂದರ್ಭದಲ್ಲೇ ಅಪರಾಧಿಗಳಾದ ಚಟ್ಟಬಾಬು, ಪ್ರವೀಣ್ ಹಾಗೂ ಕಿಶೋರ್ ಸ್ಥಳಕ್ಕೆ ಬಂದಿದ್ದರು.

ಜಗದೀಪ್ ಹಾಗೂ ಸ್ನೇಹಿತರನ್ನು ಅಪರಾಧಿಗಳು ಗುರಾಯಿಸಿದ್ದರು ಎಂಬ ಕಾರಣಕ್ಕೆ ಜಗಳವಾಗಿ ಕೊಲೆಯಲ್ಲಿ ಅಂತ್ಯಗೊಂಡಿದೆ.

ಬಿಯರ್ ಜಗಳ– ಆಫ್ರಿಕಾ ಪ್ರಜೆ ಕೊಲೆ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ವಿಕ್ಟರ್ (35) ಎಂಬುವವರನ್ನು ಭಾನುವಾರ ರಾತ್ರಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಗಳಾದ ಅರುಣ್, ನೀಲಕಂಠನ್ ಹಾಗೂ ಪಿಲಿಪ್‌ರಾಜ್ ಬಂಧಿತರು. ಸಿಗರೇಟ್ ಹಾಗೂ ಬಿಯರ್ ವಿಚಾರವಾಗಿ ಶುರುವಾಗಿದ್ದ ಜಗಳದಿಂದಾಗಿ ವಿಕ್ಟರ್ ಕೊಲೆಯಾಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆಫ್ರಿಕಾ ಪ್ರಜೆ ವಿಕ್ಟರ್, ಬಿಯರ್ ಬಾಟಲಿ ಹಿಡಿದುಕೊಂಡು ಕಮ್ಮನಹಳ್ಳಿಯ ಕುಳ್ಳಪ್ಪ ವೃತ್ತದ ಪಾದಚಾರಿ ಮಾರ್ಗದಲ್ಲಿ ಭಾನುವಾರ ರಾತ್ರಿ ಹೊರಟಿದ್ದರು. ಅದೇ ಮಾರ್ಗದಲ್ಲಿದ್ದ ಆರೋಪಿಗಳು ವಿಕ್ಟರ್ ಜತೆ ಮಾತನಾಡುತ್ತಾ, ನಂತರ ಗಲಾಟೆ ಮಾಡಿದ್ದಾರೆ. ವಿಕ್ಟರ್ ಅವರಿಂದ ಬಿಯರ್ ಬಾಟಲಿ ಕಸಿದುಕೊಂಡು ಅದರಿಂದಲೇ ವಿಕ್ಟರ್ ತಲೆಗೆ ಹೊಡೆದಿದ್ದರು. ಒಬ್ಬಾತ, ಚಾಕುವಿನಿಂದ ದೇಹದ ವಿವಿಧ ಭಾಗಗಳಿಗೆ ಇರಿದಿದ್ದ. ರಕ್ತಸ್ರಾವದಿಂದ ವಿಕ್ಟರ್ ಮೃತಪಟ್ಟಿದ್ದಾರೆ' ಎಂದೂ ಮೂಲಗಳು ಹೇಳಿವೆ.

ಬಡ್ಡಿಗೆ ಪೀಡಿಸಿ, ಅವಹೇಳನ; ಎಫ್‌ಐಆರ್

ಬೆಂಗಳೂರು: ಸಾಲ ತೀರಿಸಿದ ಬಳಿಕವೂ ಮೀಟರ್ ಬಡ್ಡಿಗಾಗಿ ಪೀಡಿಸಿ ಗ್ರಾಹಕರೊಬ್ಬರ ಅವಹೇಳನ ಮಾಡುತ್ತಿರುವ ಆರೋಪದಡಿ ಮೊಬೈಲ್ ಆ್ಯಪ್ ಕಂಪನಿ ವಿರುದ್ಧ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 'ಕಾರು ಚಾಲಕ ಹರಿಕುಮಾರ್ ಎಂಬುವರು ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರ್ಥಿಕ ಸಂಕಷ್ಟದಲ್ಲಿದ್ದ ದೂರುದಾರ, ಸಾಲಕ್ಕಾಗಿ ಹುಡುಕಾಟ ನಡೆಸುತ್ತಿದ್ದರು. 'ಲೈಫ್ ವಾಲೆಟ್', 'ಈಸಿ ಪೈಸ್', 'ಬ್ರೈಟ್ ಕ್ಯಾಷ್' ಹಾಗೂ 'ಆರ್.ಎಸ್. ವಾಲೆಟ್' ಮೊಬೈಲ್ ಆ್ಯಪ್ ಬಗ್ಗೆ ತಿಳಿದುಕೊಂಡಿದ್ದರು. ಆ್ಯಪ್ ಪ್ರತಿನಿಧಿಗಳನ್ನು ಆನ್‌ಲೈನ್‌ನಲ್ಲಿ ಸಂಪರ್ಕಿಸಿದ್ದ ದೂರುದಾರ, ತಮ್ಮ ವೈಯಕ್ತಿಕ ದಾಖಲೆಗಳನ್ನು ನೀಡಿ ₹ 1.46 ಲಕ್ಷ ಸಾಲ ಪಡೆದಿದ್ದರು. ನಿಗದಿತ ದಿನಗಳ ನಂತರ, ಬಡ್ಡಿ ಸಮೇತ ₹ 1.81 ಲಕ್ಷ ಪಾವತಿಸಿ ಸಾಲ ತೀರಿಸಿದ್ದರು.'

ಬುದ್ಧಿಮಾಂದ್ಯ ಮಗನ ಕೊಂದು ಆತ್ಮಹತ್ಯೆ

ಬೆಂಗಳೂರು: ಸಂಪಂಗಿರಾಮನಗರ ಠಾಣೆ ವ್ಯಾಪ್ತಿಯಲ್ಲಿ ನೀರಿನ ಸಂಪಿನಲ್ಲಿ ಮುಳುಗಿಸಿ ಉದಯಸಾಯಿ (10) ಎಂಬಾತನನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದಾರೆ ಎನ್ನಲಾದ ತಂದೆ ಸುರೇಶ್ (40) ಸಹ ಆತ್ಮಹತ್ಯೆಗೆ ಶರಣಾಗಿದ್ದಾರೆ.

'ಆಟೊ ಚಾಲಕ ಸುರೇಶ್, ಪತ್ನಿ ಲಕ್ಷ್ಮಿ (35) ಹಾಗೂ ಮಗ ಉದಯಸಾಯಿ ಜೊತೆ ವಾಸವಿದ್ದರು. ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಮಗನನ್ನೇ ಸೋಮವಾರ ಕೊಲೆ ಮಾಡಿದ್ದರು. ನಂತರ, ಶೇಷಾದ್ರಿಪುರ ಠಾಣೆ ವ್ಯಾಪ್ತಿಯ ರೈಲ್ವೆ ಸೇತುವೆ ಬಳಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಬಾಲಕನ ಕೊಲೆ ಸಂಬಂಧ ಸಂಪಂಗಿರಾಮನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಯ ಆತ್ಮಹತ್ಯೆ ಬಗ್ಗೆ ಶೇಷಾದ್ರಿಪುರ ಠಾಣೆಯಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಾಗಿದೆ' ಎಂದರು.

'ಮಗನ ಹಾಗೂ ತಮ್ಮ ಆರೋಗ್ಯ ಸಮಸ್ಯೆಯಿಂದ ಬೇಸತ್ತಿದ್ದ ಸುರೇಶ್, 'ನಾನು, ನನ್ನ ಮಗ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ' ಎಂಬುದಾಗಿ ಪತ್ನಿಗೆ ಹಲವು ಬಾರಿ ಹೇಳಿದ್ದರು' ಎಂದೂ ಅಧಿಕಾರಿ ತಿಳಿಸಿದರು.

ಇಂಗ್ಲೆಂಡ್‌ನಿಂದ ಬಂದ ಐವರಿಗೆ ಕೋವಿಡ್

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸೋಮವಾರ ಮುಂಜಾನೆ ಇಂಗ್ಲೆಂಡ್‌ನಿಂದ ಎರಡು ಪ್ರತ್ಯೇಕ ವಿಮಾನಗಳಲ್ಲಿ ಬಂದಿಳಿದ ಪ್ರಯಾಣಿಕರ ಪೈಕಿ ಐವರಲ್ಲಿ ಕೋವಿಡ್ ಸೋಂಕು ದೃಢಪಟ್ಟಿದೆ.

ಸೋಂಕಿತರನ್ನು ಬೆಂಗಳೂರಿನ ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಸೋಂಕಿತರಲ್ಲಿ ವಿವಿಧ ವಯೋಮಾನದವರಿದ್ದು, ಅವರ ಗಂಟಲದ್ರವ ಮಾದರಿಯನ್ನು ಜಿನೋಮ್ ಸೀಕ್ವೆನ್ಸಿಂಗ್‌ಗಾಗಿ ಪ್ರಯೋಗಾಲಯಕ್ಕೆ ಕಳುಹಿಸಿ ಕೊಡಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ತಿಳಿಸಿದ್ದಾರೆ. ಒಂದು ವಿಮಾನದಲ್ಲಿ 178 ಪ್ರಯಾಣಿಕರು ಮತ್ತೊಂದು ವಿಮಾನದಲ್ಲಿ 320 ಪ್ರಯಾಣಿಕರು ಬಂದಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಆರು ಪರೀಕ್ಷಾ ಕೇಂದ್ರ ತೆರೆಯಲಾಗಿದೆ. ಇದುವರೆಗೂ ಹೈರಿಸ್ಕ್ ದೇಶಗಳಿಂದ ಬಂದಿರುವ 4,500 ಪ್ರಯಾಣಿಕರ ಪೈಕಿ 14 ಮಂದಿಯಲ್ಲಿ ಕೋವಿಡ್ ಸೋಂಕು ದೃಢಪಟ್ಟಿದೆ.

ಪ್ರಯಾಣಿಕರ ವರದಿ ನೆಗೆಟಿವ್ ಬಂದರೆ ಮಾತ್ರ ವಿಮಾನ ನಿಲ್ದಾಣದಿಂದ ಕಳುಹಿಸಲಾಗುತ್ತಿದೆ. ವರದಿ ನೆಗೆಟಿವ್ ಬಂದಿದ್ದರೂ ಕಡ್ಡಾಯವಾಗಿ ಹೋಂ ಕ್ವಾರೈಂಟನ್‌ನಲ್ಲಿ ಇರಬೇಕು. ಏಳು ದಿನಗಳ ನಂತರ ಮತ್ತೆ ಪರೀಕ್ಷೆಗೆ ಒಳಪಡಬೇಕು. ಆಗ ನೆಗೆಟಿವ್ ಬಂದರೆ ಮಾತ್ರ ಎಂಟು ದಿನಗಳವರೆಗೂ ವಿಶ್ರಾಂತಿಯಲ್ಲಿದ್ದು ನಂತರ ಹೊರಗೆ ಓಡಾಡಬೇಕು ಎಂದು ಶ್ರೀನಿವಾಸ್ ತಿಳಿಸಿದ್ದಾರೆ.

ಚಾಕೊಲೇಟ್ ನೀಡಿ ಮಕ್ಕಳಿಗೆ ಪರೀಕ್ಷೆ: ಹೈರಿಸ್ಕ್ ದೇಶಗಳಿಂದ ಬರುತ್ತಿರುವ ಪ್ರಯಾಣಿಕರಲ್ಲಿ ಮಕ್ಕಳನ್ನು ಪರೀಕ್ಷೆಗೆ ಒಳಪಡಿಸಲು ವಿಮಾನ ನಿಲ್ದಾಣದ ಸಿಬ್ಬಂದಿ ಮಕ್ಕಳಿಗೆ ಚಾಕೊಲೇಟ್ ನೀಡಿ ಗಂಟಲ ದ್ರವ ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.

ಬಿಸಿಯೂಟಕ್ಕೆ ಶೇಂಗಾ ಚಿಕ್ಕಿ

ಬೆಂಗಳೂರು: ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದ ಜತೆಗೆ ಶೇಂಗಾ ಚಿಕ್ಕಿ ನೀಡಲು ಸರ್ಕಾರ ನಿರ್ಧರಿಸಿದೆ.

ಮೊಟ್ಟೆ ಸೇವಿಸದವರಿಗೆ ಬಾಳೆ ಹಣ್ಣು ನೀಡಲಾಗುತ್ತಿತ್ತು. ಆದರೆ, ಪೌಷ್ಟಿಕಾಂಶ ವಿಷಯದಲ್ಲಿ ಬಾಳೆ ಹಣ್ಣಿಗೆ ಮೊಟ್ಟೆ ಸಮವಲ್ಲ ಎನ್ನುವ ಅಭಿಪ್ರಾಯಗಳು ವ್ಯಕ್ತವಾಗಿರುವುದರಿಂದ ಸರ್ಕಾರ ಶೇಂಗಾ ಚಿಕ್ಕಿ ನೀಡಲು ನಿರ್ಧರಿಸಿದೆ.

'ಸದ್ಯಕ್ಕೆ ಚಿಕ್ಕಿ ಮತ್ತು ಬಾಳೆಹಣ್ಣು ವಿತರಿಸಲಾಗುವುದು. ಎರಡರಲ್ಲಿ ಒಂದನ್ನು ವಿದ್ಯಾರ್ಥಿಗಳೇ ಆಯ್ಕೆ ಮಾಡಿಕೊಳ್ಳಬೇಕು. ಬೇಡಿಕೆ ಆಧರಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.

'ಈಗಾಗಲೇ ಶೇಂಗಾ ಚಿಕ್ಕಿ ನೀಡುವ ಕುರಿತು ಕರ್ನಾಟಕ ಹಾಲು ಒಕ್ಕೂಟದ ಅಧಿಕಾರಿಗಳ ಜತೆ ಮಾತುಕತೆ ನಡೆಸಲಾಗಿದೆ. ವಿದ್ಯಾರ್ಥಿಗಳಿಗೆ ವಿತರಿಸುವ ಮುನ್ನ ಪೌಷ್ಟಿಕಾಂಶಗಳ ಬಗ್ಗೆ ಶೇಂಗಾ ಚಿಕ್ಕಿಯನ್ನು ವಿವಿಧ ಪರೀಕ್ಷೆಗಳನ್ನು ಒಳಪಡಿಸಲಾಗುವುದು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್ ಸಾವು: 'ಸುಪ್ರೀಂ'ಗೆ ಪರಿಷ್ಕೃತ ಪಟ್ಟಿ ಸಲ್ಲಿಕೆ

ಗುಜರಾತ್: ಸತ್ತವರು 10,098 ಅಲ್ಲ, 19,964

ನವದೆಹಲಿ: ಗುಜರಾತ್‌ನಲ್ಲಿ ಕೋವಿಡ್‌ನಿಂದಾಗಿ ಮೃತಪಟ್ಟವರ ಸಂಖ್ಯೆ ಈ ಮೊದಲು ಪ್ರಕಟಿಸಿದ್ದಕ್ಕಿಂತಲೂ ಸುಮಾರು 10 ಸಾವಿರ ಹೆಚ್ಚಿದೆ ಎಂದು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. ಈ ಕುರಿತು ಎನ್‌ಡಿಟಿವಿ ವರದಿ ಮಾಡಿದೆ.

ಮೃತರ ಅವಲಂಬಿತರಿಗೆ ಪರಿಹಾರ ಮೊತ್ತವನ್ನು ಪಾವತಿಸಲಾಗಿದ್ದು, ಮೃತರ ವಿವರ ಒಳಗೊಂಡ ಪರಿಷ್ಕೃತ ಪಟ್ಟಿಯನ್ನು ಸುಪ್ರೀಂ ಕೋರ್ಟ್‌ಗೆ ಗುಜರಾತ್ ಸರ್ಕಾರ ಸೋಮವಾರ ಸಲ್ಲಿಸಿದೆ.

ಪರಿಹಾರ ವಿತರಣೆಗೆ ಸಂಬಂಧಿಸಿ ಕುಗ್ರಾಮಗಳಲ್ಲಿರುವ ಸಾಮಾನ್ಯ ಜನರಿಗೂ ಮಾಹಿತಿ ತಲುಪುವಂತೆ ವ್ಯಾಪಕವಾಗಿ ಪ್ರಚಾರ ನಡೆಸಬೇಕು ಎಂದು ಕೋರ್ಟ್ ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರಕ್ಕೆ ತಿಳಿಸಿತು.

ಮೊದಲು ಕೋವಿಡ್‌ನಿಂದ ಗುಜರಾತ್‌ನಲ್ಲಿ 10,098 ಜನರು ಮೃತಪಟ್ಟಿದ್ದಾರೆ ಎಂದು ತಿಳಿಸಲಾಗಿತ್ತು. ಪರಿಷ್ಕೃತ ಪಟ್ಟಿಯಂತೆ ಮೃತರ ಸಂಖ್ಯೆ 19,964 ಆಗಿದೆ. ತಲಾ ₹ 50 ಸಾವಿರ ಪರಿಹಾರ ಕೋರಿದ್ದ ಒಟ್ಟು 34,678 ಅರ್ಜಿಗಳನ್ನು ಗುಜರಾತ್ ಸರ್ಕಾರ ಸ್ವೀಕರಿಸಿದ್ದು, 19,964 ಪ್ರಕರಣಗಳಲ್ಲಿ ಪರಿಹಾರ ಪಾವತಿಸಲಾಗಿದೆ.

ಪರಿಹಾರ ಕುರಿತಂತೆ ವ್ಯಾಪಕ ಪ್ರಚಾರ ಕೈಗೊಳ್ಳದಿದ್ದರೆ ಕುಗ್ರಾಮಗಳಲ್ಲಿ ಇರುವ ಅವಲಂಬಿತರಿಗೆ ಆನ್‌ಲೈನ್ ಮೂಲಕ ಹೇಗೆ ಅರ್ಜಿ ಸಲ್ಲಿಸಬೇಕು ಎಂಬುದೇ ತಿಳಿಯುವುದಿಲ್ಲ ಎಂದೂ ಕೋರ್ಟ್ ಅಭಿಪ್ರಾಯಪಟ್ಟಿತು.

ಆಕಾಶವಾಣಿಯ ಮೂಲಕ ಪ್ರಚಾರ ಮಾಡಲಾಗುತ್ತಿದೆ ಎಂದು ಗುಜರಾತ್ ಸರ್ಕಾರ ತಿಳಿಸಿತು. ಇದಕ್ಕೆ ಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ಆರ್.ಶಾ ಅವರು, 'ಆಕಾಶವಾಣಿಯನ್ನು ಯಾರು ಕೇಳುತ್ತಾರೆ?' ಎಂದು ಪ್ರಶ್ನಿಸಿದರು.

'ಸ್ಥಳೀಯ ಪತ್ರಿಕೆಗಳಲ್ಲಿ ಏಕೆ ಜಾಹೀರಾತು ನೀಡಿಲ್ಲ? ಸಾಮಾನ್ಯ ಜನರಿಗೆ ಹೇಗೆ ಮಾಹಿತಿ ತಲುಪಿಸುತ್ತೀರಿ? ಜನತೆ ₹ 50 ಸಾವಿರ ಪರಿಹಾರದ ನಿರೀಕ್ಷೆಯಲ್ಲಿದ್ದಾರೆ. ಎಲ್ಲ ಪತ್ರಿಕೆಗಳು, ದೂರದರ್ಶನ ಹಾಗೂ ಸ್ಥಳೀಯ ಚಾನೆಲ್‌ಗಳಲ್ಲಿ ಸಮರ್ಪಕವಾಗಿ ಜಾಹೀರಾತು ನೀಡಬೇಕು' ಎಂದೂ ನ್ಯಾಯಮೂರ್ತಿ ತಾಕೀತು ಮಾಡಿದರು.

ಸುಪ್ರೀಂ ಕೋರ್ಟ್ ಕಳೆದ ಅಕ್ಟೋಬರ್‌ನಲ್ಲಿ, ಮೃತರ ಅವಲಂಬಿತರಿಗೆ ₹50 ಸಾವಿರ ಪರಿಹಾರ ವಿತರಿಸಬೇಕು. ಅದಕ್ಕೂ ಹೆಚ್ಚಿನ ಮೊತ್ತವನ್ನು ಕೇಂದ್ರ, ರಾಜ್ಯ ಸರ್ಕಾರಗಳ ವಿವಿಧ ಯೋಜನೆಯಡಿ ನೀಡಬೇಕು ಎಂದು ತಿಳಿಸಿತ್ತು.

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	27.06 ಕೋಟಿ ▲	3.46 ಕೋಟಿ
ಸಕ್ರಿಯ ಪ್ರಕರಣ	2.19 ಕೋಟಿ ▼	91,456 ▼
ಗುಣಮುಖ	24.34 ಕೋಟಿ ▲	3.41 ಕೋಟಿ
ಸಾವು	53.25 ಲಕ್ಷ ▲	4.75 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.41 ಲಕ್ಷ ▼	7,350 ▼
ಗುಣಮುಖ	3.54 ಲಕ್ಷ ▼	7,973 ▲
ಸಾವು	4,249 ▲	202 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ರಷ್ಯಾ
38,784 ▼	48,854 ▼	29,929 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ರಷ್ಯಾ	ಬ್ರಿಟನ್
98.79 ▲	9.98 ▲	11.18 ▼

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.41 ಲಕ್ಷ
ಕೇರಳ	42,967 ▲
ತಮಿಳುನಾಡು	36,612 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	66.43 ▲
ಕೇರಳ	51.94 ▲
ತಮಿಳುನಾಡು	27.35 ▲

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,59,025 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,531 ▼	12,37,124 ▲	16,369 ▲

ದಿನದ ಏರಿಕೆ

ಹೊಸ ಪ್ರಕರಣ	121 ▼
ಗುಣಮುಖ	188 ▲
ಸಾವು	4 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ನೌಕಾಪಡೆಯ ಮುಖ್ಯಸ್ಥ ವೈಸ್ ಅಡ್ಮಿರಲ್ ಬಿಸ್ವಜಿತ್‌ದಾಸ್ ಗುಪ್ತ

'39 ಸ್ವದೇಶಿ ಸಮರ ನೌಕೆ ನಿರ್ಮಾಣ'

ಪ್ರಜಾವಾಣಿ ವಾರ್ತೆ

ಮಡಿಕೇರಿ: 'ಆತ್ಮನಿರ್ಭರ ಭಾರತ ಯೋಜನೆ ಅಡಿ, 41 ಸಮರ ನೌಕೆಗಳ ಪೈಕಿ 39 ನೌಕೆಗಳನ್ನು ಭಾರತದಲ್ಲಿಯೇ ನಿರ್ಮಿಸಲಾಗುವುದು' ಎಂದು ಪೂರ್ವವಲಯದ ನೌಕಾಪಡೆಯ ಮುಖ್ಯಸ್ಥ ವೈಸ್ ಅಡ್ಮಿರಲ್ ಬಿಸ್ವಜಿತ್‌ದಾಸ್ ಗುಪ್ತ ಸೋಮವಾರ ಇಲ್ಲಿ ಹೇಳಿದರು.

ನಗರದ ಜನರಲ್ ತಿಮ್ಮಯ್ಯ ಮ್ಯೂಸಿಯಂಗೆ ನೌಕಾಪಡೆ ನೀಡಿರುವ ಶಿವಾಲಿಕ್ ಸಮರ ನೌಕೆ ಹಾಗೂ ಸಬ್‌ಮೆರಿನ್ ಮಾದರಿಯನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

'ಸೇನಾಪಡೆಯ ಆಧುನೀಕರಣ ವ್ಯವಸ್ಥೆಯಲ್ಲಿ ಸ್ವದೇಶಿ ನಿರ್ಮಾಣಕ್ಕೆ ಒತ್ತು ನೀಡಲಾಗುತ್ತಿದೆ. ರಾಷ್ಟ್ರದ ಮುಂಬೈ, ಗೋವಾ, ವಿಶಾಖಪಟ್ಟಣ, ಕೋಲ್ಕತ್ತದಲ್ಲಿ ನೌಕೆ ತಯಾರಿಕಾ ಘಟಕಗಳಿವೆ. ಕೊಚ್ಚಿನ್‌ನಲ್ಲಿರುವ ಖಾಸಗಿ ವಲಯದ ತಯಾರಿಕಾ ಘಟಕವೂ ಸೇನೆಯ ಅಗತ್ಯಗಳನ್ನು ಪೂರೈಸುತ್ತಿದೆ' ಎಂದು ಮಾಹಿತಿ ನೀಡಿದರು.

'ವ್ಯಾಪಾರೋದ್ಯಮ ಹಾಗೂ ಗಡಿಭದ್ರತೆಗೆ ನೌಕಾಪಡೆ ಶ್ರಮಿಸುತ್ತಿದೆ. ನೌಕಾಪಡೆಯ ಕೆಲಸವು ಸಮುದ್ರದ ತೀರದಲ್ಲಿರುವ ಕಾರಣಕ್ಕೆ ನಮ್ಮ ಕೆಲಸ ಯಾರ ಕಣ್ಣಿಗೂ ಕಾಣುವುದಿಲ್ಲ. ನೌಕಾಪಡೆಯ ಹೆಜ್ಜೆ ಗುರುತು ವಿಸ್ತಾರವಾದುದು' ಎಂದು ಹೇಳಿದರು.

ಜನರಲ್ ತಿಮ್ಮಯ್ಯ ಹಾಗೂ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಫೋರಂ ಅಧ್ಯಕ್ಷರೂ ಆಗಿರುವ ನಿವೃತ್ತ ಕರ್ನಲ್ ಸುಬ್ಬಯ್ಯ, ರಿಯರ್ ಅಡ್ಮಿರಲ್ ಐಚ್ಚೆಟ್ಟಿರ ಬಿ. ಉತ್ತಯ್ಯ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ನಿವೃತ್ತ ಮೇಜರ್ ಜನರಲ್ ಕೆ.ಪಿ.ನಂಜಪ್ಪ, ನಿವೃತ್ತ ಲೆಫ್ಟಿನೆಂಟ್ ಜನರಲ್ ಪಿ.ಸಿ.ತಿಮ್ಮಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಷಮಾ ಮಿಶ್ರಾ ಹಾಜರಿದ್ದರು. ಯುದ್ಧ ವಿಮಾನ, ಯುದ್ಧ ಟ್ಯಾಂಕ್ ಜೊತೆಗೆ ಸಮರ ನೌಕೆಯು ಜನರಲ್ ತಿಮ್ಮಯ್ಯ ಮ್ಯೂಸಿಯಂಗೆ ಹೊಸ ಸೇರ್ಪಡೆಯಾಗಿದೆ.



ಮಡಿಕೇರಿಯಲ್ಲಿ ಸೋಮವಾರ ಶಿವಾಲಿಕ್ ಸಮರ ನೌಕೆಯ ಮಾದರಿಯನ್ನು ಲೋಕಾರ್ಪಣೆಗೊಳಿಸಿ ಪೂರ್ವವಲಯದ ನೌಕಾಪಡೆಯ ಮುಖ್ಯಸ್ಥ ವೈಸ್ ಅಡ್ಮಿರಲ್ ಬಿಸ್ವಜಿತ್‌ದಾಸ್ ಗುಪ್ತ ಮಾತನಾಡಿದರು

ಕೈಯಿಂದ ಶೌಚಗುಂಡಿ ಶುಚಿಗೊಳಿಸುವವರ ಪುನರ್ವಸತಿ

2023ರ ಫೆಬ್ರುವರಿಗೆ ಸಮೀಕ್ಷೆ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಕೈಯಿಂದ ಶೌಚಗುಂಡಿ ಶುಚಿಗೊಳಿಸುವವರನ್ನು (ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್) ಗುರುತಿಸುವ ಸಮೀಕ್ಷೆ 18 ಜಿಲ್ಲೆಗಳಲ್ಲಿ ಬಾಕಿ ಇದ್ದು, 2023ರ ಫೆಬ್ರುವರಿಯಲ್ಲಿ ಪೂರ್ಣಗೊಳ್ಳಲಿದೆ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿದ ಅವರು, 'ರಾಜ್ಯದ 12 ಜಿಲ್ಲೆಗಳಲ್ಲಿ ಸಮೀಕ್ಷೆ ಪೂರ್ಣಗೊಂಡಿದೆ. ಈ ಜಿಲ್ಲೆಗಳಲ್ಲಿ ಕೈಯಿಂದ ಶೌಚಗುಂಡಿ ಶುಚಿಗೊಳಿಸುವ ಕೆಲಸ ಮಾಡುತ್ತಿದ್ದ 5,080 ಮಂದಿಯನ್ನು ಗುರುತಿಸಲಾಗಿದೆ. ಅವರ ಪುನರ್ವಸತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

ಪುನರ್ವಸತಿಗೆ ಗುರುತಿಸುವವರ ಪೈಕಿ 2,890 ಜನರಿಗೆ ಪರ್ಯಾಯ ಉದ್ಯೋಗಕ್ಕಾಗಿ ₹ 40,000 ನೆರವು ನೀಡಲಾಗಿದೆ. 1993ರಿಂದ ಈವರೆಗೆ ಶೌಚಗುಂಡಿ ಶುಚಿಗೊಳಿಸುವಾಗ ಮೃತಪಟ್ಟಿರುವ 88 ಮಂದಿಯ ಕುಟುಂಬಗಳಿಗೆ ತಲಾ ₹ 10 ಲಕ್ಷ ಪರಿಹಾರ ನೀಡಲಾಗಿದೆ. ಚರಂಡಿ ಮತ್ತು ಆಳುಗುಂಡಿಗಳನ್ನು ಸ್ವಚ್ಛಗೊಳಿಸಲು ಜನರನ್ನು ಬಳಕೆ ಮಾಡುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುತ್ತಿದೆ ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಬಹುತೇಕ ಶೌಚಾಲಯಗಳು ಒಂದು ಗುಂಡಿ ಹೊಂದಿವೆ. ಅಂತಹ ಕಡೆಗಳಲ್ಲಿ ಎರಡನೇ ಗುಂಡಿಗಳನ್ನು ನಿರ್ಮಿಸಲು ಸೂಚಿಸಲಾಗಿದೆ. ಶೌಚಗುಂಡಿಗಳನ್ನು ಸ್ವಚ್ಛಗೊಳಿಸುವುದಕ್ಕಾಗಿ ನಗರಾಭಿವೃದ್ಧಿ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಂದ 177 ಸಕ್ಕಿಂಗ್ ಯಂತ್ರ, 255 ಜೆಟ್ಟಿಂಗ್ ಯಂತ್ರ, 50 ಡೀಸಾಲ್ಟಿಂಗ್ ಯಂತ್ರ, 28 ರಾಡರಿಂಗ್ ಯಂತ್ರ, 132 ಸಕ್ಕಿಂಗ್ ಕಂ ಜೆಟ್ಟಿಂಗ್ ಯಂತ್ರ ಮತ್ತು 13 ಇತರ ಸ್ವಚ್ಛತಾ ಯಂತ್ರಗಳನ್ನು ಖರೀದಿಸಿ, ಬಳಕೆ ಮಾಡಲಾಗುತ್ತಿದೆ ಎಂದು ವಿವರಿಸಿದರು.

ವಿಷಯ ಪ್ರಸ್ತಾಪಿಸಿದ ಹರಿಪ್ರಸಾದ್, 'ಕೈಯಿಂದ ಶೌಚಗುಂಡಿ ಶುಚಿಗೊಳಿಸುವ ಮತ್ತು ಮಲ ಹೊರುವ ಪದ್ಧತಿಯನ್ನು ನಿಷೇಧಿಸಿ 1973-74ರಲ್ಲಿ ಕರ್ನಾಟಕದಲ್ಲಿ ಕಾಯ್ದೆ ತರಲಾಗಿತ್ತು. 2013ರಲ್ಲಿ ಕೇಂದ್ರ ಸರ್ಕಾರವೂ ಕಾಯ್ದೆ ತಂದಿದೆ. ಆದರೆ, ಕೈಯಿಂದ ಶೌಚಗುಂಡಿ ಶುಚಿಗೊಳಿಸುವುದು ಇಂದಿಗೂ ನಿಂತಿಲ್ಲ. ಗುತ್ತಿಗೆದಾರರು ಮತ್ತು ಅಧಿಕಾರಿಗಳ ವಿರುದ್ಧ ಕ್ರಮ ಆಗದಿರುವುದೇ ಇದಕ್ಕೆ ಕಾರಣ' ಎಂದರು.

ಶೌಚಗುಂಡಿ ಮತ್ತು ಆಳುಗುಂಡಿಗಳಿಗೆ ಇಳಿದು ಮೃತಪಟ್ಟವರ ಸಂಖ್ಯೆಯನ್ನು ಸರ್ಕಾರ ನಿಖರವಾಗಿ ನೀಡುತ್ತಿಲ್ಲ. 400 ಜನರು ಸತ್ತರೆ 40 ಜನರ ಮಾಹಿತಿ ಮಾತ್ರ ಒದಗಿಸಲಾಗುತ್ತಿದೆ ಎಂದು ದೂರಿದರು.



ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸೋಮವಾರ ಆರಂಭವಾದ ಕಲಾಪದಲ್ಲಿ ಮಾತನಾಡಿದ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ. ಸಭಾಪತಿ ಬಸವರಾಜ ಹೊರಟ್ಟಿ ಇದ್ದಾರೆ ಪ್ರಜಾವಾಣಿ ಚಿತ್ರ

'ಎಂಜಿನಿಯರ್ ವಿರುದ್ಧ ಕ್ರಮ'

'ಕೆಲವು ಜಾತಿಯ ಜನರು ಕೈಯಿಂದ ಶೌಚಗುಂಡಿ ಮತ್ತು ಆಳು ಗುಂಡಿಗಳನ್ನು ಸ್ವಚ್ಛಗೊಳಿಸುವುದಕ್ಕಾಗಿಯೇ ಇರುತ್ತಾರೆ. ಅವರೇ ಆ ಕೆಲಸ ಮಾಡಬೇಕು' ಎಂದು ಬೆಂಗಳೂರು ಸ್ಮಾರ್ಟ್ ಸಿಟಿಯ ಎಂಜಿನಿಯರ್ ಒಬ್ಬರು ಹೇಳಿಕೆ ನೀಡಿರುವುದಕ್ಕೆ ಸಂಬಂಧಿಸಿದ ಪತ್ರಿಕಾ ತುಣುಕುಗಳನ್ನು ಬಿ.ಕೆ. ಹರಿಪ್ರಸಾದ್ ಸದನದಲ್ಲಿ ಪ್ರದರ್ಶಿಸಿದರು. 'ಸಮಾಜ, ಸರ್ಕಾರ ಒಕ್ಕೊರಲಿನಿಂದ ಇಂತಹವರನ್ನು ಖಂಡಿಸಬೇಕು' ಎಂದರು.

'ಅಧಿಕಾರಿಯ ವರ್ತನೆಯನ್ನು ಸಹಿಸುವುದಿಲ್ಲ. ತಪ್ಪಿತಸ್ಥ ಅಧಿಕಾರಿಗೆ ಸಂಬಂಧಿಸಿದ ಮಾಹಿತಿಯನ್ನು ಹಂಚಿಕೊಂಡರೆ ಅವರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಸಚಿವ ಪೂಜಾರಿ ಭರವಸೆ ನೀಡಿದರು.



ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ಅಧಿವೇಶನಕ್ಕೆ ಭದ್ರತೆ ಕಲ್ಪಿಸಲಾಗಿದ್ದು, ಸೌಧದ ಮೇಲೆ ನಿಂತ ಪೊಲೀಸರು ಕಣ್ಗಾವಲು ಇಟ್ಟಿರುವುದು ಪ್ರಜಾವಾಣಿ ಚಿತ್ರ / ರಂಜು ಪಿ

ಕಲಾಪ: 100 ದಾಟದ ಶಾಸಕರ ಸಂಖ್ಯೆ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ವಿಧಾನಮಂಡಲದ ಚಳಿಗಾಲದ ಅಧಿವೇಶನದ ಮೊದಲ ದಿನವೇ ವಿಧಾನಸಭೆಯಲ್ಲಿ ಬಹುತೇಕ ಶಾಸಕರ ಗೈರು ಹಾಜರಿ ಎದ್ದು ಕಾಣುತ್ತಿತ್ತು.

ಸೋಮವಾರ ಮಧ್ಯಾಹ್ನದವರೆಗೆ ಸುಮಾರು 75 ರಿಂದ 80 ಶಾಸಕರು ಮಾತ್ರ ಭಾಗವಹಿಸಿದ್ದರು. ಮಧ್ಯಾಹ್ನದ ಬಳಿಕವೂ ಸರಿ ಸುಮಾರು ಅಷ್ಟೇ ಶಾಸಕರು ಇದ್ದರು. ಬೆಳಿಗ್ಗೆ ಹಾಜರಾದವರಲ್ಲಿ ಕೆಲವರು ಮಧ್ಯಾಹ್ನದ ಬಳಿಕ ಹಾಜರಾಗಲಿಲ್ಲ.

ಬೆಳಿಗ್ಗೆ 11 ಕ್ಕೆ ಕರೆಗಂಟೆ ಹಾಕಿದರೂ ಸುಮಾರು ಹೊತ್ತು ಕೋರಂ ಇಲ್ಲದೇ ಕಲಾಪ ಆರಂಭವಾಗಲಿಲ್ಲ.

ಶಾಸಕರಾದ ಬಿ.ಎಸ್. ಯಡಿಯೂರಪ್ಪ, ಕಾಂಗ್ರೆಸ್‌ನ ಕೆ.ಆರ್. ರಮೇಶ್‌ಕುಮಾರ್, ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ, ಕೆ.ಎಂ. ಶಿವಲಿಂಗೇಗೌಡ ಅವರು ಎಂದಿನ ಉತ್ಸಾಹದಲ್ಲೇ ಬೆಳಗ್ಗಿನಿಂದ ಸಂಜೆಯವರೆಗೆ ಕಲಾಪದಲ್ಲಿ ಭಾಗವಹಿಸಿದ್ದರು. ಜೆಡಿಎಸ್‌ನ ಶಾಸಕರಾದ ಎಚ್.ಡಿ.ಕುಮಾರಸ್ವಾಮಿ, ಎಚ್.ಡಿ.ರೇವಣ್ಣ ಅವರು ಬಂದಿರಲಿಲ್ಲ. ಕಳೆದ ಅಧಿವೇಶನ ಪೂರ್ತಿ ಗೈರಾಗಿದ್ದ ಉಪಸಭಾಧ್ಯಕ್ಷ ಆನಂದ ಮಾಮನಿ ಕಲಾಪದಲ್ಲಿ ಹಾಜರಾಗಿದ್ದರು.

ಸುವರ್ಣ ವಿಧಾನಸೌಧದ ಹೊರಗೆ ಜನರ ಉತ್ಸಾಹ ಕಂಡು ಬಂದಿತು. ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಕಲಾಪವನ್ನು ವೀಕ್ಷಿಸಲು ಪಾಸ್‌ಗಾಗಿ ಉದ್ದ ಸಾಲೇ ಇತ್ತು.

ಒಂಬತ್ತು ಮಸೂದೆ ಮಂಡನೆಗೆ ಸಹಮತ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಇದೇ 24ರವರೆಗೆ ನಡೆಯುವ ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲಿ ಒಂಬತ್ತು ಮಸೂದೆಗಳ ಮಂಡನೆಗೆ ಸೋಮವಾರ ನಡೆದ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಸಹಮತ ವ್ಯಕ್ತವಾಗಿದೆ.

ಇನ್ನೂ ಎರಡು ಮಸೂದೆ ಮಂಡಿಸುವುದಾಗಿ ಸರ್ಕಾರ ಹೇಳಿದೆ. ಆದರೆ, ಮಸೂದೆಯ ವಿವರಗಳನ್ನು ಹಂಚಿಕೊಂಡಿಲ್ಲ. ಒಂಬತ್ತು ಮಸೂದೆಗಳ ವಿವರಗಳನ್ನು ಮಾತ್ರ ಸಭೆಯಲ್ಲಿ ಒದಗಿಸಲಾಯಿತು. ಉಳಿದ ಎರಡು ಮಸೂದೆಗಳ ವಿವರಗಳನ್ನು ನಂತರ ಒದಗಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಭೆಗೆ ತಿಳಿಸಿದರು ಎಂದು ಮೂಲಗಳು ತಿಳಿಸಿವೆ.

ಮತಾಂತರ ನಿಷೇಧ ಮಸೂದೆ ಮಂಡನೆ ಕುರಿತು ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಸರ್ಕಾರ ಯಾವುದೇ ಮಾಹಿತಿ ನೀಡಿಲ್ಲ. ರಹಸ್ಯವಾಗಿರಿಸಿರುವ ಎರಡು ಮಸೂದೆಗಳಲ್ಲಿ ಅದೂ ಸೇರಿರಬಹುದು ಎಂದು ವಿರೋಧ ಪಕ್ಷಗಳ ನಾಯಕರು ಅನುಮಾನಿಸಿದ್ದಾರೆ.

'ಯಾವುದೇ ಮಸೂದೆ ಮಂಡಿಸುವುದಿದ್ದರೂ ಎರಡು ದಿನ ಮುಂಚಿತವಾಗಿ ಮಾಹಿತಿ ಹಂಚಿಕೊಳ್ಳಬೇಕು. ವಿರೋಧ ಪಕ್ಷಗಳ ಸದಸ್ಯರನ್ನು ಕತ್ತಲೆಯಲ್ಲಿಟ್ಟು ತರಾತುರಿಯಲ್ಲಿ ಯಾವುದೇ ಮಸೂದೆ ಮಂಡಿಸಬಾರದು. ಆ ರೀತಿ ಮಾಡುವುದಕ್ಕೆ ಅವಕಾಶ ನೀಡುವುದಿಲ್ಲ' ಎಂಬುದಾಗಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

'ತರಾತುರಿಯಲ್ಲಿ ಮಸೂದೆಗಳನ್ನು ಮಂಡಿಸಬಾರದು. ಮಸೂದೆ ಪ್ರತಿಗಳನ್ನು ಮೊದಲೇ ಕೊಡಬೇಕು ಎಂದು ವಿರೋಧ ಪಕ್ಷದ ಸದಸ್ಯರು ಕೋರಿದ್ದಾರೆ' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ವಿಧಾನಸಭೆಯಲ್ಲಿ ತಿಳಿಸಿದರು.

24ರವರೆಗೂ ಅಧಿವೇಶನ: ನಿಗದಿಯಂತೆ ಇದೇ 24ರವರೆಗೂ ವಿಧಾನಮಂಡಲ ಅಧಿವೇಶನ ನಡೆಸಲು ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಒಮ್ಮತ ವ್ಯಕ್ತವಾಗಿದೆ.

ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಜನವರಿ 1ರವರೆಗೂ ಕಲಾಪ ನಡೆಸಿ. ಹೊಸವರ್ಷದ ಸಂಭ್ರಮಾಚರಣೆಯನ್ನು ಇಲ್ಲಿಯೇ ಮುಗಿಸಿ ಹೋಗೋಣ' ಎಂದರು. ಆದರೆ, ಅದಕ್ಕೆ ಒಪ್ಪದ ಸರ್ಕಾರ, ನಿಗದಿತ ಸಮಯದವರೆಗೆ ನಡೆಸಲು ಅಭ್ಯಂತರ ಇಲ್ಲ ಎಂದು ಪ್ರತಿಪಾದಿಸಿತು ಎಂದು ಗೊತ್ತಾಗಿದೆ.

ಉತ್ತರ ಕರ್ನಾಟಕ ಚರ್ಚೆಗೆ ಆದ್ಯತೆ: 'ಉತ್ತರ ಕರ್ನಾಟಕದ ಯೋಜನೆಗಳನ್ನು ಹಾಗೂ ಸಮಸ್ಯೆಗಳನ್ನು ಸಾಮರಸ್ಯದಿಂದ ಚರ್ಚೆ ನಡೆಸಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಗಿದೆ' ಎಂದು ಕಾಗೇರಿ ತಿಳಿಸಿದರು.

'ಅನುದಾನಿತ ಶಾಲೆಗಳ ಶಿಕ್ಷಕರ ನೇಮಕ: ಶೀಘ್ರ ನಿರ್ಧರಿಸಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ(ಸುವರ್ಣ ವಿಧಾನಸೌಧ): 'ಅನುದಾನಿತ ಶಾಲೆಗಳಲ್ಲಿ 2015ರವರೆಗೆ ಖಾಲಿ ಇರುವ ಎಲ್ಲ ಶಿಕ್ಷಕರ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳುವ ಕುರಿತು ಗುರುವಾರದ (ಡಿ.16) ಒಳಗೆ ತೀರ್ಮಾನ ತೆಗೆದುಕೊಳ್ಳಬೇಕು' ಎಂದು ಸಭಾಪತಿ ಬಸವರಾಜ ಹೊರಟ್ಟಿ ಸೂಚಿಸಿದರು.

ವಿಧಾನಪರಿಷತ್‌ನಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಮತ್ತಿತರರು ಕೇಳಿದ ಪ್ರಶ್ನೆಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಪರ ಉತ್ತರ ನೀಡಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, '2015ರವರೆಗೆ ಖಾಲಿ ಹುದ್ದೆ ಇದ್ದ 2,081 ಹುದ್ದೆಗಳ ಪೈಕಿ 257 ಹುದ್ದೆಗಳ ಭರ್ತಿಗೆ ಅವಕಾಶ ನೀಡಲಾಗಿದೆ. ಆದರೆ, 12 ಅರ್ಜಿಗಳು ಮಾತ್ರ ಬಂದಿವೆ. ಶಾಲಾ ಆಡಳಿತ ಮಂಡಳಿಗಳು ಹುದ್ದೆಗಳ ನೇಮಕಾತಿ ಕುರಿತು ರಾಜ್ಯಮಟ್ಟದ ಪತ್ರಿಕೆಯಲ್ಲಿ ಜಾಹೀರಾತು ನೀಡಬೇಕು ಸೇರಿದಂತೆ ಕೆಲವು ನಿಯಮಗಳನ್ನು ಪಾಲಿಸಿಲ್ಲ' ಎಂದರು.

ಆಗ ಮಧ್ಯಪ್ರವೇಶಿಸಿದ ಸಭಾಪತಿ, 'ಆರ್ಥಿಕ, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸಚಿವರು ಮತ್ತು ಶಿಕ್ಷಣ ಕ್ಷೇತ್ರದ ಪ್ರತಿನಿಧಿಗಳ ಜೊತೆ ಚರ್ಚಿಸಿ ಸೂಕ್ತ ತೀರ್ಮಾನಕ್ಕೆ ತೆಗೆದುಕೊಳ್ಳಬೇಕು. ಅಲ್ಲಿಯವರೆಗೆ ಹುದ್ದೆಗೆ ಭರ್ತಿಗೆ ಸಂಬಂಧಿಸಿ ಪ್ರಶ್ನೆಯನ್ನು ತಡೆಹಿಡಿಯುತ್ತೇನೆ' ಎಂದರು.

ಬಿಜೆಪಿಯ ಪುಟ್ಟಣ್ಣ, 'ಶಿಕ್ಷಕರ ನೇಮಕಾತಿಗೆ ಇಲಾಖೆಯ ಆಯುಕ್ತರೇ ಅಡ್ಡಗಾಲು ಹಾಕುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರೆ, ಶಶೀಲ್ ನಮೋಶಿ, '2012ಕ್ಕಿಂತಲೂ ಮೊದಲು ಖಾಲಿ ಇದ್ದ ಹುದ್ದೆಗಳ ಭರ್ತಿಗೆ ಅನುಮತಿ ನೀಡಲಾಗಿದೆ. ನಂತರ ಕೆಲವು ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿತ್ತು. ಆದರೆ, ಕೋವಿಡ್ ಕಾರಣದಿಂದ ಅನುಮತಿಗೆ ತಡೆ ನೀಡಲಾಗಿದೆ' ಎಂದರು.

ಬಿಜೆಪಿಯ ಎಸ್.ವಿ. ಸಂಕನೂರ, 'ಶಿಕ್ಷಣ ಇಲಾಖೆಯ ಸಮಸ್ಯೆಗಳು ಆರ್ಥಿಕ ಇಲಾಖೆಗೆ ಅರ್ಥವಾಗುವುದಿಲ್ಲ. ಸಚಿವರಾದವರು ಮುಖ್ಯಮಂತ್ರಿ ಬಳಿ ಹೋಗಿ ಗಟ್ಟಿ ಧ್ವನಿಯಲ್ಲಿ ಒತ್ತಡ ಹಾಕಿ ಅನುಮತಿ ಪಡೆಯಬೇಕು. ಹತ್ತು ವರ್ಷದಿಂದ ನೇಮಕಾತಿಗೆ ಅನುಮತಿ ನೀಡಿಲ್ಲ. ಚಿನ್ನದ ಪದಕಸಹಿತ ಪದವಿ ಪಡೆದವರು ವಯೋಮಿತಿ ಮೀರುತ್ತಿದೆ. ಸರ್ಕಾರ ವಯೋಮಿತಿ ಸಡಿಲಿಕೆ ನೀಡಿ ಶಿಕ್ಷಕರ ನೇಮಕಾತಿಗೆ ಅವಕಾಶ ಮಾಡಿಕೊಡಬೇಕು' ಎಂದು ಒತ್ತಾಯಿಸಿದರು.

ಬಿಜೆಪಿಯ ಅರುಣ್ ಶಹಾಪುರ, '2015ಕ್ಕೂ ಮೊದಲಿನ ಹುದ್ದೆಗಳಿಗೆ ಅನುಮತಿ ನೀಡಿದೆ. ಅನಂತರ ಅನುಮತಿ ನೀಡಿಲ್ಲ. ಹತ್ತು ವರ್ಷ ಶಿಕ್ಷಕರಿಲ್ಲದೆ ಶಾಲೆ ನಡೆಸುವುದು ಹೇಗೆ? ಕೆಲವು ಹುದ್ದೆಗಳಿಗೆ ಅನುಮತಿ ನೀಡಿ, ಉಳಿದ ಹುದ್ದೆಗಳ ಭರ್ತಿಗೆ ಅನುಮತಿ ನಿರಾಕರಿಸಿರುವುದರ ಹಿಂದಿನ ಮರ್ಮವೇನು? ಇದರ ಹಿಂದೆ ಹಣದ ವಹಿವಾಟು ನಡೆದಿದೆ' ಎಂದು ಗಂಭೀರ ಆರೋಪ ಮಾಡಿದರು.

ಸಚಿವರ ಉತ್ತರಕ್ಕೂ ಮೊದಲು ಪಕ್ಷಾತೀತವಾಗಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿ, ಖಾಲಿ ಇರುವ ಎಲ್ಲ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವುದಾಗಿ ಘೋಷಿಸಬೇಕು ಎಂದು ಒತ್ತಾಯಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಅಶ್ವತ್ಥನಾರಾಯಣ, '2,081 ಹುದ್ದೆಯಲ್ಲಿ 257 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಉಳಿದ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆಯ ಜೊತೆ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದರು.

'2 ಸಾವಿರ ಸರ್ವೇಯರ್‌ಗಳ ನೇಮಕ'

ಬೆಳಗಾವಿ (ಸುವರ್ಣ ವಿಧಾನಸೌಧ): ಎರಡು ಸಾವಿರ ಸರ್ವೇಯರ್‌ಗಳ ನೇಮಕ ಪ್ರಕ್ರಿಯೆಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಜೆಡಿಎಸ್‌ನ ರವೀಂದ್ರ ಶ್ರೀಕಂಠಯ್ಯ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, 'ಈಗಾಗಲೇ 600 ಸರ್ವೇಯರ್‌ಗಳ ನೇಮಕ ಮಾಡಲಾಗಿದೆ. ಸರ್ವೇಯರ್‌ಗಳ ನೇಮಕ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಸರ್ವೆ ಸರ್ವೆ ಸಮಸ್ಯೆ ಇರುವುದಿಲ್ಲ. ಸರ್ವೆ, ಪೋಡಿ ಸಮಸ್ಯೆ ಬಗೆಹರಿಸಲು ಹೊಸ ಮಸೂದೆ ತರಲಾಗುವುದು' ಎಂದರು.

ಗ್ರಾಮ ಲೆಕ್ಕಿಗರ ನೇಮಕ: ಬಿಜೆಪಿಯ ಕುಮಾರ ಬಂಗಾರಪ್ಪ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಸಚಿವರು, 'ಕೋವಿಡ್ ಲಾಕ್ ಡೌನ್ ಹಾಗೂ ಪರಿಷತ್ ಚುನಾವಣೆಯ ನೀತಿ ಸಂಹಿತೆಯ ಕಾರಣದಿಂದ ಗ್ರಾಮ ಲೆಕ್ಕಿಗರ ನೇಮಕ ಪ್ರಕ್ರಿಯೆ ಸ್ಥಗಿತಗೊಂಡಿತ್ತು. ನೀತಿ ಸಂಹಿತೆ ಮುಗಿದ ಬಳಿಕ ಜಿಲ್ಲಾಧಿಕಾರಿಗಳು ನೇಮಕ ಪ್ರಕ್ರಿಯೆ ನಡೆಸುವರು. ಕೆಪಿಎಸ್‌ಸಿಗೆ ವಹಿಸಿದರೆ ನೇಮಕ ಪ್ರಕ್ರಿಯೆ ವಿಳಂಬವಾಗುತ್ತದೆ' ಎಂದರು.

'ಲವ್ ಜಿಹಾದ್' ತಡೆಗೂ ಮಸೂದೆ

ಒಂದನೇ ಪುಟದಿಂದ

'ಲವ್ ಜಿಹಾದ್ ಹೆಸರಿನಲ್ಲಿ ಹಿಂದೂ ಹೆಣ್ಣು ಮಕ್ಕಳನ್ನು ಮದುವೆಯಾಗಿ ಬೀದಿಗೆ ಬಿಡುತ್ತಿದ್ದಾರೆ. ವಿದೇಶಗಳಿಗೆ ಮಾರಾಟ ಮಾಡುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಲೇಬೇಕು. ಭಾರತ ಪಾಕಿಸ್ತಾನ ಆಗಲು ಬಿಡುವುದಿಲ್ಲ' ಎಂದು ಹೇಳಿದರು.

'ಬಿಜೆಪಿ ಸರ್ಕಾರದ ವಿರುದ್ಧ ಕಮಿಷನ್ ಆರೋಪ ಬಂದಿರುವುದಕ್ಕಾಗಿ ಈ ಮಸೂದೆಗಳನ್ನು ಮಂಡಿಸುತ್ತಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ಮುಸ್ಲಿಂ ಮತ್ತು ಕ್ರೈಸ್ತ ಧರ್ಮದವರನ್ನು ಓಲೈಕೆ ಮಾಡಿ, ಮತ ಪಡೆಯಲು ಅವರು ಹಾಗೆ ಹೇಳಿದ್ದಾರೆ' ಎಂದು ಈಶ್ವರಪ್ಪ ಪ್ರತಿಕ್ರಿಯಿಸಿದರು.

ಬಿಜೆಪಿಗೆ ಸ್ಪಷ್ಟತೆ ಇದೆ: ಇಂಧನ ಸಚಿವ ವಿ. ಸುನಿಲ್ ಕುಮಾರ್, 'ಗೋಹತ್ಯೆ ನಿಷೇಧ ಕಾಯ್ದೆ ತರುವುದಾಗಿ ಬಿಜೆಪಿ ಮೊದಲಿನಿಂದಲೂ ಹೇಳಿತ್ತು. ಅದನ್ನು ನಮ್ಮ ಸರ್ಕಾರ ಮಾಡಿದೆ. ಮತಾಂತರ ನಿಷೇಧ ಮಸೂದೆಯನ್ನು ಈ ಅಧಿವೇಶನದಲ್ಲೇ ಮಂಡಿಸುತ್ತೇವೆ. ಮುಂದಿನ ದಿನಗಳಲ್ಲಿ ಲವ್ ಜಿಹಾದ್ ನಿಷೇಧ ಕಾಯ್ದೆಯನ್ನೂ ತರುತ್ತೇವೆ. ಈ ವಿಚಾರದಲ್ಲಿ ಬಿಜೆಪಿಗೆ ಸ್ಪಷ್ಟತೆ ಇದೆ' ಎಂದರು. ಯಾವ ಕಾರಣಕ್ಕೆ ಮತಾಂತರ ಆಗುತ್ತಿದೆ? ಅದರ ದುಷ್ಪರಿಣಾಮ ಏನು ಎಂಬುದು ಗೊತ್ತಿದೆ? ಮತಾಂತರ ನಿಷೇಧ ಮಸೂದೆಯನ್ನು ಕಾಂಗ್ರೆಸ್ ಏಕೆ ವಿರೋಧಿಸುತ್ತಿದೆ ಎಂಬುದನ್ನು ಹೇಳಲಿ ಎಂದು ಸವಾಲು ಹಾಕಿದರು.

'ಮಸೂದೆ ಹಿಂದೆ ದುರುದ್ದೇಶ'

ಬೆಳಗಾವಿ: 'ಮತಾಂತರ ನಿಷೇಧ ಮಸೂದೆ ಹಿಂದೆ ದುರುದ್ದೇಶವಿದೆ. ಈ ಕಾನೂನು ಮತೀಯ ಗೂಂಡಾಗಿರಿಗೆ ಅವಕಾಶ ಮಾಡಿಕೊಡಲಿದೆ' ಎಂದು ಕಾಂಗ್ರೆಸ್ ಶಾಸಕ ಕೆ.ಜೆ. ಜಾರ್ಜ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಹಿಂದೂ ಧರ್ಮವಾಗಲಿ ಅಥವಾ ಬೇರೆ ಧರ್ಮವಾಗಲಿ ಶಕ್ತಿಯುತವಾಗಿದೆ. ಬಲವಂತದ ಮತಾಂತರಕ್ಕೆ ನಮ್ಮ ವಿರೋಧವೂ ಇದೆ' ಎಂದರು.

ಮೊಘಲರು, ಡಚ್ಚರು, ಪೋರ್ಚುಗೀಸರು ದೇಶಕ್ಕೆ ಬಂದು, ಹೋದರು. ಆದರೆ, ಹಿಂದೂ ಧರ್ಮೀಯರ ಸಂಖ್ಯೆ ಕಡಿಮೆಯಾಗಿಲ್ಲ. ಕ್ರೈಸ್ತ ಧರ್ಮೀಯರ ಸಂಖ್ಯೆ ಮೊದಲಿಗಿಂತ ಕಡಿಮೆಯಾಗಿದೆ ಎಂದು ಹೇಳಿದರು.

'ಕಾಂಗ್ರೆಸ್‌ನವರಿಗೂ ಇಷ್ಟವಿದೆ'

ಬೆಳಗಾವಿ: 'ಮತಾಂತರ ನಿಷೇಧ ಕಾಯ್ದೆ ತರುವುದು ಕಾಂಗ್ರೆಸ್‌ನ ಕೆಲವರಿಗೆ ಇಷ್ಟವಿದೆ. ಅವರೆಲ್ಲರೂ ಈ ಮಸೂದೆಯನ್ನು ಸ್ವಾಗತ ಮಾಡುತ್ತಿದ್ದಾರೆ. ಮತಾಂತರ ನಿಷೇಧ ಕಾಯ್ದೆ ತರುವುದನ್ನು ಬಹಳಷ್ಟು ಜನ ಬಯಸಿದ್ದಾರೆ' ಎಂದು ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ಅಧಿವೇಶನದಲ್ಲೇ ಮತಾಂತರ ನಿಷೇಧ ಮಸೂದೆ ಮಂಡಿಸಬೇಕು. ಕಾಂಗ್ರೆಸ್ ಪಕ್ಷ ಅನಗತ್ಯವಾಗಿ ವಿರೋಧ ಮಾಡದೆ ಮಸೂದೆ ಅಂಗೀಕಾರಕ್ಕೆ ಸಹಕಾರ ನೀಡಬೇಕು' ಎಂದರು.

ಹಲವು ರಾಜ್ಯಗಳಲ್ಲಿ ಈಗಾಗಲೇ ಮತಾಂತರ ನಿಷೇಧ ಕಾಯ್ದೆ ಜಾರಿಯಲ್ಲಿದೆ. ಈಗ ರಾಜ್ಯದಲ್ಲೂ ತರಲಾಗುತ್ತಿದೆ. ಬಿಜೆಪಿ ಸರ್ಕಾರ ಮಂಡಿಸುವ ಮಸೂದೆಗಳನ್ನು ವಿರೋಧಿಸುವುದು ಸಿದ್ದರಾಮಯ್ಯ ಅವರ ಸ್ವಭಾವ ಎಂದು ಹೇಳಿದರು.

'ಮತಾಂತರ ಕಾಯ್ದೆ ತರುವ ಅಗತ್ಯವೇನಿದೆ?'

'ಬಿಜೆಪಿ ಸರ್ಕಾರ ದುರುದ್ದೇಶದಿಂದ ಮತಾಂತರ ನಿಷೇಧ ಕಾಯ್ದೆ ತರಲು ಹೊರಟಿದೆ. ಅದನ್ನು ನಾವು ವಿರೋಧಿಸುತ್ತೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ವ್ಯಕ್ತಿ ತನಗೆ ಇಷ್ಟವಾದ ಧರ್ಮ ಅನುಸರಿಸಬಹುದು ಎಂಬ ಅಂಶ ಸಂವಿಧಾನದಲ್ಲಿದೆ. ಬಲವಂತದ ಮತಾಂತರವನ್ನೂ ಮಾಡಬಾರದು ಎಂದು ಸಂವಿಧಾನ ಹೇಳುತ್ತದೆ. ಆದರೂ ಈ ಕಾಯ್ದೆ ತರುವ ಅಗತ್ಯವೇನಿದೆ' ಎಂದು ಪ್ರಶ್ನಿಸಿದರು.

'ಕಾಂಗ್ರೆಸ್ ಪಕ್ಷ ಒಂದು ಧರ್ಮದವರ ಪರವಾಗಿದೆ' ಎಂಬ ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ನಾವು ಎಲ್ಲರ ಪರವಾಗಿಯೂ ಇದ್ದೇವೆ. ಜಾತ್ಯತೀತತೆಯಲ್ಲಿ ನಂಬಿಕೆ ಇಟ್ಟಿರುವ ನಾವು ಎಲ್ಲರ ಪರವೂ ಮಾತನಾಡುತ್ತೇವೆ. ಒಂದು ಸಮುದಾಯ, ಧರ್ಮದ ಪರ ಇದ್ದೇವೆ ಎಂಬುದು ಸರಿಯಲ್ಲ' ಎಂದರು.

ಮತಾಂತರ ನಿಷೇಧದ ಅಂಶ ಸಂವಿಧಾನದಲ್ಲೇ ಇದೆ. ಅದನ್ನೇ ಮಸೂದೆ ರೂಪದಲ್ಲಿ ತರಲಾಗುತ್ತಿದೆ.
ಆರ್. ಅಶೋಕ, ಕಂದಾಯ ಸಚಿವ

ಆಸೆ, ಆಮಿಷಗಳ ಮೂಲಕ ಮತಾಂತರ ಮಾಡಲಾಗುತ್ತಿದೆ. ಬಲವಂತದ ಮತಾಂತರ ನಿಷೇಧಕ್ಕೆ ಸರ್ಕಾರ ಕಾಯ್ದೆ ತರಲೇಬೇಕು.
ಗೂಳಿಹಟ್ಟಿ ಶೇಖರ್, ಬಿಜೆಪಿ ಶಾಸಕ

ಬಿಜೆಪಿಯವರು ಭಾವನಾತ್ಮಕವಾಗಿ ಜನರನ್ನು ಹಿಡಿದಿಟ್ಟುಕೊಳ್ಳಲು ಹೀಗೆ ಮಾಡುತ್ತಿದ್ದಾರೆ. ಸಿ.ಎಂ. ಇಬ್ರಾಹಿಂ,
ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ

ಅತಿವೃಷ್ಟಿಯಿಂದಾಗಿ 12.5 ಲಕ್ಷ ಹೆಕ್ಟೇರ್ ಬೆಳೆ ನಾಶ: ಸಿದ್ದರಾಮಯ್ಯ

'ನಯಾಪೈಸೆ ನೆರವು ನೀಡದ ಕೇಂದ್ರ'

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): 'ರಾಜ್ಯದಲ್ಲಿ ಈ ವರ್ಷ ಅತಿವೃಷ್ಟಿಯಿಂದಾಗಿ 12.5 ಲಕ್ಷ ಹೆಕ್ಟೇರ್ ಬೆಳೆ ಹಾನಿ ಆಗಿದೆ. ಆದರೆ, ಕೇಂದ್ರ ಸರ್ಕಾರ ನಯಾಪೈಸೆ ನೆರವು ನೀಡಿಲ್ಲ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಾಪ್ರಹಾರ ನಡೆಸಿದರು.

ರಾಜ್ಯದಲ್ಲಿ ಅತಿವೃಷ್ಟಿಯಿಂದಾದ ಹಾನಿ ಕುರಿತು ವಿಧಾನಸಭೆಯಲ್ಲಿ ಸೋಮವಾರ ನಿಲುವಳಿ ಸೂಚನೆ ಮಂಡಿಸಿ ಮಾತನಾಡಿದ ಅವರು, 'ಅಕ್ಟೋಬರ್ ಹಾಗೂ ನವೆಂಬರ್‌ನಲ್ಲಿ ಸುರಿದ ಮಳೆಯಿಂದಾಗಿ ಶೇ 75ರಷ್ಟು ಬೆಳೆ ಹಾನಿಯಾಗಿದೆ. ಎಲ್ಲ ಬೆಳೆಗಳು ಬಹುತೇಕ ನಾಶ ಆಗಿವೆ. ಮಳೆಯಿಂದಾಗಿ ₹11,916 ಕೋಟಿ ನಷ್ಟ ಉಂಟಾಗಿದೆ ಎಂದು ಸರ್ಕಾರವೇ ಅಂದಾಜಿಸಿದೆ. ಕಳೆದ ಮೂರು ವರ್ಷಗಳಲ್ಲಿ ಮಳೆಯಿಂದಾಗಿ ₹2.5 ಲಕ್ಷ ಕೋಟಿ ನಷ್ಟ ಆಗಿದೆ' ಎಂದು ಹೇಳಿದರು.



ಸಿದ್ದರಾಮಯ್ಯ

ಎರಡು ತಿಂಗಳಲ್ಲಿ ವಾಡಿಕೆ ಪ್ರಕಾರ 166 ಮಿ.ಮೀ ಮಳೆ ಆಗಬೇಕಿತ್ತು. ಆದರೆ, 307 ಮಿ.ಮೀ ಮಳೆ ಆಗಿದೆ. ಅತಿವೃಷ್ಟಿಯಿಂದಾಗಿ ಜನರ ಬದುಕು ಛಿದ್ರ ಆಗಿದೆ. ಜನರು ಕಣ್ಣೀರಿನಲ್ಲಿ ಕೈತೊಳೆದುಕೊಳ್ಳುತ್ತಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

ಆಗ ಮಧ್ಯಪ್ರವೇಶಿಸಿದ ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್, 'ಹೊಸಕೋಟೆಯಲ್ಲಿ ಕೆರೆಗಳು ತುಂಬದೆ 15 ವರ್ಷಗಳು ಕಳೆದಿದ್ದವು. ಈ ವರ್ಷ ಕೆರೆಗಳು ತುಂಬಿವೆ' ಎಂದರು. ಕೆ.ಸಿ. ವ್ಯಾಲಿ ಯೋಜನೆಯಿಂದಾಗಿ ಈ ಕೆರೆಗಳು ತುಂಬಿವೆ ಎಂದು ಕಾಂಗ್ರೆಸ್ ಸದಸ್ಯರು ಪ್ರತಿಪಾದಿಸಿದರು. ಕೆ.ಸಿ. ವ್ಯಾಲಿ ಯೋಜನೆಯಿಂದ ಹೊಸಕೋಟೆಗೆ ಸಿಕ್ಕಿದ್ದು 15 ಎಂಎಲ್‌ಡಿ ಮಾತ್ರ. ಕೆರೆ ತುಂಬಲು ಮಳೆಯೇ ಕಾರಣ ಎಂದು ಎಂಟಿಬಿ ನಾಗರಾಜ್ ಹೇಳಿದರು.

ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ, 'ಸಚಿವರು ಸದನಕ್ಕೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಹೊಸಕೋಟೆಯಲ್ಲಿ ಯಾವ ಕೆರೆಯೂ ಕೋಡಿ ಹರಿದಿಲ್ಲ' ಎಂದು ಆಕ್ಷೇಪಿಸಿದರು. ಎಂಟಿಬಿ ನಾಗರಾಜ್, 'ಹಾಗಿದ್ದರೆ ಶಾಸಕರು ಎರಡು ಕೆರೆಗಳಿಗೆ ಬಾಗಿನ ಅರ್ಪಿಸಿದ್ದು ಏಕೆ' ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ, 'ಕೆರೆಗಳು ತುಂಬಲು ಕೆ.ಸಿ.ವ್ಯಾಲಿ ಯೋಜನೆಯೇ ಕಾರಣ. ಕೋಲಾರದಲ್ಲಿ ಈ ಹಿಂದೆ 1,200 ಅಡಿ ಕೊರೆದರೂ ನೀರು ಸಿಗುತ್ತಿರಲಿಲ್ಲ. ಈಗ 200 ಅಡಿಗೆ ನೀರು ಸಿಗುತ್ತಿದೆ' ಎಂದರು.

'ರಾಜ್ಯದಲ್ಲಿ 2013-14ರಲ್ಲಿ ₹4 ಸಾವಿರ ಕೋಟಿ ಅಬಕಾರಿ ಸುಂಕ ಸಂಗ್ರಹ ಆಗುತ್ತಿತ್ತು. ಈಗ ₹36,000 ಕೋಟಿ ಸಂಗ್ರಹ ಆಗುತ್ತಿದೆ. ಇದರ ಬಗ್ಗೆ ವಿವರವಾಗಿ ಮಾತನಾಡುತ್ತೇನೆ' ಎಂದರು. ಅತಿವೃಷ್ಟಿ ಬಗ್ಗೆ ನಿಯಮ 69ರಡಿ ಚರ್ಚೆಗೆ ಅವಕಾಶ ಮಾಡಿಕೊಡುವೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. 'ನನ್ನ ಹಾಗೂ ಸ್ಪೀಕರ್ ನಡುವೆ ಮ್ಯಾಚ್ ಫಿಕ್ಸಿಂಗ್ ಆಗಿದೆ. ಮಳೆ ಹಾನಿ ಬಗ್ಗೆ ಮಂಗಳವಾರ ವಿಸ್ತೃತವಾಗಿ ಚರ್ಚೆ ನಡೆಸೋಣ' ಎಂದು ಸಿದ್ದರಾಮಯ್ಯ ಹೇಳಿದರು.

ಮುಖ್ಯಾಂಶಗಳು

- 'ಮಳೆಯಿಂದಾಗಿ ₹11,916 ಕೋಟಿ ನಷ್ಟ'
- 'ಮೂರು ವರ್ಷಗಳಲ್ಲಿ ಮಳೆಯಿಂದಾಗಿ ₹2.5 ಲಕ್ಷ ಕೋಟಿ ನಷ್ಟ'

ಕರ್ನಾಟಕ ರತ್ನ: ಶೀಘ್ರ ಪ್ರದಾನ- ಸಿ.ಎಂ ಬೊಮ್ಮಾಯಿ

ಪುನೀತ್‌ಗೆ ಪದ್ಮಶ್ರೀ ಪ್ರಶಸ್ತಿ: ಕೇಂದ್ರಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ದಿವಂಗತ ಚಿತ್ರನಟ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ ಘೋಷಿಸಿರುವ ಕರ್ನಾಟಕ ರತ್ನ ಪ್ರಶಸ್ತಿಯನ್ನು ಶೀಘ್ರದಲ್ಲೇ ಪ್ರದಾನ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸಭೆಯಲ್ಲಿ ಸೋಮವಾರ ಸಂತಾಪ ಸೂಚನಾ ಮಂಡನಾ ನಿರ್ಣಯದ ಮೇಲೆ ಮಾತನಾಡಿದ ಅವರು, 'ಚಿಕ್ಕವಯಸ್ಸಿನಲ್ಲೇ ಎಲ್ಲ ಕ್ಷೇತ್ರದಲ್ಲೂ ಅತ್ಯದ್ಭುತವಾದದ್ದನ್ನು ಸಾಧಿಸಿದ ಪುನೀತ್ ಅವರಿಗೆ ಪ್ರಶಸ್ತಿಯನ್ನು ಈಗಾಗಲೇ ಘೋಷಿಸಲಾಗಿದೆ. ಪ್ರಶಸ್ತಿ ದಿನಾಂಕವನ್ನು ಸದ್ಯವೇ ನಿರ್ಣಯ ಮಾಡಲಾಗುವುದು' ಎಂದು ಹೇಳಿದರು.

ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ನೀಡುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಲಿದೆ ಎಂದೂ ಅವರು ಹೇಳಿದರು.

ಪದ್ಮಶ್ರೀ ಕೊಡಲು ಕೇಂದ್ರಕ್ಕೆ ಶಿಫಾರಸು ಮಾಡಬೇಕೆಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕ ಬಂಡೆಪ್ಪ ಕಾಶೆಂಪೂರ ಆಗ್ರಹಪೂರ್ವಕವಾಗಿ ಪ್ರತಿಪಾದಿಸಿದರು.

ಮಾಮಾ ಎನ್ನುತ್ತಿದ್ದ ಪುನೀತ್: ರಾಜ್ ಕುಮಾರ್ ಕುಟುಂಬದ ಜತೆಗಿನ ಒಡನಾಟವನ್ನು ಇದೇ ವೇಳೆ ಸ್ಮರಿಸಿದ ಸಿದ್ದರಾಮಯ್ಯ, 'ಚಾಮರಾಜನಗರದ ಭಾಷೆಯಲ್ಲೇ ತಮ್ಮ ಜತೆ ಅವರು ಮಾತನಾಡುತ್ತಿದ್ದವರು. ನಮ್ಮ ಭಾಗದವರು ಎನ್ನುವುದನ್ನು 'ನಮ್ಮ ಕಾಡಿನವರು' ಎಂದು ರಾಜ್‌ಕುಮಾರ್ ನಮ್ಮ ಕಡೆಯ ಭಾಷೆಯಲ್ಲೇ ಹೇಳುತ್ತಿದ್ದರು. ಪುನೀತ್ ಕೂಡ ನನ್ನನ್ನು ಮಾಮಾ ಎನ್ನುತ್ತಿದ್ದ. ರಾಜಕುಮಾರ ಸಿನಿಮಾ ಬಿಡುಗಡೆಯಾದಾಗ ನೋಡಿ ಎಂದು ಕೇಳಿಕೊಂಡಿದ್ದ. ಚಿತ್ರಮಂದಿರಕ್ಕೆ ಹೋಗಿ ಸಿನಿಮಾ ನೋಡುವುದನ್ನೇ ದಶಕಗಳ ಕಾಲ ಬಿಟ್ಟಿದ್ದ ನಾನು ಪುನೀತ್‌ಗಾಗಿ ಮೈಸೂರಿನ ಚಿತ್ರಮಂದಿರದಲ್ಲಿ ಸಿನಿಮಾ ನೋಡಿದ್ದೆ' ಎಂದರು.



ವಿಧಾನಸಭೆ ಕಲಾಪದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿದರು. ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಸಚಿವರಾದ ಕೆ.ಎಸ್.ಈಶ್ವರಪ್ಪ, ಬಿ.ಶ್ರೀರಾಮುಲು, ವಿ.ಸೋಮಣ್ಣ, ಉಪಸಭಾಧ್ಯಕ್ಷ ಆನಂದ ಮಾಮನಿ, ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಕಾಂಗ್ರೆಸ್ ಸದಸ್ಯ ವಿ.ಮುನಿಯಪ್ಪ, ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ ಇದ್ದರು

66ರಲ್ಲಿ ಬಡತನ; 131ರಲ್ಲಿ ಹಸಿವು!

ಒಂದನೇ ಪುಟದಿಂದ

ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಿಸಲು ರಚಿಸಲಾಗಿದ್ದ ಉನ್ನತಾಧಿಕಾರ ಸಮಿತಿ, ಈ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆಂದು ಎಂಟು ವರ್ಷಗಳ (2007-08ರಿಂದ 2014-2015) 'ವಿಶೇಷ ಅಭಿವೃದ್ಧಿ ಯೋಜನೆ'ಗೆ ₹ 30 ಸಾವಿರ ಕೋಟಿ ಹಂಚಿಕೆ ಮಾಡಲು ಶಿಫಾರಸು ಮಾಡಿತ್ತು. ಬೆಳಗಾವಿಯಲ್ಲಿ 2017ರಲ್ಲಿ ನಡೆದ ಅಧಿವೇಶನದಲ್ಲಿ ಯೋಜನೆಯ ಅನುಷ್ಠಾನವನ್ನು 2015-16ರಿಂದ 2019-20ರವರೆಗೆ ವಿಸ್ತರಿಸಿ ಮತ್ತೆ ವಾರ್ಷಿಕ ₹ 3 ಸಾವಿರ ಕೋಟಿಯಂತೆ ನೀಡಿ ಮುಂದುವರಿಸಲು ನಿರ್ಧರಿಸಲಾಗಿತ್ತು.

ಅಷ್ಟೂ ಅವಧಿಯಲ್ಲಿ ಬಿಡುಗಡೆಯಾದ ಒಟ್ಟು ಅನುದಾನದಲ್ಲಿ ಶೇ 40ರಷ್ಟು ಕಲ್ಯಾಣ ಕರ್ನಾಟಕ (29 ತಾಲ್ಲೂಕು), ಶೇ 20ರಷ್ಟು ಬೆಳಗಾವಿ ವಿಭಾಗ (31 ತಾಲ್ಲೂಕು), ಶೇ 15ರಷ್ಟು ಮೈಸೂರು ವಿಭಾಗಕ್ಕೆ (22 ತಾಲ್ಲೂಕು) ಶೇ 25ರಷ್ಟು ಬೆಂಗಳೂರು ವಿಭಾಗಕ್ಕೆ (32 ತಾಲ್ಲೂಕು) ಒದಗಿಸಲಾಗಿದೆ.

ಇದೀಗ 'ಎಸ್‌ಡಿಜಿ ಸೂಚ್ಯಂಕ -2021'ನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರ, ವಿಶೇಷ ಅಭಿವೃದ್ಧಿ ಯೋಜನೆಯ ಕಾಲಾವಧಿ ಮುಗಿದಿರುವುದರಿಂದ ನೀತಿ ಆಯೋಗದ 49 ಸೂಚಕಗಳನ್ನು ಅಳವಡಿಸಿ ಹೊಸ 'ಪ್ರಾದೇಶಿಕ ಅಸಮತೋಲನ ಯೋಜನೆ'ಯನ್ನು ಅನುಷ್ಠಾನಗೊಳಿಸಲು ಮುಂದಾಗಿದೆ. ಅದರಂತೆ, ಈ ತಾಲ್ಲೂಕುಗಳ ಅಭಿವೃದ್ಧಿಗೆ ವಾರ್ಷಿಕ ನೀಡಲಾಗುವ ₹ 3 ಸಾವಿರ ಕೋಟಿ ಅನುದಾನ ಯೋಜನೆಯನ್ನು ಇನ್ನೂ 5 ವರ್ಷ ಮುಂದುವರಿಸಿ, ಈ ಐದು 'ಸುಸ್ಥಿರ ಗುರಿ'ಗಳ ಅಭಿವೃದ್ಧಿಗೆ ಬಳಸಲು ಉದ್ದೇಶಿಸಿದೆ. ಬಡತನ ನಿರ್ಮೂಲನೆ, ಹಸಿವು ಮುಕ್ತ, ಉತ್ತಮ ಆರೋಗ್ಯ, ಗುಣಮಟ್ಟದ ಶಿಕ್ಷಣ, ಲಿಂಗ ಸಮಾನತೆ ಸಾಧಿಸಲು ನಿಗದಿತ ತಾಲ್ಲೂಕುಗಳಿಗೆ ಮಾತ್ರ ಅನುದಾನ ಬಿಡುಗಡೆ ಮಾಡಲು ಚಿಂತನೆ ನಡೆಸಿದೆ. ಈ ಉದ್ದೇಶದಿಂದ ರೂಪುರೇಷೆ ಸಿದ್ಧಗೊಂಡಿದ್ದು, ಅನುಮೋದನೆಗಾಗಿ ಶೀಘ್ರವೇ ಸಂಪುಟ ಸಭೆಯಲ್ಲಿ ಮಂಡನೆ ಆಗಲಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

'ಇದುವರೆಗೆ, ವಿಶೇಷ ಅಭಿವೃದ್ಧಿ ಯೋಜನೆಯ ಒಟ್ಟು ಅನುದಾನದಲ್ಲಿ ಶೇ 60ರಷ್ಟು ಕೇವಲ 5 ಇಲಾಖೆಗಳಿಗೆ (ಜಲಸಂಪನ್ಮೂಲ ಶೇ 19, ಗ್ರಾಮೀಣಾಭಿವೃದ್ಧಿ ಶೇ 17, ವಸತಿ ಶೇ 11 ಲೋಕೋಪಯೋಗಿ ಶೇ 7, ಇಂಧನ ಶೇ 6) ಲಭ್ಯವಾಗಿದೆ. ಆದರೆ, ಮಾನವ ಸಂಪನ್ಮೂಲ ಅಭಿವೃದ್ಧಿಗೆ ಕೇವಲ ಶೇ 12.5 (ಶಿಕ್ಷಣ ಶೇ 5.8, ಆರೋಗ್ಯ ಶೇ 5, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಶೇ 1.6) ನಿಗದಿಪಡಿಸಲಾಗಿದೆ. ಮೂಲಸೌಕರ್ಯಕ್ಕೆ ಆದ್ಯತೆ ನೀಡಿದ್ದರಿಂದ ಮಾನವ ಸಂಪನ್ಮೂಲ ಅಭಿವೃದ್ಧಿ ಸಾಧ್ಯವಾಗಿಲ್ಲ. ಹೀಗಾಗಿ, ಯೋಜನೆಯನ್ನು ಪರಿಷ್ಕರಿಸಿ, ಇನ್ನು ಮುಂದೆ ಈ ಅನುದಾನವನ್ನು 153 ತಾಲ್ಲೂಕುಗಳಿಗೆ ಹಂಚಿಕೆ ಮಾಡಿ, ಶೇ 30ರಷ್ಟು ಆರೋಗ್ಯ ಮತ್ತು ಪೌಷ್ಟಿಕತೆಗೆ, ಶೇ 30ರಷ್ಟು ಶಿಕ್ಷಣಕ್ಕೆ, ಶೇ 20ರಷ್ಟು ಕೃಷಿ ಮತ್ತು ಜಲಸಂಪನ್ಮೂಲ, ಶೇ10ರಷ್ಟು ಆರ್ಥಿಕ ಸೇರ್ಪಡೆ ಮತ್ತು ಶೇ 5ರಷ್ಟು ಕೌಶಲಾಭಿವೃದ್ಧಿ, ಶೇ 5ರಷ್ಟು ಮೂಲಸೌಕರ್ಯಕ್ಕೆ ಆದ್ಯತೆ ನೀಡಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ' ಎಂದೂ ಮೂಲಗಳು ಹೇಳಿವೆ.

ರಾಜ್ಯ ಗುತ್ತಿಗೆದಾರರ ಸಂಘ ಒತ್ತಾಯ • ಜನವರಿಯಲ್ಲಿ ಪ್ರತಿಭಟನೆಗೆ ನಿರ್ಧಾರ

ನಿವೃತ್ತ ನ್ಯಾಯಮೂರ್ತಿಯಿಂದ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿವಿಧ ಇಲಾಖೆಗಳಲ್ಲಿ ಶೇಕಡ 40ಕ್ಕೂ ಹೆಚ್ಚು ಕಮಿಷನ್ ಪಡೆಯಲಾಗುತ್ತಿದೆ. ಬೃಹತ್ ಪ್ರಮಾಣದಲ್ಲಿ ನಡೆಯುತ್ತಿರುವ ಈ ಭ್ರಷ್ಟಾಚಾರದ ತನಿಖೆಯನ್ನು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅವರಿಂದ ತನಿಖೆ ನಡೆಸಬೇಕು' ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ (ಕೆಎಸ್‌ಸಿಎ) ಆಗ್ರಹಿಸಿದೆ.


ಡಿ. ಕೆಂಪಣ್ಣ

'ನಾವು ಸಹ ತಪ್ಪು ಮಾಡಿದ್ದೇವೆ. ಈಗಲಾದರೂ ಸರಿಪಡಿಸಿ ಎನ್ನುವ ಕಾರಣಕ್ಕೆ ಹೋರಾಟ ಮಾಡುತ್ತಿದ್ದೇವೆ. ಭ್ರಷ್ಟಾಚಾರ ನಿಯಂತ್ರಿಸುವಂತೆ ಆಗ್ರಹಿಸಿ ಜನವರಿ ಮೂರನೇ ವಾರದಲ್ಲಿ ಬೆಂಗಳೂರಿನಲ್ಲಿ ಸುಮಾರು 1 ಲಕ್ಷ ಗುತ್ತಿಗೆದಾರರು ಬೃಹತ್ ಪ್ರತಿಭಟನೆ ನಡೆಸಲಿದ್ದಾರೆ' ಎಂದು ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕಮಿಷನ್ ಪಡೆಯುತ್ತಿರುವವರ ಹೆಸರುಗಳನ್ನು ನಿರ್ದಿಷ್ಟವಾಗಿ ಬಹಿರಂಗಪಡಿಸಲು ನಿರಾಕರಿಸಿದ ಅವರು, 'ಕಮಿಷನ್ ಪಡೆಯುವವರ ಹೆಸರುಗಳನ್ನು ಜನವರಿ ಮೂರನೇ ವಾರದ ನಂತರ ಬಹಿರಂಗಪಡಿಸುತ್ತೇವೆ. ಭ್ರಷ್ಟಾಚಾರವನ್ನು ಸಾಬೀತು ಮಾಡುವುದು ಕಷ್ಟಸಾಧ್ಯ. ಆದರೆ, ಸ್ವತಂತ್ರ ತನಿಖೆ ಆದೇಶಿಸಿದರೆ ಲಭ್ಯ ಇರುವ ಸಾಕ್ಷ್ಯಾಧಾರಗಳನ್ನು ನೀಡಲು ಸಿದ್ಧ' ಎಂದು ಸ್ಪಷ್ಟಪಡಿಸಿದರು.

'2019ರ ಬಳಿಕ ಭ್ರಷ್ಟಾಚಾರ ವ್ಯಾಪಕವಾಗಿ ಹೆಚ್ಚಾಗಿದೆ. ಸರ್ಕಾರಗಳು ಬದಲಾದಂತೆ ಭ್ರಷ್ಟಾಚಾರ ಕಡಿಮೆಯಾಗಬೇಕು. ಆದರೆ, ಬೆಲೆಗಳು ಏರಿಕೆಯಾದಂತೆ ಭ್ರಷ್ಟಾಚಾರವೂ ಹೆಚ್ಚುತ್ತಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲೇ ಭ್ರಷ್ಟಾಚಾರ ಹೆಚ್ಚು. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲ ರಾಜಕೀಯ ಪಕ್ಷಗಳು ಭ್ರಷ್ಟಾಚಾರದಲ್ಲಿ ಭಾಗಿಯಾಗಿವೆ. ಸಿದ್ದರಾಮಯ್ಯ ಮತ್ತು ಎಚ್.ಡಿ. ಕುಮಾರಸ್ವಾಮಿ ಅವರ ಅವಧಿಯಲ್ಲೂ ಇತ್ತು. ಈಗಲೂ ಇದೆ. ಕೇವಲ ಈ ಸರ್ಕಾರ ಮಾತ್ರ ಹೊಣೆಯಾಗಿದೆ ಎಂದು ಹೇಳುವುದಿಲ್ಲ' ಎಂದರು.

ಬಾಕಿ ಮೊತ್ತ ಬಿಡುಗಡೆಗೆ ಆಗ್ರಹ: 'ಗುತ್ತಿಗೆದಾರರಿಗೆ ವಿವಿಧ ಇಲಾಖೆಗಳಿಂದ ಸುಮಾರು ₹22,000 ಕೋಟಿಗಳಿಗೂ ಹೆಚ್ಚು ಹಣ ಬಿಡುಗಡೆಯಾಗಬೇಕಿದೆ' ಎಂದು ಡಿ. ಕೆಂಪಣ್ಣ ತಿಳಿಸಿದರು.

'2018-19ರಿಂದ ಬಾಕಿ ಉಳಿಸಿಕೊಳ್ಳುವ ಪರಿಪಾಠ ಹೆಚ್ಚಾಗಿದೆ. ಲೋಕೋಪಯೋಗಿ, ಜಲಸಂಪನ್ಮೂಲ ಇಲಾಖೆ ಮತ್ತು ಬಿಬಿಎಂಪಿಯಲ್ಲಿ ಅತಿ ಹೆಚ್ಚು ಕಾಮಗಾರಿಗಳು ನಡೆಯುತ್ತಿವೆ. ಈ ಮೂರೂ ಇಲಾಖೆಗಳಲ್ಲಿ ಈ ಹಿಂದೆ ಪೂರ್ಣಗೊಳಿಸಿರುವ ಕಾಮಗಾರಿಗಳ ಬಾಕಿ ಮೊತ್ತ ₹10 ಸಾವಿರ ಕೋಟಿಗಳನ್ನು ಮೀರುತ್ತದೆ. ಲೋಕೋಪಯೋಗಿ ಇಲಾಖೆ ಸುಮಾರು ₹5 ಸಾವಿರ ಕೋಟಿ ಬಾಕಿ ಉಳಿಸಿಕೊಂಡಿದೆ' ಎಂದು ಹೇಳಿದರು.

ಪ್ಯಾಕೇಜ್ ಪದ್ಧತಿ ಬೇಡ: 'ಸ್ಥಳೀಯ ಗುತ್ತಿಗೆದಾರರನ್ನು ಹೊರಗಿಡುವ ಉದ್ದೇಶದಿಂದಲೇ ಪ್ಯಾಕೇಜ್ ಪದ್ಧತಿಯನ್ನು ಸರ್ಕಾರ ಅನುಸರಿಸುತ್ತಿದೆ. ಅನಗತ್ಯವಾಗಿ ಅರ್ಹತೆಗಳನ್ನು ನಿಗದಿ ಮಾಡಲಾಗುತ್ತಿದೆ. ಹಲವು ಕಾಮಗಾರಿಗಳನ್ನು ಒಗ್ಗೂಡಿಸಿ ನೂರಾರು ಕೋಟಿ ಪ್ಯಾಕೇಜ್ ಎಂದು ಘೋಷಿಸಿ ಟೆಂಡರ್ ಕರೆಯಲಾಗುತ್ತಿದೆ. ಸ್ಥಳಿಯ, ರಾಜ್ಯಮಟ್ಟದ ಗುತ್ತಿಗೆದಾರರನ್ನು ಹೊರಗಿಟ್ಟು, ನೆರೆ ರಾಜ್ಯದ ಗುತ್ತಿಗೆದಾರರನ್ನು ಕರೆತಂದು ಟೆಂಡರ್ ನೀಡಲಾಗುತ್ತಿದೆ' ಎಂದು ಕೆಂಪಣ್ಣ ದೂರಿದರು.

'4ಜಿ ವಿನಾಯಿತಿ ಬೇಡ'

'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆ ಅಡಿಯಲ್ಲಿ 4ಜಿ ವಿನಾಯಿತಿ ನೀಡಿ ಸರ್ಕಾರ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ನೇರವಾಗಿ ವಹಿಸುವುದರಿಂದ ಭ್ರಷ್ಟಾಚಾರಕ್ಕೆ ಆಸ್ಪದ ನೀಡಿದಂತಾಗುತ್ತದೆ' ಎಂದು ಕೆಂಪಣ್ಣ ತಿಳಿಸಿದರು.

'ಕೆಲವು ವಲಯಗಳಲ್ಲಿ ತಮ್ಮ ಆಪ್ತ ಗುತ್ತಿಗೆದಾರರಿಗೆ ಕಾಮಗಾರಿ ವಹಿಸುವುದು ಸಾಮಾನ್ಯವಾಗಿದೆ. ಹೀಗಾಗಿ, ಎಲ್ಲ ರೀತಿಯ ಕಾಮಗಾರಿಗಳನ್ನು ಟೆಂಡರ್ ಮೂಲಕವೇ ನೀಡಬೇಕು' ಎಂದು ಆಗ್ರಹಿಸಿದರು.

'ಆಪ್ತರಿಗೆ ಗುತ್ತಿಗೆ: ಏಜೆಂಟರಿಂದ ಹಣ'

'ಅಧಿಕಾರಸ್ಥರು ತಮ್ಮ ಆಪ್ತರು ಅಥವಾ ಸಂಬಂಧಿಕರಿಗೆ ಕಾಮಗಾರಿಗಳ ಗುತ್ತಿಗೆ ಕೊಡಿಸುವ ಪದ್ಧತಿಯೂ ಜಾರಿಯಲ್ಲಿದೆ. ಬಾಗಲಕೋಟೆಯಲ್ಲಿ ಹಿರಿಯ ಗುತ್ತಿಗೆದಾರರನ್ನು ಕಡೆಗಣಿಸಿ ಹೊಸದಾಗಿ ಲೈಸೆನ್ಸ್ ಪಡೆದಿದ್ದ ಆಪ್ತರೊಬ್ಬರಿಗೆ ₹2.40 ಕೋಟಿ ಮೊತ್ತದ ಕಾಮಗಾರಿಯ ಗುತ್ತಿಗೆ ನೀಡಲಾಗಿದೆ' ಎಂದು ಉಪಾಧ್ಯಕ್ಷ ಆರ್. ಅಂಬಿಕಾಪತಿ ಆರೋಪಿಸಿದರು. 'ಏಜೆಂಟರುಗಳ ಮೂಲಕ ಸಂಬಂಧಿಸಿದವರಿಗೆ ಹಣ ಸಂದಾಯವಾಗುತ್ತದೆ. ಕಾಸು ಕೊಡದಿದ್ದರೆ ನಮ್ಮ ಯಾವುದೇ ಕೆಲಸ ಆಗುವುದಿಲ್ಲ' ಎಂದರು.

'ಕಾಮಗಾರಿಗಳಲ್ಲಿ ಮ್ಯಾಚ್‌ಫಿಕ್ಸಿಂಗ್!'

'ಸಚಿವರು ಮತ್ತು ಶಾಸಕರು ತಮಗೆ ಬೇಕಾದವರಿಗೆ ಕಾಮಗಾರಿಗಳನ್ನು ನೀಡುವ ಉದ್ದೇಶದಿಂದ ಮಹಜರುದಿಂದ ಪ್ಯಾಕೇಜ್‌ಗಳನ್ನು ರೂಪಿಸಿ ವಿವಿಧ ರೀತಿಯ ಷರತ್ತುಗಳನ್ನು ವಿಧಿಸುತ್ತಿದ್ದಾರೆ. ಇದರಿಂದ, ಸ್ಥಳೀಯ ಮತ್ತು ರಾಜ್ಯಮಟ್ಟದ ಗುತ್ತಿಗೆದಾರರಿಗೆ ಅನ್ಯಾಯವಾಗುತ್ತಿದೆ' ಎಂದು ಉಪಾಧ್ಯಕ್ಷ ಆರ್. ಮಂಜುನಾಥ ದೂರಿದರು.

'ಇಡಿಗಂಟು ಬದುಕ್ತಿರುವುದರಿಂದ ಪ್ಯಾಕೇಜ್ ವ್ಯವಸ್ಥೆ ಮಾಡಲಾಗುತ್ತಿದೆ. ಆಂಧ್ರಪ್ರದೇಶದ ಗುತ್ತಿಗೆದಾರರು ಸೂಟ್‌ಕೇಸ್‌ಗಳಲ್ಲಿ ಹಣ ತೆಗೆದುಕೊಂಡು ಬರುತ್ತಿದ್ದಾರೆ. ಇಲ್ಲಿಯೂ ಮ್ಯಾಚ್‌ಫಿಕ್ಸಿಂಗ್ ನಡೆಯುತ್ತಿದೆ' ಎಂದು ಆರೋಪಿಸಿದರು.

ಸುದ್ದಿ 2 ನಿಮಿಷ

ಮತದಾನ ಗೋಪ್ಯತೆ ಉಲ್ಲಂಘನೆ: ಸಂಸದ ಜಾಧವಗೆ ನೋಟಿಸ್

ಕಲಬುರಗಿ: ವಿಧಾನ ಪರಿಷತ್ ಬಿಜೆಪಿ ಅಭ್ಯರ್ಥಿ ಬಿ.ಜಿ. ಪಾಟೀಲ ಅವರ ಪರವಾಗಿ ಮತದಾನ ಮಾಡಿದ್ದಾಗಿ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿ ಗೋಪ್ಯ ಮತದಾನದ ನಿಯಮ ಉಲ್ಲಂಘಿಸಿದ್ದಾರೆ ಎಂಬ ಬಗ್ಗೆ ಬಂದ ದೂರನ್ನು ಆಧರಿಸಿ ಸಂಸದ ಡಾ. ಉಮೇಶ ಜಾಧವ ಅವರಿಗೆ ನೋಟಿಸ್ ನೀಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ವಿ.ವಿ. ಜ್ಯೋತ್ಸ್ನಾ ತಿಳಿಸಿದರು.

ಆಮ್ ಆದ್ಮಿ ಪಕ್ಷದ ಸಂಸದರ ಟ್ವಿಟರ್ ಖಾತೆಯ ಪೋಸ್ಟ್ ಲಗತ್ತಿಸಿ ಚುನಾವಣಾಧಿಕಾರಿಗಳಿಗೆ ದೂರು ನೀಡಿತ್ತು, ಗೋಪ್ಯ ಮತದಾನ ನಿಯಮ ಉಲ್ಲಂಘಿಸಿದ ಸಂಸದರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿತ್ತು.

ಈ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಜ್ಯೋತ್ಸ್ನಾ, 'ಈ ಬಗ್ಗೆ ಸಂಸದರಿಗೆ ನೋಟಿಸ್ ಜಾರಿಗೊಳಿಸಲಾಗಿದೆ. ಅವರ ಉತ್ತರ ನೋಡಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು. ಒಬ್ಬ ಅಭ್ಯರ್ಥಿಯ ಪರವಾಗಿ ಮತ ಹಾಕಿದ್ದೇ ಎಂದು ಜಾಲತಾಣದಲ್ಲಿ ಪ್ರಕಟಿಸಿದ ಮಾತ್ರಕ್ಕೆ ಅವರ ಮತ ಅಸಿಂಧುವಾಗುವುದಿಲ್ಲ. ಮತಪತ್ರದಲ್ಲಿ ಸಂಸದರ ಹೆಸರು ಇರುವುದಿಲ್ಲ. ಅದನ್ನು ಹೊರತುಪಡಿಸಿ ಬೇರೆ ಕಾನೂನು ಕ್ರಮ ಕೈಗೊಳ್ಳಲು ಅವಕಾಶವಿದೆ. ಹೀಗಾಗಿ, ಮತಎಣಿಕೆ ಪ್ರಕ್ರಿಯೆ ಅಡ್ಡಿಯಿಲ್ಲದೇ ನಡೆಯಲಿದೆ' ಎಂದರು.



ಟ್ವಿಟ್ಟರ್‌ನಲ್ಲಿ ಹಾಕಿದ ವಿಚಾರ ವಿವಾದವಾಗುತ್ತಿದ್ದಂತೆ ಸಂಸದ ಜಾಧವ ಅವರು ಟ್ವೀಟ್ ಅಳಿಸಿ ಹಾಕಿದ್ದರು.

'ಹನಿ ನೀರಾವರಿ: ಎಲ್ಲ ರೈತರಿಗೂ ಶೇ 90ರಷ್ಟು ಸಹಾಯಧನ'

ಬೆಳಗಾವಿ: 'ಹನಿ ನೀರಾವರಿ ಘಟಕ ಅಳವಡಿಸಿಕೊಳ್ಳುವ ಎಲ್ಲ ವರ್ಗದ ರೈತರಿಗೂ ಹಿಂದಿನಂತೆಯೇ ಶೇ 90ರಷ್ಟು ಸಹಾಯಧನ ಕೊಡಲಾಗುವುದು. ಈ ನಿಟ್ಟಿನಲ್ಲಿ ಶೀಘ್ರವೇ ಆದೇಶ ಹೊರಬೀಳಲಿದೆ' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಭರವಸೆ ನೀಡಿದರು.
ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಎನ್ನುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ತಾಲ್ಲೂಕಿನ ಕೊಂಡಸಕೊಪ್ಪ ಗ್ರಾಮದ ಗುಡ್ಡದಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಸೋಮವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮುಖಂಡರಿಂದ ಮನವಿ ಸ್ವೀಕರಿಸಿ ಅವರು ಮಾತನಾಡಿದರು.
ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸಿದ್ದೇನೆ. ಹನಿ ನೀರಾವರಿಗೆ ಶೇ 90ರಷ್ಟು ಸಹಾಯಧನವನ್ನು (2 ಎಕರೆವರೆಗೂ) ಕೊಡಲಾಗುವುದು. ವಿಧಾನಪರಿಷತ್ ಚುನಾವಣೆ ನೀತಿಸಂಹಿತೆ ಇರುವುದರಿಂದ ಆದೇಶ ಹೊರಬಿದ್ದಿಲ್ಲ' ಎಂದರು.
ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಮಾತನಾಡಿ, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಾರಾಣಸಿಗೆ ಹೋಗಿದ್ದಾರೆ. ಅವರು ಬಂದ ಕೂಡಲೇ, ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಎಂದು ನಿಮ್ಮ ಬೇಡಿಕೆ ಬಗ್ಗೆ ಚರ್ಚಿಸಲಾಗುವುದು ಎಂದರು.

ಕರಪತ್ರ ಸುಟ್ಟ ಪ್ರಕರಣ: ರಕ್ಷಣೆಗೆ ಕ್ರೈಸ್ತರ ಮೊರೆ

ಪ್ರಜಾವಾಣಿ ವಾರ್ತೆ

ಕೋಲಾರ: ಶ್ರೀನಿವಾಸಪುರದಲ್ಲಿ ಭಾನುವಾರ ಕ್ರೈಸ್ತ ಸಮುದಾಯವರ ಮೇಲೆ ನಡೆದ ಹಲ್ಲೆಯಿಂದ ಸ್ಥಳೀಯ ಕ್ರೈಸ್ತ ಕುಟುಂಬಗಳು ಭಯಭೀತರಾಗಿದ್ದು, ಪೊಲೀಸರ ರಕ್ಷಣೆ ಕೋರಿದ್ದಾರೆ.

ಸೋಮವಾರ ಶ್ರೀನಿವಾಸಪುರಕ್ಕೆ ಭೇಟಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡೆಕ್ಕಾ ಕಿಶೋರ್‌ಬಾಬು ಪರಿಸ್ಥಿತಿ ಅವಲೋಕಿಸಿದರು. ಘಟನೆ ಬಗ್ಗೆ ಸ್ಥಳೀಯ ಪೊಲೀಸರು, ಸ್ಥಳೀಯರು ಮತ್ತು ಕ್ರೈಸ್ತ ಕುಟುಂಬಗಳಿಂದ ಮಾಹಿತಿ ಪಡೆದರು.

'ಅನಿರೀಕ್ಷಿತ ಘಟನೆಯಿಂದ ಆಘಾತವಾಗಿದೆ. ದಯವಿಟ್ಟು ರಕ್ಷಣೆ ಕೊಡಿ' ಎಂದು ಪಾದ್ರಿಗಳು ಮತ್ತು ಸಮುದಾಯದವರು ಮಾಡಿದರು.

'ಕ್ರಿಸ್ಮಸ್ ಹಿನ್ನೆಲೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕು ಹಾಗೂ ಬೆಂಗಳೂರಿನಿಂದ ಸಮುದಾಯದ 20ಕ್ಕೂ ಹೆಚ್ಚು ಮಂದಿ ಪ್ರಾರ್ಥನೆಗಾಗಿ (ಕ್ಯಾರಲ್) ನಮ್ಮ ಸಂಬಂಧಿ ಗೀತಾ ಅವರ ಮನೆಗೆ ಬಂದಿದ್ದರು. ಅವರಲ್ಲಿ ಮಹಿಳೆಯರು, ಯುವತಿಯರು ಇದ್ದರು' ಎಂದು ಹನುಮಂತಪಾಳ್ಯ ನಿವಾಸಿ ನರಸಿಂಹ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಕ್ಯಾರಲ್ ಬಳಿಕ ಕ್ರೈಸ್ತ ಸಮುದಾಯದ ಮಂದಿ ಬಡಾವಣೆಯ ಮನೆ ಮನೆಗೆ ಕರಪತ್ರ ಹಾಗೂ ಗ್ರೀಟಿಂಗ್ ಹಂಚಿದರು. ಈ ಕಾರಣಕ್ಕೆ ಬಡಾವಣೆಯ ಯುವಕರ ಗುಂಪೊಂದು ಮತಾಂತರ ಮಾಡಿಸುತ್ತಿದ್ದೀರಾ ಎಂದು ಆರೋಪಿಸಿ ಅವರನ್ನು ತರಾಟೆಗೆ ತೆಗೆದುಕೊಂಡಿತು. ಮಹಿಳೆಯರು ಮತ್ತು ಯುವತಿಯರನ್ನು ಎಳೆದಾಡಿ ದೌರ್ಜನ್ಯ ನಡೆಸಿತು' ಎಂದು ಆರೋಪಿಸಿದರು.

ನರಸಿಂಹ ಅವರ ಆರೋಪ ನಿರಾಕರಿಸಿರುವ ಪೊಲೀಸರು, ಸ್ಥಳೀಯ ಯುವಕರ ಗುಂಪು ಕರಪತ್ರ ಮತ್ತು ಗ್ರೀಟಿಂಗ್ ಸುಟ್ಟಿರುವುದು ನಿಜ. ಆದರೆ, ಯುವಕರ ಗುಂಪು ಕ್ರೈಸ್ತಧರ್ಮ ಪ್ರಚಾರಕರು ಹಾಗೂ ಸಮುದಾಯದ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿಲ್ಲ ಎಂದು ಹೇಳಿದ್ದಾರೆ.

ಪ್ರಕರಣದ ಬಗ್ಗೆ ಮಾಹಿತಿ ಪಡೆಯಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಹಲವು ಬಾರಿ ಕರೆ ಮಾಡಿದರೂ ಕರೆ ಸ್ವೀಕರಿಸಲಿಲ್ಲ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆ ಆರ್ ಎಸ್*	124.80	124.80	5,945	4,832
ಹಾರಂಗಿ	2,859	2,854.41	74	675
ಕಬಿನಿ	2284.00	2,283.61	890	700
ಹೇಮಾವತಿ	2,922	2,913.03	1,522	2,690
ಲಿಂಗನಮಕ್ಕಿ	1,819	1,810.95	1,083	00
ಸೂಪಾ (ಮೀ)	564	554.04	00	2,612
ಮಾಣಿ	594.36	586.26	00	00
ತುಂಗಭದ್ರಾ	1,633	1,632.99	5,474	5,234
ಮಲಪ್ರಭಾ	2079.5	2,077.15	232	1,019
ಘಟಪ್ರಭಾ	2,175	2,166.16	172	172
ಭದ್ರಾ	186	186	1,057	1,057
ಆಲಮಟ್ಟಿ (ಮೀ)	519.6	519.39	9,277	1,453
ನಾರಾಯಣಪುರ (ಮೀ)	492.25	491.53	354	7,810

*ನೆಲಮಟ್ಟದಿಂದ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕನ್ನಡ ಸಂಘಟನೆ ಕಾರ್ಯಕರ್ತರಿಂದ ಆಕ್ರೋಶ

ಎಂಇಎಸ್ ಪುಂಡಾಟ, ಅಧ್ಯಕ್ಷನ ಮುಖಕ್ಕೆ ಮಸಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿಧಾನಮಂಡಲ ಚಳಿಗಾಲದ ಅಧಿವೇಶನಕ್ಕೆ ಪರ್ಯಾಯವಾಗಿ, ಇಲ್ಲಿನ ತಿಲಕವಾಡಿಯ ವ್ಯಾಕ್ಸಿನ್ ಡಿಪೊ ಮೈದಾನದ ಬಳಿ ಸೋಮವಾರ ಮಹಾಮೇಳಾವ ಆಯೋಜಿಸಿದ್ದ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಅಧ್ಯಕ್ಷ ದೀಪಕ ದಳವಿ ಅವರ ಮುಖಕ್ಕೆ ಕನ್ನಡ ಸಂಘಟನೆ ಕಾರ್ಯಕರ್ತರು ಮಸಿ ಬಳಿದರು. ಇದರಿಂದಾಗಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಮಸಿ ಬಳಿದ ಕರ್ನಾಟಕ ನವನಿರ್ಮಾಣ ಸೇನೆ ಜಿಲ್ಲಾ ಯುವ ಘಟಕದ ಅಧ್ಯಕ್ಷ ಸಂಪತ್‌ಕುಮಾರ್ ದೇಸಾಯಿ ಅವರನ್ನು ಪೊಲೀಸರು ವಶಕ್ಕೆ ಪಡೆದರು.

ಅಧಿಕಾರಿಗಳಿಗೆ ಬೆದರಿಕೆ: ಮಹಾಮೇಳಾವಕ್ಕೆ ನಗರ ಪೊಲೀಸ್ ಕಮಿಷನರೇಟ್ ಅನುಮತಿ ನೀಡದಿದ್ದರೂ ಅನಧಿಕೃತವಾಗಿ ವೇದಿಕೆ ನಿರ್ಮಿಸಿದ್ದರು. ಇದನ್ನು ಮಹಾನಗರ ಪಾಲಿಕೆ ಅಧಿಕಾರಿಗಳು ತೆರವುಗೊಳಿಸಲು ಮುಂದಾಗುತ್ತಿದ್ದಂತೆಯೇ, ಕಾರ್ಯಕರ್ತರು ಅಡ್ಡಿಪಡಿಸಿ, ಅಲ್ಲಿಂದ ತೆರಳುವಂತೆ ಬೆದರಿಕೆ ಹಾಕಿದರು.

ಬಳಿಕ, ಸ್ಥಳಕ್ಕೆ ಬಂದ ಪಾಲಿಕೆ ಉಪ ಆಯುಕ್ತೆ (ಅಭಿವೃದ್ಧಿ) ಲಕ್ಷ್ಮಿ ಸುಳಗೇಕರ ಎಂಇಎಸ್ ಮುಖಂಡರಿಗೆ 'ಈ ಕಾರ್ಯಕ್ರಮಕ್ಕೆ ಅನುಮತಿ ನೀಡಲು ಸಾಧ್ಯವಿಲ್ಲ' ಎಂದು ತಿಳಿಸಿದರು. ಆಗ ಮತ್ತೆ ವೇದಿಕೆ ಏರಿದ ಕಾರ್ಯಕರ್ತರು ವೇದಿಕೆ ತೆರವುಗೊಳಿಸಲು ಅಡ್ಡಿಪಡಿಸಿ, ಸ್ಥಳದಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದರು. ಪೊಲೀಸರ ಸಮ್ಮುಖದಲ್ಲಿಯೇ ಮಾತಿನ ಚಕಮಕಿ ಆಯಿತು.

ಈ ವೇಳೆ, ಮೈದಾನದ ಬಳಿ ಬಂದ ಕನ್ನಡ ಹೋರಾಟಗಾರ ಸಂಪತ್‌ಕುಮಾರ್ ಅವರು ದೀಪಕ ದಳವಿ ಮುಖಕ್ಕೆ ಮಸಿ ಬಳಿದು, ಬೆಳಗಾವಿಯು ಮಹಾರಾಷ್ಟ್ರಕ್ಕೆ ಸೇರಿದ್ದು ಎನ್ನುತ್ತೀರಾ?' ಎಂದು ತರಾಟೆಗೆ ತೆಗೆದುಕೊಂಡರು. 'ಎಂಇಎಸ್ ಗೂಂಡಾಗಳಿಗೆ ಧಿಕ್ಕಾರ' ಎಂದು ಘೋಷಣೆ ಕೂಗಿದರು. ರಾಜ್ಯ ಸರ್ಕಾರದ ವಿರುದ್ಧ ಎಂಇಎಸ್ ಮುಖಂಡರು ಘೋಷಣೆ ಕೂಗಿ ಪ್ರತಿಭಟಿಸಿದರು.

ಬೆಳಗಾವಿ ಬಂದ್ ಕರೆ: 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಪ್ರತಿಭಟಿಸುವ ಹಕ್ಕಿದೆ. ಆದರೆ, ಕನ್ನಡ ಹೋರಾಟಗಾರರು ದಳವಿ ಮುಖಕ್ಕೆ ಮಸಿ ಬಳಿದು, ಮರಾಠಿ ಭಾಷಿಗರನ್ನು ಅವಮಾನಿಸಿದ್ದಾರೆ. ಇದನ್ನು ಖಂಡಿಸಿ ಡಿ.14ರಂದು (ಮಂಗಳವಾರ) ಬೆಳಗಾವಿ ಬಂದ್‌ಗೆ ತೀರ್ಮಾನಿಸಲಾಗಿದೆ' ಎಂದು ಮುಖಂಡರಾದ ಮನೋಹರ ಕಿಣೇಕರ ಮತ್ತು ಶಿವಾಜಿ ಸುಂಠಕರ ತಿಳಿಸಿದರು. ಇದಕ್ಕೆ ಸಭಿಕರು ಸಹಮತ ವ್ಯಕ್ತಪಡಿಸಿ, 'ಬೆಳಗಾವಿ, ಬೀದರ್, ಭಾಲ್ಕಿ, ನಿಪ್ಪಾಣಿ, ಕಾರವಾರ ಸಂಯುಕ್ತ ಮಹಾರಾಷ್ಟ್ರ ಆಗಲೇಬೇಕು' ಎಂದು ಘೋಷಣೆ ಕೂಗಿದರು.

ತಿಲಕವಾಡಿ ಪೊಲೀಸ್ ಠಾಣೆಗೆ ಮೆರವಣಿಗೆಯಲ್ಲಿ ತೆರಳಿ, ಕನ್ನಡ ಹೋರಾಟಗಾರರ ವಿರುದ್ಧ ದೂರು ದಾಖಲಿಸಿದರು. ಹೋರಾಟಗಾರ ಸಂಪತ್‌ಕುಮಾರ ವಿರುದ್ಧ ಕೊಲೆಯತ್ನ ಪ್ರಕರಣವೆಂದು ದೂರು ದಾಖಲಿಸಿದ್ದಾರೆ ಎನ್ನಲಾಗಿದೆ. ಎಂಇಎಸ್ ಮುಖಂಡರ ವಿರುದ್ಧ ನಗರಪಾಲಿಕೆಯಿಂದಲೂ ದೂರು ದಾಖಲಾಗಿದೆ.


ಎಂಇಎಸ್ ಅಧ್ಯಕ್ಷ ದೀಪಕ ದಳವಿ ಅವರಿಗೆ ಮಸಿ ಬಳಿದಿರುವುದು
ಪ್ರಜಾವಾಣಿ ಚಿತ್ರ/ಇಮಾಮಹುಸೇನ್ ಗೂಡುನವರ

ಎಂಇಎಸ್ ಅಳವಡಿಸಿದ್ದ ವೇದಿಕೆಯನ್ನು ತೆರವುಗೊಳಿಸುವ ವೇಳೆ, ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ. ಈ ಬಗ್ಗೆ ತಿಲಕವಾಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೇವೆ
ಲಕ್ಷ್ಮಿ ಸುಳಗೇಕರ, ಉಪ ಆಯುಕ್ತೆ ಮಹಾನಗರ ಪಾಲಿಕೆ, ಬೆಳಗಾವಿ

ಅಧಿವೇಶನ ನಡೆಯುತ್ತಿರುವುದರಿಂದ ಬಂದ್ ಕರೆ ವಾಪಸ್ ಪಡೆಯುವಂತೆ ಎಂಇಎಸ್ ನಾಯಕರ ಮನವೊಲಿಸುತ್ತೇವೆ. ಬಂದ್‌ಗೆ ಅವಕಾಶ ಕೊಡುವುದಿಲ್ಲ
ಡಾ.ಕೆ.ತ್ಯಾಗರಾಜನ್
ನಗರ ಪೊಲೀಸ್ ಆಯುಕ್ತರು

ಡ್ರಗ್ಸ್ ಪ್ರಕರಣದ ವಿಚಾರಣೆಗೆ ಗೈರಾಗಿದ್ದ ಆರೋಪಿ

ಠಾಣೆಗೆ ದಿಢೀರ್ ಹಾಜರಾದ ಶ್ರೀಕೃಷ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡ್ರಗ್ಸ್' ಪ್ರಕರಣದಲ್ಲಿ ಜಾಮೀನು ಪಡೆದು ತಲೆಮರೆಸಿಕೊಂಡಿದ್ದ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26), ಪ್ರಕರಣದ ತನಿಖಾಧಿಕಾರಿ ಎದುರು ಭಾನುವಾರ ಸಂಜೆ ದಿಢೀರ್ ಹಾಜರಾಗಿ ಸಹಿ ಹಾಕಿದ್ದಾನೆ.

ಬಿಟ್ ಕಾಯಿನ್ ಹಗರಣದ ಪ್ರಮುಖ ಸೂತ್ರಧಾರ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಹಾಗೂ ಆತನ ಸ್ನೇಹಿತ ವಿಷ್ಣುಭಟ್‌ನನ್ನು ಜೀವನಬಿಮಾನಗರ ಠಾಣೆ ಪೊಲೀಸರು ಬಂಧಿಸಿದ್ದರು. ಪ್ರಕರಣದಲ್ಲಿ ಶ್ರೀಕೃಷ್ಣನಿಗೆ ಜಾಮೀನು ನೀಡಿದ್ದ ನ್ಯಾಯಾಲಯ,


ಶ್ರೀಕೃಷ್ಣ

ತಿಂಗಳ ಎರಡನೇ ಹಾಗೂ ನಾಲ್ಕನೇ ಶನಿವಾರ ತನಿಖಾಧಿಕಾರಿ ಎದುರು ಹಾಜರಾಗಿ ಸಹಿ ಹಾಕುವಂತೆ ಷರತ್ತು ವಿಧಿಸಿತ್ತು.

ಜಾಮೀನು ಮೇಲೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬಿಡುಗಡೆ ಆಗಿದ್ದ ಶ್ರೀಕೃಷ್ಣ, ಮರುದಿನದಿಂದಲೇ ತಲೆಮರೆಸಿಕೊಂಡಿದ್ದ. ಆತ ಎಲ್ಲಿದ್ದಾನೆಂಬ ಮಾಹಿತಿಯೂ ಪೊಲೀಸರಿಗೆ ಸಿಕ್ಕಿರಲಿಲ್ಲ. ಷರತ್ತಿನ ಪ್ರಕಾರ ಆತ ಠಾಣೆಗೂ ಹಾಜರಾಗಿರಲಿಲ್ಲ. ಆತನ ಜಾಮೀನು ರದ್ದುಪಡಿಸುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಪೊಲೀಸರು ಸಿದ್ಧತೆ ನಡೆಸಿದ್ದರು. ಇದರ ಬೆನ್ನಲ್ಲೇ ಭಾನುವಾರ ಸಂಜೆ ವಕೀಲರ ಜೊತೆಯಲ್ಲಿ ಶ್ರೀಕೃಷ್ಣ ಜೀವನ್ ಬಿಮಾನಗರ ಠಾಣೆಗೆ ಬಂದಿದ್ದ. ತನಿಖಾಧಿಕಾರಿ ಎದುರು ಹಾಜರಾಗಿ, ಠಾಣೆ ಪುಸ್ತಕದಲ್ಲಿ ಸಹಿ ಮಾಡಿ ಹೋಗಿದ್ದಾನೆ.

'ಮಾದಕ ವಸ್ತು ಸೇವಿಸಿ ಹೋಟೆಲೊಂದರ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಶ್ರೀಕೃಷ್ಣ ಹಾಗೂ ಉದ್ಯಮಿಯೊಬ್ಬರ ಮಗ ವಿಷ್ಣು ಭಟ್‌ನನ್ನು ನವೆಂಬರ್ 5ರಂದು ಬಂಧಿಸಲಾಗಿತ್ತು. ಈ ಪ್ರಕರಣದ ತನಿಖೆ ಮುಂದುವರಿದಿದೆ.'

'ಮೂರು ಶನಿವಾರದಂದು ಶ್ರೀಕೃಷ್ಣ ಠಾಣೆಗೆ ಹಾಜರಾಗಿರಲಿಲ್ಲ. ಆತ ರಾಜ್ಯವನ್ನೇ ತೊರೆದು ಪರಾರಿಯಾಗಿರುವ ಮಾಹಿತಿ ಲಭ್ಯವಾಗಿತ್ತು. ಆತನಿಗಾಗಿ ಹುಡುಕಾಟ ಆರಂಭಿಸಲಾಗಿತ್ತು. ಆತನೇ ಭಾನುವಾರ ಠಾಣೆಗೆ ಬಂದು ಸಹಿ ಮಾಡಿ ಹೋಗಿದ್ದು, ವಿಳಾಸದ ಮಾಹಿತಿಯನ್ನೂ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.


'ಡಿ. 25ರಂದು ಪುನಃ ಠಾಣೆಗೆ ಬಂದು ಸಹಿ ಮಾಡುವಂತೆ ಆತನಿಗೆ ಹೇಳಲಾಗಿದೆ. ಆಕಸ್ಮಾತ್ ನಿಗದಿತ ದಿನದಂದು ಆತ ಹಾಜರಾಗದಿದ್ದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದೂ ತಿಳಿಸಿವೆ.

ಹಿರಿಯೂರಿನಲ್ಲಿ ಭೀಕರ ಅಪಘಾತ: ನಾಲ್ವರ ಸಾವು

ಹಿರಿಯೂರು: ನಗರದ ರಾಷ್ಟ್ರೀಯ ಹೆದ್ದಾರಿ–4ರ ಬೈಪಾಸ್‌ನಲ್ಲಿ ಆಲೂರು ಕ್ರಾಸ್ ಸಮೀಪ ಸೋಮವಾರ ಮುಂಜಾನೆ ಈರುಳ್ಳಿ ಸಾಗಿಸುತ್ತಿದ್ದ ಲಾರಿಯ ಟೈರ್ ಸಿಡಿದು ಉರುಳಿ ಬಿದ್ದಾಗ ಈರುಳ್ಳಿ ಚೀಲದಡಿ ಸಿಲುಕಿ ಮೂವರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಮತ್ತೊಬ್ಬರು ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ.

ಗದಗ ಜಿಲ್ಲೆಯ ಹುಯಿಲಗೋಳದ ರೈತರಾದ ಪ್ರಶಾಂತ್ ಹಟ್ಟಿ (36), ಗುರಪ್ಪ ಈರಪ್ಪ ಹೂಗಾರ (30) ಹಾಗೂ ರಮೇಶ ಅಲಿಯಾಸ್ ರಾಮನಗೌಡ ಪಾಟೀಲ, (26) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಸುರೇಶ ಕಳಕಪ್ಪ ಹುನುಗುಂದಿ (30) ಸಾರ್ವಜನಿಕ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಹುಯಿಲಗೋಳದ ಸಂಗಪ್ಪ ತಿಪ್ಪಣ್ಣ ಹಂಚಿನಾಳ್ ಹಾಗೂ ಮಧುಗಿರಿ ತಾಲ್ಲೂಕಿನ ಗಿರಿಯನಪಾಳ್ಯದ ಲಾರಿ ಕ್ಲೀನರ್ ಆನಂದ್ ಅವರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಹುಬ್ಬಳ್ಳಿ ಹಾಗೂ ಗದಗ ಮಾರ್ಕೆಟ್‌ಗಳಲ್ಲಿ ದಲ್ಲಾಳಿಗಳು ಹೆಚ್ಚು ವಸೂಲಿ ಮಾಡುತ್ತಾರೆ. ಬೆಂಗಳೂರಿನಲ್ಲಿ ದಲ್ಲಾಳಿಗಳು ಇರುವುದಿಲ್ಲ. ನಾಲ್ಕು ಕಾಸು ಹೆಚ್ಚು ಸಿಗುತ್ತದೆ' ಎಂದು ರೈತರು ಈರುಳ್ಳಿಯನ್ನು ಒಯ್ಯುತ್ತಿದ್ದರು. ನಾಲ್ವರೂ ಲಾರಿಯ ಮೇಲ್ಭಾಗದಲ್ಲಿ ಮಲಗಿದ್ದರು. ಲಾರಿಯ ಟೈರ್ ಸಿಡಿದಿದ್ದರಿಂದ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಉರುಳಿಬಿದ್ದಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಚಳಿಯಲ್ಲಿ ಬೆಚ್ಚಗಿರಿ



ಡಾ. ಕೆ. ಎಸ್. ಚೈತ್ರಾ

ಚಳಿಗಾಲ ಬಂತೆಂದರೆ ಹಿರಿಯ ನಾಗರಿಕರು 'ಚಳಿಗೆ ಮೂಳೆ ಎಲ್ಲ ಹಿಡಿದುಕೊಳ್ಳುತ್ತೆ; ನೋವು ಹೆಚ್ಚಾಗುತ್ತೆ' ಎಂದು ಗೊಣಗುವುದು ಸಾಮಾನ್ಯ. ಆದರೆ ಈಗೀಗ ವಯಸ್ಸಿನ ಅಂತರವಿಲ್ಲದೇ ಎಲ್ಲರನ್ನೂ ಮೂಳೆ-ಕೀಲಿನ ತೊಂದರೆ ಕಾಡುತ್ತಿದೆ. ಬೆಳಿಗ್ಗೆಯಾದರೆ ಕೀಲುಗಳ ಬಿಗಿತ, ಸಂಜೆಯಾದೊಡನೆ ಕಾಲಿನಲ್ಲಿ ಸೆಳೆತ. ಇದು ಚಳಿಗಾಲದ ಕಥೆ. ಮೂಳೆ–ಕೀಲುಗಳಿಗೆ ಸಂಬಂಧಪಟ್ಟ ಸಮಸ್ಯೆಗಳು ಅತಿ ಹೆಚ್ಚಾಗಿ ಕಾಣಿಸಿಕೊಳ್ಳುವುದು ಚಳಿಗಾಲದಲ್ಲಿ!

> ಚಳಿಗಾಲದಲ್ಲಿ ವ್ಯಾಯಾಮ ಮಾಡುವುದು ಇಡೀ ದೇಹಕ್ಕೆ ರಕ್ತಚಲನೆಯನ್ನು ಹೆಚ್ಚಿಸುವ ಉತ್ತಮ ಮಾರ್ಗವಾಗಿದೆ.

ಚಳಿಗಾಲದಲ್ಲಿ ಮೂಳೆ-ಕೀಲುಗಳ ಬಿಗಿತ-ನೋವು ಹೆಚ್ಚಾಗಲು ಕಾರಣವಿದೆ. ನಮ್ಮ ದೇಹದೊಳಗೆ ನಡೆಯುವ ಆಂತರಿಕ ಕ್ರಿಯೆಗಳು ದೇಹಕ್ಕೆ ಸಿಗುವ ಸೂರ್ಯನ ಬೆಳಕನ್ನು ಅವಲಂಬಿಸಿದೆ. ಋತುಗಳು ಬದಲಾದಂತೆ ಸೂರ್ಯನ ಬೆಳಕಿನಲ್ಲೂ ವ್ಯತ್ಯಾಸವಾಗುತ್ತದೆ. ಚಳಿಗಾಲದಲ್ಲಿ ಭೂಮಿಯಿಂದ ಸೂರ್ಯ ದೂರವಿರುವ ಕಾರಣ ಬೆಳಕಿನ ಪ್ರಮಾಣ ಮತ್ತು ಪ್ರಖರತೆ ಕಡಿಮೆ. ಹೀಗಾಗಿ ದೇಹಕ್ಕೆ ಸಿಗುವ ಸೂರ್ಯನ ಬೆಳಕು ಕಡಿಮೆಯಾಗಿ ಆ ಮೂಲಕ ಸಿಗುವ ವಿಟಮಿನ್ ಡಿ ಪ್ರಮಾಣವೂ ಅಲ್ಪ. ಮೂಳೆಗಳ ಆರೋಗ್ಯಕ್ಕೆ ಕಾರಣವಾದ ವಿಟಮಿನ್ ಡಿ ಕೊರತೆಯಾಗಿ ಮೂಳೆ ದುರ್ಬಲವಾಗುತ್ತದೆ. ಇದಲ್ಲದೇ ಚಳಿಗಾಲದಲ್ಲಿ ಸುತ್ತಲಿನ ವಾತಾವರಣದ ಒತ್ತಡ ತಗ್ಗಿ, ದೇಹದ ಒಳಗಿನ ಒತ್ತಡ ನರಗಳ ಮೇಲೆ ಹೆಚ್ಚಾಗುವ ಸಾಧ್ಯತೆ ಇದೆ. ಹೀಗಾಗಿ ನೋವಿನ ತೀವ್ರತೆ ಹೆಚ್ಚು. ಇದರೊಂದಿಗೆ ತಾಪಮಾನ ತೀವ್ರ ಇಳಿಕೆಯಾದಾಗ ಕೀಲುಗಳ ಒಳಗಿನ ದ್ರವ ಸ್ನಿಗ್ಧವಾಗಬಹುದು. ಇದು ಕೀಲುಗಳ ಚಲನೆಗೆ ಅಡ್ಡಿಯಾಗುತ್ತದೆ.

ಕೆಲವು ಸಲಹೆಗಳು

ವ್ಯಾಯಾಮ: ಕೊರೆಯುವ ಚಳಿಗೆ ವ್ಯಾಯಾಮ ಮಾಡುವುದಕ್ಕಿಂತ ಬೆಚ್ಚಗೆ ಮಲಗುವುದೇ ಸುಖ ಎನ್ನಿಸುವುದು ಸಹಜವೇ! ಆದರೆ ದೈಹಿಕ ಚಟುವಟಿಕೆ ಇದ್ದಾಗ ಮಾತ್ರ ಕೀಲುಗಳ ಚಲನೆಯಾಗುತ್ತದೆ; ಅವನ್ನು ಆಗ ಸುಲಭವಾಗಿ ಬಗ್ಗಿಸಬಹುದು. ಚಳಿಗಾಲದಲ್ಲಿ ವ್ಯಾಯಾಮ ಮಾಡುವುದು ಇಡೀ ದೇಹಕ್ಕೆ ರಕ್ತಚಲನೆಯನ್ನು ಹೆಚ್ಚಿಸುವ ಉತ್ತಮ ಮಾರ್ಗ. ಚಳಿ ಹೆಚ್ಚಾದಂತೆ ರಕ್ತನಾಳಗಳು ಸಂಕುಚನಗೊಳ್ಳುತ್ತವೆ. ಮಹತ್ವದ ಅಂಗಗಳಾದ ಹೃದಯ, ಶ್ವಾಸಕೋಶ, ಮೆದುಳಿಗೆ ರಕ್ತಸಂಚಾರ ಪೂರೈಸುವ ಸಲುವಾಗಿ ಪರಿಧಿಯಲ್ಲಿರುವ ಕೈಕಾಲುಗಳಿಗೆ ರಕ್ತಚಲನೆ ಕಡಿಮೆಯಾಗುತ್ತದೆ. ಹೀಗಾದಾಗ ಮೂಳೆಗಳಲ್ಲಿ ಬಿಗಿತ-ನೋವು ಹೆಚ್ಚು. ವ್ಯಾಯಾಮ ಮಾಡಿದಾಗ ರಕ್ತಸಂಚಾರ ಹೆಚ್ಚಿ ಬಿಗಿತ ಕಡಿಮೆಯಾಗುತ್ತದೆ. ಹಿರಿಯರಲ್ಲಿ ವ್ಯಾಯಾಮದಿಂದ ಕೈ-ಕಾಲುಗಳು ಮತ್ತು ಮೆದುಳಿನ ಹೊಂದಾಣಿಕೆಯೂ ಹೆಚ್ಚುತ್ತದೆ. ಮೂಳೆಯ ಸಾಂದ್ರತೆ ಹೆಚ್ಚಿಸಲು, ಅಸ್ಥಿರಂಧ್ರತೆ ತಡೆಯಲು ವ್ಯಾಯಾಮ ಚಳಿಗಾಲದಲ್ಲೂ ಕಡ್ಡಾಯ!



ಬಿಸಿಲು: ಕಿಟಕಿ-ಬಾಗಿಲು ಭದ್ರ ಮಾಡಿ, ದಪ್ಪ ಸ್ವೆಟರ್ ಹಾಕಿ ಮನೆಯೊಳಗೆ ಕುಳಿತರೆ ಚಳಿ ಕಡಿಮೆಯಾದರೂ ಮೂಳೆ ದುರ್ಬಲವಾಗುವುದು ಖಂಡಿತ! ಸನ್‌ಶೈನ್ ವಿಟಮಿನ್ ಎಂದೇ ಕರೆಯಲಾಗುವ ವಿಟಮಿನ್ ಡಿ ದೇಹದ ಚಯಾಪಚಯ ಕ್ರಿಯೆ, ರೋಗನಿರೋಧಕ ಶಕ್ತಿ ಹೆಚ್ಚಿಸುವುದರ ಜೊತೆ ಮೂಳೆಗಳನ್ನೂ ದೃಢವಾಗಿಸುತ್ತದೆ. ಬೆಳಿಗ್ಗೆ ಹತ್ತರಿಂದ ಮಧ್ಯಾಹ್ನ ಮೂರರವರೆಗೆ ಚಳಿಗಾಲದಲ್ಲಿ ಸೂರ್ಯನ ಬಿಸಿಲು ಪ್ರಖರವಾಗಿದ್ದು ವಾರಕ್ಕೆರಡು ದಿನವಾದರೂ ಒಂದು ತಾಸು ಆ ಬಿಸಿಲಿಗೆ ಮೈ ಒಡ್ಡುವುದು ಒಳ್ಳೆಯದು.

ಬೆಚ್ಚನೆಯ ಉಡುಪು–ಬಿಸಿನೀರ ಸ್ನಾನ: ಚಳಿಗಾಲದಲ್ಲಿ ಬೆಚ್ಚನೆಯ ಉಣ್ಣೆಯ ಉಡುಪು ದೇಹದ ಉಷ್ಣಾಂಶವನ್ನು ಹೆಚ್ಚಿಸುತ್ತದೆ. ದೇಹ ಬೆಚ್ಚಗಿದ್ದಷ್ಟೂ ಮೂಳೆ-ಕೀಲುಗಳ ಮೇಲೆ ಚಳಿಯ ಪ್ರಭಾವ ಕಡಿಮೆಯಾಗುತ್ತದೆ. ಅತಿ ದಪ್ಪದ ಒಂದೇ ಬಟ್ಟೆಗಿಂತ ಪದರ ಪದರಗಳಾಗಿ ಬಟ್ಟೆ ಧರಿಸಿದಾಗ ದೇಹದಿಂದ ಉಷ್ಣತೆ ಹೊರಹೋಗುವ ಸಾಧ್ಯತೆ ಕಡಿಮೆಯಾಗುತ್ತದೆ. ಚಳಿಗಾಲದಲ್ಲಿ ದಿನಕ್ಕೊಮ್ಮೆಯಾದರೂ ಮೈಗೆ ಹಿತವೆನಿಸುವಷ್ಟು ಬಿಸಿನೀರಿನ ಸ್ನಾನ ಮಾಡಬೇಕು; ಏಕೆಂದರೆ ಕೀಲುಗಳ ಬಿಗಿತವನ್ನು ಬಿಸಿನೀರು ಕಡಿಮೆ ಮಾಡುತ್ತದೆ.

ಆಹಾರ: ಚಳಿಗಾಲದಲ್ಲಿ ಹಸಿವು ಹೆಚ್ಚು. ಕರಿದ, ಮಸಾಲೆಯುಕ್ತ ಆಹಾರ ಬಾಯಿಗೆ ರುಚಿ ಎನಿಸಿದರೂ ಆಹಾರಸೇವನೆ ಬಗ್ಗೆ ಗಮನವಿರಲಿ. ರಜೆ-ಹಬ್ಬ-ಹೊಸವರ್ಷ-ಪ್ರವಾಸ ಹೀಗೆ ಚಳಿಗಾಲದಲ್ಲಿ ತೂಕ ಹೆಚ್ಚುವುದು ಸಾಮಾನ್ಯ. ಆದರೆ ತೂಕ ಹೆಚ್ಚಾದಷ್ಟೂ ದೇಹದ ಭಾರ ಹೊರುವ ಮೂಳೆ-ಕೀಲುಗಳ ಮೇಲೆ ಹೊರೆ ಹೆಚ್ಚು. ಹಾಗಾಗಿ ತೂಕ ನಿಯಂತ್ರಣ ಮುಖ್ಯ.

ಮೂಳೆಗಳು ಸದೃಢವಾಗಲು ಕ್ಯಾಲ್ಶಿಯಮ್ ಬೇಕು. ಈ ಕ್ಯಾಲ್ಶಿಯಮ್ ಹಾಲು, ಮೊಸರು, ಬಾದಾಮಿ, ಒಣಗಿದ ಹಣ್ಣು, ದ್ವಿದಳ ಧಾನ್ಯಗಳಲ್ಲಿ ಹೇರಳವಾಗಿವೆ. ಇದರೊಂದಿಗೆ ಮೂಳೆಗಳು ಕ್ಯಾಲ್ಶಿಯಮ್ ಹೀರಿಕೊಳ್ಳಲು ಮೂರು ವಿಟಮಿನ್ ಗಳು (ಡಿ, ಕೆ ಮತ್ತು ಸಿ) ಅವಶ್ಯಕ. ಇವುಗಳಲ್ಲಿ ವಿಟಮಿನ್ ಡಿ - ಸಿಗಡಿ ಮೀನು, ಮೊಟ್ಟೆಯ ಹಳದಿ ಭಾಗ, ಹಾಲು ಮತ್ತು ಚೀಸ್; ವಿಟಮಿನ್ ಕೆ - ಹಸಿರುಸೊಪ್ಪು ಮತ್ತು ತರಕಾರಿಗಳಾದ ಪಾಲಕ್, ಎಲೆಕೋಸು, ಬ್ರೋಕೋಲಿ; ವಿಟಮಿನ್ ಸಿ - ಕಿತ್ತಳೆ, ಲಿಂಬೆ, ಕಿವಿ, ಸ್ಟ್ರಾಬೆರಿ ಹಣ್ಣಿನಲ್ಲಿ ಅಧಿಕವಾಗಿರುತ್ತದೆ. ಇವೆಲ್ಲವೂ ಸೇರಿದ ಹಿತಮಿತ ಸಮತೋಲನ ಆಹಾರ ಅನುಸರಿಸಬೇಕು.

ನೀರು: ಚಳಿ ಎಂದು ಈ ಸಮಯದಲ್ಲಿ ನೀರು ಕುಡಿಯುವ ಪ್ರಮಾಣ ಕಡಿಮೆಯಾಗುತ್ತದೆ. ನೀರು ಕಡಿಮೆಯಾಗಿ ನಿರ್ಜಲೀಕರಣವಾದಾಗ ಕೀಲುಗಳಲ್ಲಿರುವ ದ್ರವವೂ ಕಡಿಮೆಯಾಗಿ ಊತ, ನೋವು ಇರಬಹುದು. ಕೀಲುಗಳಲ್ಲಿರುವ ಸೈನೋವಿಯಲ್ ದ್ರವದ ಉತ್ಪಾದನೆಗೆ ನೀರು ಅಗತ್ಯ. ಆದ್ದರಿಂದ ಅಗತ್ಯವಿದ್ದಷ್ಟು ನೀರು ಕುಡಿಯುವುದನ್ನು ಮರೆಯಬಾರದು.

ಸರಿಯಾದ ಭಂಗಿ: ನಾವು ಕೂರುವ-ನಿಲ್ಲುವ-ಭಾರ ಎತ್ತುವ ರೀತಿ ನಮ್ಮ ಮೂಳೆಗಳ ಸಮಸ್ಯೆಗೆ ಕಾರಣವಾಗಬಹುದು. ಚಳಿಗಾಲದಲ್ಲಿ ಎಲ್ಲೂ ಹೊರಗೆ ಹೋಗದೇ ಮನೆಯಲ್ಲೇ ಬೆನ್ನು ಬಗ್ಗಿಸಿ ಮೊಬೈಲ್ ಆಟ, ಟಿವಿ ನೋಡುವುದು, ಕಂಪ್ಯೂಟರ್ ವೀಕ್ಷಣೆ, ಆನ್‌ಲೈನ್ ಕ್ಲಾಸ್ ಇವುಗಳಿಂದ ಬೆನ್ನು ಮತ್ತು ಸೊಂಟದ ನೋವು ಸಹಜ. ಸರಿಯಾದ ಭಂಗಿ ಅನುಸರಿಸುವುದರ ಜೊತೆ ಗಂಟೆಗಟ್ಟಲೇ ಒಂದೇ ಜಾಗದಲ್ಲಿ ಕೂರುವ ಬದಲು ಅರ್ಧಗಂಟೆಗೊಮ್ಮೆ ಎದ್ದು ಓಡಾಡಬೇಕು. ❖

ಹೃದಯದ ಆರೋಗ್ಯಸೂತ್ರ

ಡಾ. ಪಲ್ಲವಿ ಹೆಗಡೆ

ಚೇತನಾಸ್ಥಾನ, ಚಿಂತನಾಕೇಂದ್ರ, ಶಬ್ದ-ಸ್ಪರ್ಶ-ರೂಪ-ರಸ-ಗಂಧದಂತಹ ಇಂದ್ರಿಯವಿಷಯಗಳ ಗ್ರಾಹಕ, ರಸವಹಸ್ರೋತಸ್ಸು, ಪ್ರಾಣವಹಸ್ರೋತಸ್ಸುಗಳ ಮೂಲ; ದಶಮಹಾಧಮನಿಗಳ ಆಶ್ರಯ; ಅಷ್ಟಬಿಂದುರೂಪದ 'ಓಜಸ್ಸಿ'ನ ನೆಲೆ; ತ್ರಿಮರ್ಮಗಳಲ್ಲಿ ಒಂದು. ಕಟ್ಟಡವನ್ನು ಸ್ಥಿರವಾಗಿಡುವ ಕಂಬ-ಜಂತಿಗಳಂತೆ, ಚಕ್ರದ ನಾಭಿಯಂತೆ ಹೃದಯವೇ 'ಷಡಂಗ'ಗಳನ್ನು ಜೋಡಿಸಿಡುವ-ಆಧರಿಸುವ 'ಮರ್ಮ'.

ಆಹಾರ

ಘನ-ದ್ರವಾಹಾರ ಸಾರವೆಲ್ಲಾ ಹೃದಯದ ಮೂಲಕ ಇತರ ಸ್ರೋತಸ್ಸು-ಧಾತುಗಳ ಪುಷ್ಟಿಗಾಗಿ ಅಭಿವಹನಗೊಳ್ಳುತ್ತದೆ. ಆಹಾರಸೇವನೆಯ ಕಾಲ-ವಿಧಾನವನ್ನಾಧರಿಸಿ ಹೃದಯದ ಪೋಷಣೆಯಾಗುತ್ತದೆ.

ಹಸಿವೆ/ಬಾಯಾರಿಕೆಯಾದಾಗ ಏನನ್ನೂ ಸೇವಿಸದೆ ವ್ಯಾಯಾಮ, ಆಯಾಸವಾಗುವಷ್ಟು ಕೆಲಸಮಾಡುವುದು ಹೃದಯವನ್ನು ಶೋಷಿಸುತ್ತದೆ. ದೇಹಬಯಸಿದ್ದು ಆಹಾರವಾದ್ದರಿಂದ ಜೈವಿಕಕರೆಯನ್ನು ಗೌರವಿಸುವುದೇ ಆರೋಗ್ಯಕ್ಕೆ ರಹದಾರಿ.

ಹಸಿವೆ/ಬಾಯಾರಿಕೆಯಿರದಿದ್ದರೂ ದ್ರವ-ಘನಾಹಾರ ಸೇವಿಸುವುದು ಹೃದಯಮಿಡಿತವನ್ನು ಏರುಪೇರುಗೊಳಿಸುತ್ತದೆ. ಇದು ಕಫಜಹೃದ್ರೋಗಕ್ಕೆ ಕಾರಣ. ಪದೇಪದೇ ತಿಂದರೆ ಹೃದಯಗತಿ ಕೆಡುತ್ತದೆ. ನಿಗದಿತ ಎರಡು/ಮೂರು ಆಹಾರಕಾಲದಲ್ಲಿ ಮಾತ್ರ ಸೇವಿಸುವುದು ಕ್ಷೇಮ.

ಗಡಿಬಿಡಿಯಿಂದ ದ್ರವ-ಘನಾಹಾರದ ಪ್ರಮಾಣ ತಪ್ಪುತ್ತದೆ. ಇದು ಅವರೋಧಾತ್ಮಕ ಹೃದ್ರೋಗಕ್ಕೆ ಕಾರಣವಾಗಬಹುದು. ಸಾವಧಾನವಾಗಿ ಸಾವಕಾಶವಾಗಿ ಸೇವಿಸುವುದು ಹಿತಕರ.

ಇಷ್ಟವಿಲ್ಲದ, ಪರಂಪರೆಯಲ್ಲಿ ಅಭ್ಯಾಸವಿರದ ಆಹಾರಸೇವನೆಯಿಂದ ಧಮನಿಗಳು ಒಣಗಬಹುದು. ಶೋಷಣಾತ್ಮಕ ಹೃದ್ರೋಗಕ್ಕೆ ಕಾರಣವಿದು. ತಾಜಾ, ರುಚಿಕರ ಆಹಾರವನ್ನು ಆಪ್ತೇಷ್ಟರ ಜೊತೆಗೆ ಕುಟುಂಬದ ಅಭ್ಯಾಸದಂತೆ ಸೇವಿಸುವುದು ಹಿತಕರ.

ದ್ರವ-ಘನಾಹಾರ ಸೇವಿಸಿದ ತತ್-ಕ್ಷಣ ಸ್ನಾನ, ಕೂಡಲೆ ಪ್ರಯಾಣ, ವ್ಯಾಯಾಮ, ವಾಕಿಂಗ್, ಕೆಲಸ ಮಾಡುವುದು ಹೃದಯದಲ್ಲಿ ಅವರೋಧ ಮತ್ತು ಕ್ಷಯಜ ತೊಂದರೆಗಳಿಗೆ ಕಾರಣ. ಆಹಾರವು ಜೀರ್ಣಕ್ರಿಯೆಯ ಒಂದು ಹಂತವನ್ನು ತಲುಪುವ-ಮುಗಿಸುವವರೆಗೂ ಕಾಯುವುದು. ಎರಡು-ಮೂರು ತಾಸಿನ ನಂತರ ವ್ಯಾಯಾಮ-ಸ್ನಾನ, ಹತ್ತು-ಹದಿನೈದು ನಿಮಿಷಗಳ ನಂತರ ಪ್ರಯಾಣ, ಕೆಲಸವನ್ನು ಆರಂಭಿಸುವುದು ಉತ್ತಮ.

> ಕಟ್ಟಡವನ್ನು ಸ್ಥಿರವಾಗಿಡುವ ಕಂಬ-ಜಂತಿಗಳಂತೆ, ಚಕ್ರದ ನಾಭಿಯಂತೆ ಹೃದಯವೇ 'ಷಡಂಗ'ಗಳನ್ನು ಜೋಡಿಸಿಡುವ-ಆಧರಿಸುವ 'ಮರ್ಮ'

ಒಣಗಿಸುವ ಒಣಕಲು ಆಹಾರ ಹೃದಯಕ್ಕೆ ಆಪತ್ತು. ಡಯಾಬಿಟಿಸ್ ಇದೆಯೆಂದು ಮೆಂತ್ಯೆ-ಕಹಿಬೇವು-ಕರಿಬೇವು-ಮಧುನಾಶಿನಿ-ನೇರಳೆಬೀಜ-ಹಾಗಲಕಾಯಿ ಮೊದಲಾದ ಕಹಿ-ಒಗರುರುಚಿಯ ಔಷಧ-ಆಹಾರವನ್ನೇ ಸೇವಿಸುವುದು ಹೃದಯವನ್ನು ಪೀಡಿಸುತ್ತದೆ. ಕ್ರಮೇಣ ವಾತಜಹೃದ್ರೋಗವಾಗುತ್ತದೆ. ಕಡ್ಲೆಪುರಿ, ಪಾಪ್‌ಕಾರ್ನ್, ಜಿಡ್ಡುರಹಿತ ಆಹಾರ, ರಿಫೈನ್ಡ್-ಎಣ್ಣೆಗಳ ಅಡುಗೆ, ಪಾಮ್‌ಆಯಿಲ್, ಅಕ್ಕಿತೌಡಿನ ಎಣ್ಣೆ (ರೈಸ್-ಬ್ರಾನ್‌ಆಯಿಲ್), ವೆಜಿಟೇಬಲ್ ಆಯಿಲ್‌ಗಳಂತಹ ಸರಿಯಾಗಿ ಪೋಷಿಸದ, ದೇಹವನ್ನು-ಧಮನಿಗಳನ್ನು ಒಣಗಿಸುವ ಎಣ್ಣೆಗಳ ಬಳಕೆ, ಕ್ಷಾರೀಯ(ಕಾರ್ಬೋನೇಟೆಡ್ ಡ್ರಿಂಕ್ಸ್, ಸೋಡಾ) ಪಾನೀಯ ಸೇವನೆಯ ಅಭ್ಯಾಸ, ತೀಕ್ಷ್ಣ-ಔಷಧಗಳ ಅತ್ಯುಪಯೋಗ ಇವೆಲ್ಲವೂ ಹೃದಯವನ್ನೂ ಆಶ್ರಿತಧಮನಿಗಳನ್ನೂ ಒಣಗಿಸುತ್ತವೆ. ತಮ್ಮ ಸಹಜ ಮೃದುತ್ವವನ್ನು ಕಳೆದುಕೊಂಡು ಒರಟಾಗುತ್ತವೆ.



ಇವೆಲ್ಲವೂ ವಾತಜಹೃದ್ರೋಗಕ್ಕೆ ಕಾರಣ. ತಾಜಾ ಬಿಸಿ ಆಹಾರದಲ್ಲಿ ತುಪ್ಪ, ಅಭ್ಯಾಸವಿರುವ ಸೋಸಿದ ಕೊಬ್ಬರಿಎಣ್ಣೆ/ಕಡಲೆಕಾಯಿಎಣ್ಣೆ/ಸಾಸಿವೆಎಣ್ಣೆ/ಎಳ್ಳೆಣ್ಣೆ, ಅಭ್ಯಾಸದಂತೆ ಮಾಂಸರಸ, ಮಜ್ಜೆ ಮೊದಲಾದ ಜಿಡ್ಡುಳ್ಳ ಆಹಾರಸೇವನೆ ಉತ್ತಮ. ಡಯಾಬಿಟಿಸ್ ಅಥವಾ ಯಾವುದೇ ರೋಗವಿರಲಿ, ಔಷಧಕ್ಕಿಂತ ಆಹಾರ-ನಿದ್ರೆ-ಚಟುವಟಿಕೆಯಲ್ಲಾಗುವ ಕಾರಣಗಳನ್ನು ಗುರುತಿಸಿ-ಸರಿಪಡಿಸಿಕೊಳ್ಳುವುದು ರೋಗಪರಿಹಾರಕ್ಕೆ ಉತ್ತಮಮಾರ್ಗ. ಕಾರಣಸರಿಪಡಿಸಿದರೆ ಅತ್ಯಂತ ಕಡಿಮೆ-ಮೃದು ಔಷಧಗಳಿಂದ ಗುಣಮುಖವಾಗಬಹುದು.

ಆಹಾರದಲ್ಲಿ ತುಪ್ಪ-ಹಾಲಿನ ಸಿಹಿಯ ಬಳಕೆ ಹೃದಯಪೋಷಕ. ನಿತ್ಯವೂ ದಾಳಿಂಬೆ-ನೆಲ್ಲಿಕಾಯಿ-ಒಣದ್ರಾಕ್ಷಿಯ ಹುಳಿಯು ಹೃದಯಚೋದಕ. ಸದಾ ಅಡುಗೆಯಲ್ಲಿ ಸೈಂಧವ-ಉಪ್ಪು (ರಾಕ್ ಸಾಲ್ಟ್, ಸೇಂಧಾನಮಕ್) ಹೃದಯಕ್ಕೆ ಕ್ಷೇಮ. ಬೇಸಿಗೆಯಲ್ಲಿ ಚಿಟಿಕೆಚಂದನಹಾಕಿ-ಕಾಯಿಸಿ-ಆರಿಸಿದ ನೀರು, ಅಮೃತಬಳ್ಳಿಯ ಚಿಗುರಿನ ಅಡುಗೆ - ಕಹಿಯನ್ನು ಇಷ್ಟಪಡುವವರ ಹೃದಯಕ್ಕೆ ಆಪತ್ತು ನೀಡದು. ಶುಂಠಿಯ ಉಪಯೋಗದಿಂದ ಖಾರ ತಿನ್ನುವವರ ಬಾಯಿ ಕಟುವಾದರೂ ಹೃದಯಕ್ಕೆ ಸಿಹಿಯಾಗುತ್ತದೆ. ಭರ್ಜರಿ ಭೋಜನವನ್ನು ಸೇವಿಸಿದ್ದರೆ ತಾಂಬೂಲದ ಅಡಿಕೆಯ ಒಗರು, ಆಹಾರಸೇವನೆಯಿಂದಾದ ಹೃದಯದ ಮೇಲಿನ ಒತ್ತಡವನ್ನು ನಿವಾರಿಸುವ ಹೃದಯಬಂಧು.

ಸಕಾಲನಿದ್ರೆಯೇ ಹೃದಯರಕ್ಷಕ

'ಹಗಲು ದುಡಿಮೆ-ರಾತ್ರಿ ನಿದ್ರೆ' ಇದು ಬದುಕಿನ ಮೂಲಭೂತನಿಯಮ. ಹಗಲು ಮೈಚಾಚಿ ಮಲಗಿದರೆ ಹೃದಯದಲ್ಲಿ ಅವರೋಧ ಖಚಿತ. ಕೆಲಸದಿಂದ ಆಯಾಸವೆನಿಸಿದರೆ ಕಾಲುಚಾಚಿ, ಆರಾಮವಾಗಿ ಕುಳಿತುಕೊಂಡು ವಿರಮಿಸುವುದು ಉಪಯುಕ್ತ. ಮುಂಜಾನೆ ಸೂರ್ಯೋದಯದ ನಂತರ ನಿದ್ರೆಮಾಡುವುದು ಕೂಡಾ ಹಗಲುನಿದ್ರೆ. ಬಾಹ್ಯಚೋದನೆ, ಅಲಾರಾಂನ ಬಡಿತದಿಂದ ಏಳುವುದು ಹೃದಯಕ್ಕೆ ಹಾನಿ. ಹೃದಯವು ಸಹಜವಾಗಿಯೇ ಎಚ್ಚರವಾಗಬೇಕು. ತಡರಾತ್ರಿನಿದ್ರೆ, ರಾತ್ರಿಕೆಲಸ-ಜಾಗರಣೆ ಹೃದಯವನ್ನು, ಧಮನಿಗಳನ್ನು ಚಿರುಟಿಸುತ್ತದೆ. ವಾತಜಹೃದ್ರೋಗಕ್ಕೆ ಕಾರಣ. ಜೀವನದ ಆದ್ಯತೆಗಳನ್ನು ಮನದಟ್ಟುಮಾಡಿಕೊಂಡು ಬೇಗ ಮಲಗಿ-ಮುಂಜಾನೆಯೇ ಎದ್ದು ಕರ್ತವ್ಯಗಳನ್ನು ಮಾಡುವುದು ಯಾವತ್ತಿಗೂ ಹಿತಕರ. ನೆನಪಿರಲಿ, ನಿರಂತರವಾಗಿ ಮಿಡಿಯುವ ಹೃದಯಕ್ಕೆ ಸಕಾಲರಾತ್ರಿನಿದ್ರೆಯೊಂದೇ ಕಿಂಚಿತ್ ವಿರಾಮಕಾಲ.

ಸ್ವಸ್ಥಹೃದಯಕ್ಕಾಗಿ ನಮ್ಮ ನಡವಳಿಕೆ

ಹೃದಯದ ಸ್ಪಂದನೆ-ಮಿಡಿತಗಳನ್ನು ಹದಗೆಡಿಸುವುದು ಮೋಹ, ದುರಾಸೆ, ಅಸೂಯೆ, ದ್ವೇಷ, ಸಿಟ್ಟು ಮೊದಲಾದ ವಿಪರೀತಭಾವಗಳು. ಇವುಗಳು ನೀಡುವ ಚಡಪಡಿಕೆಯಿಂದ ಚಿಂತೆಯಾಗುತ್ತದೆ. ಅತಿಚಿಂತೆಯಿಂದ ಹೃದಯವೇ ಸೊರಗುವುದು. ಈ ಮನಃಸ್ಥಿತಿಗಳೇ ನಮ್ಮ ದೈನಂದಿನ ಆಹಾರ-ನಿದ್ರೆ-ವ್ಯವಹಾರಗಳಲ್ಲಿನ ಏರುಪೇರುಗಳಿಗೆ ಕಾರಣ. ಅವ್ಯವಸ್ಥಿತಜೀವನ ಮೊದಲು ವ್ಯಕ್ತಿಯನ್ನೇ ಹಿಂಸಿಸುತ್ತದೆ. ಬೇರೆಯವರಿಗೆ ನಂತರದಲ್ಲಿ ಹಿಂಸೆಯಾಗುತ್ತದೆ. ಅಹಿಂಸೆಯಿಂದ ಪ್ರಾಣವನ್ನು ಕಾದಿಡುವ ಹೃದಯವರ್ಧನೆ. ಅನಿಶ್ಚಿತಬದುಕು ಭಯಕ್ಕೆ ಕಾರಣ. ಹೃದಯದ ಬಲವನ್ನು ಭಯವು ಕಸಿದುಕೊಂಡಾಗಲೇ ಡವಡವಬಡಿತ. ಜಂಘಾಬಲವೂ ಕುಸಿಯುವುದು. ವ್ಯವಸ್ಥಿತ-ಸನ್ಮಾರ್ಗದ ಬದುಕು ಸ್ಥೈರ್ಯಕ್ಕೆ ಮೂಲ. ಸರಿ-ತಪ್ಪುಗಳ, ಕಾರ್ಯಕಾರಣಗಳ ವಿವೇಚಿತ ಪರಿಚಯವಿಲ್ಲದಿದ್ದಾಗ ಎಲ್ಲವೂ ಸಂಶಯಾಸ್ಪದ. ಬದುಕಿನಲ್ಲಿ ವಿವೇಚನೆಯಿಂದಾಗಿ ಏಳಿಗೆ ಸಾಧ್ಯ. ಇದು ಹೃದಯಕ್ಕೆ ನಿರಾಳತೆ. ಇಂದ್ರಿಯಗಳ ತುಡಿತಗಳನ್ನೇ ಕಡಿತಗೊಳಿಸಿದರೆ ದುಃಖಕ್ಕೆಲ್ಲಿ ಅವಕಾಶವಿರುತ್ತದೆ? ಆಸೆ ಮೊಟಕಾದಷ್ಟೂ ಕಮ್ಮಿನಿರಾಸೆ. ನಲಿವು ಹೃದಯದಲ್ಲಿ ನೆಲೆಸುತ್ತದೆ. ಸಮಚಿತ್ತದಲ್ಲಿದ್ದಾಗ ಹೃದಯಕ್ಕೆ ಚೇತರಿಕೆ ನೀಡುವ ಚಿಂತನೆ ಸಾಧ್ಯ. ಇದರಿಂದ ಬದುಕಿಗೊಂದು ಧೈರ್ಯ-ಧ್ಯೇಯ ದೊರಕುತ್ತದೆ. ಸದಾ ನಮ್ಮೊಳಗಿನ ಈ ಸ್ಥಿತಿಯಿಂದ ಖುಷಿಯಾಗಿರಲು ಸಾಧ್ಯ. ಇಂತಹ ಹೃದಯವೈಶಾಲ್ಯತೆ ಸದಾ ಜಾರಿಯಲ್ಲಿದ್ದರೆ ಬದುಕೆಲ್ಲಿದೆಯೋ ಅಲ್ಲೇ ಸ್ವರ್ಗ. ನಮಗಾಗಿ ಸ್ಪಂದಿಸುವ ಹೃದಯಕ್ಕೆ ಸ್ಪಂದಿಸೋಣ. ❖

ಅಳು ಎಂಬ ಸಾಂತ್ವನ!

ರಮ್ಯಾ ಶ್ರೀಹರಿ

ಮಾತು ಬಾರದ ಚಿಕ್ಕ ಮಕ್ಕಳು ದನಿ ತೆಗೆದು ಅಳುವುದು ಸಂವಹಿಸುವುದಕ್ಕಾಗಿ, 'ನನಗೇನೋ ತೊಂದರೆ ಆಗಿದೆ, ಇಲ್ಲಿ ಗಮನ ಕೊಡು' ಎಂದು ಹೇಳುವುದಕ್ಕಾಗಿ. ನಿಧಾನವಾಗಿ ಮಾತು ಕಲಿತ ಮೇಲೆ ಭಾವನೆಗಳ ಒತ್ತಡದಿಂದ ಉಮ್ಮಳಿಸಿ ಬರುವ ಕಣ್ಣೀರೂ ಕೂಡ ಸಂವಹಿಸುವುದಕ್ಕಾಗಿಯೇ. ತನ್ನ ನೋವನ್ನು ಬೇರೆಯವರಿಗೆ ನಿವೇದಿಸಿಕೊಂಡು ಅವರಿಂದ ಸಾಂತ್ವನ ಪಡೆಯುವುದಕ್ಕಾಗಿಯೇ. ಆದರೂ ಹಾಗೆಲ್ಲ 'ಎಲ್ಲರ ಮುಂದೆ ಅಳುವುದು ಏನು ಚೆಂದ' ಎನ್ನುತ್ತದೆ ಅಹಂ. ಸಹಜವಾದ ದುಃಖದ ಅಭಿವ್ಯಕ್ತಿಯಾದ ಕಣ್ಣೀರು ಎದೆಯ ಭಾರವನ್ನು ಕಡಿಮೆ ಮಾಡುವುದಲ್ಲದೆ, ದುಃಖವನ್ನು ಸಂಪೂರ್ಣವಾಗಿ ಅನುಭವಿಸುವ ಅವಕಾಶ ಮಾಡಿಕೊಡುವುದರಿಂದ ವಾಸ್ತವಕ್ಕೆ ಬೇಗ ಹೊಂದಿಕೊಳ್ಳುವ ಶಕ್ತಿಯನ್ನೂ ನೀಡುತ್ತದೆ. ಎಷ್ಟೋ ಬಾರಿ ಬಿಕ್ಕಳಿಸಿ ಜೋರಾಗಿ ಅತ್ತು ಹೊರಳಾಡಿದ ನಂತರ ಎಲ್ಲ ನಿಚ್ಚಳವಾಗಿ ಕಾಣಲಾರಂಭಿಸಿ ಹೊಸದಾಗಿ ಮತ್ತೆ ಉತ್ಸಾಹ ಮೂಡುತ್ತದೆ. ಅತ್ತ ನಂತರದ ನಮ್ಮದೇ ಮುಖ ಅತ್ಯಂತ ಶುದ್ಧವಾಗಿಯೂ ಸುಂದರವಾಗಿಯೂ ಇದೆ ಎನಿಸಿ ನಮ್ಮ ಬಗ್ಗೆ ನಮಗಿರುವ ಕಹಿ ಭಾವವೂ ಕರಗಿಹೋದಂತೆ ಅನಿಸುತ್ತದೆ.

ಅಳುವಿಗೆ ಆಳವಾದ ಅರ್ಥವಿದೆ. ಪ್ರತಿಯೊಬ್ಬರೂ ಅಳುವಿನ ಅರ್ಥವನ್ನು ತಮ್ಮ ಬದುಕಿನ ಹಿನ್ನೆಲೆಯಲ್ಲಿ ಕಂಡುಕೊಂಡಿರುತ್ತಾರೆ. ಹಾಗಾಗಿ ಯಾರಾದರೂ ಅಳುತ್ತಿದ್ದರೆ 'ಅಳಬೇಡ' ಎಂದು ಹೇಳುವುದೂ, 'ಇಂಥ ಸನ್ನಿವೇಶದಲ್ಲಿ ಅತ್ತುಬಿಡಬೇಕು, ಅಳು' ಎಂದು ಬಲವಂತಪಡಿಸುವುದೂ ಎರಡೂ ಪ್ರಯೋಜನವಿಲ್ಲದ್ದು. ಅಳುತ್ತಿರುವವರಿಗೆ 'ನಿನ್ನ ದುಃಖ ಅರ್ಥವಾಗುತ್ತಿದೆ' ಎಂದು ನಮ್ಮ ದೇಹಭಾಷೆಯ ಮೂಲಕ ತಿಳಿಯಪಡಿಸಬಹುದು. ಅವರೊಂದಿಗೆ 'ನಿನ್ನ ಮನಬಂದಂತೆ ಅಳುವುದಕ್ಕೆ ಇಲ್ಲಿ ಅವಕಾಶವಿದೆ, ಹೆದರಬೇಡ' ಎಂಬ ನಂಬಿಕೆ ಬರುವಂತೆ ನಡೆದುಕೊಂಡರೆ ಸಾಕು.

> ಅಳು ಬಲಹೀನತೆಯ ಲಕ್ಷಣವಲ್ಲ; ಬಹುದೀರ್ಘಕಾಲ ಬದುಕಿನ ಹೋರಾಟದಲ್ಲಿ ಗಟ್ಟಿಯಾಗಿ ನಿಂತು, ಬಂದದ್ದನ್ನೆಲ್ಲಾ ಧೈರ್ಯವಾಗಿ ಎದುರಿಸುವ ಛಾತಿಯಿರುವವರೂ ಅಳುತ್ತಾರೆ.

ಕೆಲವೊಬ್ಬರು ತಮ್ಮ ಅಳುವಿಗೆ ಬೆಲೆಯಿಲ್ಲವೆಂದೋ, ಅಳುವುದು ಅಥವಾ ಭಾವನೆಗಳನ್ನು ತೋರ್ಪಡಿಸುವುದು ಅವಮಾನಕಾರಿಯಾದುದು, ಅದು ತಮ್ಮನ್ನು ದುರ್ಬಲ ಎಂದು ಚಿತ್ರಿಸುತ್ತದೆಯಾದ್ದರಿಂದ ಬೇರೆಯವರು ತಮ್ಮ ಅಸಹಾಯಕತೆಯ ಲಾಭ ಪಡೆಯಬಹುದೆಂಬ ಭಯದಿಂದಲೋ, ಅಳುವುದಿಲ್ಲ. ಹಾಗೆಯೇ ಕೆಲವರು ಅತಿಯಾದ ದುಃಖ, ನಷ್ಟಗಳಿಂದ ಮರಗಟ್ಟಿಹೋಗಿರುತ್ತಾರೆ; ಅಳುವಿನಿಂದ ಅತಿ ಹೆಚ್ಚು ನಿರಾಳತೆ ಪಡೆಯಬಲ್ಲವರು ಇಂಥವರೇ ಆಗಿದ್ದರೂ ಅಳುವುದು ಅವರಿಗೆ ಸಾಧ್ಯವಾಗುವುದಿಲ್ಲ. ಎಷ್ಟೋ ಸಾರಿ ನಾವು 'ಅರೇ, ಇಷ್ಟು ಸಣ್ಣ ವಿಷಯಕ್ಕೆ ಅಷ್ಟೊಂದು ಅಳುವುದಾ' ಎಂದು ಯಾರ ಬಗ್ಗೆಯಾದರೂ ಅಂದುಕೊಳ್ಳುತ್ತೇವೆ. ಬೇರೆಯವರ ಕಣ್ಣೀರು ಅಷ್ಟು ಸುಲಭವಾಗಿ ಕೆಲವೊಮ್ಮೆ ನಮಗೆ ಅರ್ಥವಾಗುವುದಿಲ್ಲ.

ನಿಜವಾಗಲೂ ಅಳು ಬಲಹೀನತೆಯ ಲಕ್ಷಣವಲ್ಲ; ಬಹುದೀರ್ಘಕಾಲ ಬದುಕಿನ ಹೋರಾಟದಲ್ಲಿ ಗಟ್ಟಿಯಾಗಿ ನಿಂತು, ಬಂದದ್ದನ್ನೆಲ್ಲಾ ಧೈರ್ಯವಾಗಿ ಎದುರಿಸುವ ಛಾತಿಯಿರುವವರೂ ಅಳುತ್ತಾರೆ. ನೀರು ಮೋಡಗಳನ್ನು ಸೇರಿ ಸಾಂದ್ರವಾಗಿ, ದಟ್ಟ ನೀಲಿಯ ಕಡುಬಣ್ಣವನ್ನು ಹೊಂದಿ, ಗುಡುಗು ಮಿಂಚುಗಳಿಗಷ್ಟೇ ಸಮಾಧಾನಗೊಳ್ಳದೆ, ಬರಿ ಗಾಳಿಗೇ ಚದುರಿಹೋಗದೆ 'ಬಾ ಇಲ್ಲಿ ವಿರಮಿಸು' ಎಂದು ಕರೆಯುವ ಭೂಮಿಯ ಮಡಿಲಿನ ಆಕರ್ಷಣೆಗೆ ಒಳಗಾಗಿ ತನ್ನ ನೈಜ ನೆಲೆಯಾದ ಮಣ್ಣು, ನದಿ, ತೊರೆ, ಸಾಗರಗಳನ್ನು ಸೇರುತ್ತದೆ. ಅಳು ಕೂಡ ಮಳೆಯಂತೆಯೇ ಜೀವದಾಯಿನಿ. ಬದುಕಿನ ಉರಿಯನ್ನು, ಬಿಸಿಯನ್ನು ತಡೆದುಕೊಳ್ಳುವಷ್ಟೂ ತಡೆದುಕೊಂಡಾಯಿತು; ಸೋಲು-ನಷ್ಟಗಳನ್ನು ಹೀರಿ ಆವಿಯಾಗಿಸಿದ್ದಾಯಿತು; ಬಹುಕಾಲ ವೇದನೆಯನ್ನು ಒಡಲಲ್ಲಿ ಮುಚ್ಚಿಟ್ಟಿದ್ದೂ ಆಯ್ತು; ಸಿಟ್ಟು ರೋಷವುಕ್ಕಿ ಗುಡುಗಿದ್ದೂ ಆಯ್ತು; ಸುಳ್ಳು ಸಮಾಧಾನಗಳಿಂದ ಭ್ರಮನಿರಸನಗೊಂಡಿದ್ದೂ ಆಯ್ತು; ಇನ್ನು ದಣಿದಿದ್ದೇನೆ, ಪ್ರೀತಿಯ ಸಾಂತ್ವಾನಕ್ಕಾಗಿ ಕಾತರಿಸುತ್ತಿದ್ದೇನೆ ಎಂಬ ಒಳ ಅರಿವು ಹೃದಯದಲ್ಲಿ ಮಡುಗಟ್ಟಿದ ದುಃಖ ಕಣ್ಣೀರಾಗಿ ಹರಿಯುವಂತೆ ಮಾಡುತ್ತದೆ.

ನಾವು ಅಳುತ್ತಿರುವಾಗಲೇ ಅದು ನಮ್ಮ ಗಾಯಗಳನ್ನು ವಾಸಿಮಾಡುತ್ತಿರುತ್ತದೆ. ಏಕೆಂದರೆ ಅಳುವುದು ಎಂದರೇ ನಮ್ಮ ನೋವನ್ನು ನಮ್ಮಿಂದ ಕೊಂಚ ದೂರ ಸರಿಸಿ ನೋಡುವುದು; ನಮ್ಮ ನೋವಿಗೆ ನಮ್ಮ ಗಮನ ಕೊಡುವುದು; ನಮ್ಮ ದುಃಖಕ್ಕೆ ಬೇರೆಯವರ ದುಃಖಕ್ಕೆ ಹೇಗೋ ಹಾಗೇ ಕರುಣೆಯಿಂದ ಸ್ಪಂದಿಸುವುದು. ಹಾಗಾಗಿಯೇ ತಾನೆಂಥ ನೋವಿನಲ್ಲಿದ್ದೇನೆಂದು ತಿಳಿಯಲು ಸಾಧ್ಯವಿಲ್ಲದವರು ತನ್ನ ನೋವನ್ನು ತನ್ನಿಂದ ಬೇರೆಯಾಗಿಸಿ ಸಮಗ್ರವಾಗಿ ನೋಡಿ ತನ್ನ ಭಾವನೆಗಳ ಹಿನ್ನೆಲೆಯಲ್ಲಿ ಅರ್ಥೈಸಲಾರದವರು ಅಳುವುದಿಲ್ಲ; ಬದಲಾಗಿ ನೋವನ್ನು ನಿರಾಕರಿಸುತ್ತ, ವಿಶ್ಲೇಷಿಸುತ್ತ, ತನ್ನ ನೋವಿಗೆ ಬೇರೆ ಯಾರನ್ನೋ ಕಾರಣರಾಗಿಸುತ್ತಾ ತಮ್ಮನ್ನು ತಾವೇ ಮೋಸಗೊಳಿಸಿಕೊಳ್ಳುತ್ತಾರೆ.

ದುಃಖವನ್ನು ಕೇವಲ ವೈಯಕ್ತಿಕವೆಂದು ಭಾವಿಸುವವರು ಅಳುವಿಗಿರುವ ಮಾಂತ್ರಿಕ ಶಕ್ತಿಯನ್ನು ಅನುಭವಿಸಿದವರಲ್ಲ. ಅಳುವುದು ಎಂದರೆ 'ಅಯ್ಯೋ ನನಗೆ ಹೀಗಾಯಿತೇ' ಎಂದು ಸ್ವಮರುಕದಿಂದ ಕೊರಗುವುದಲ್ಲ. ಅಂಥ ಕಣ್ಣೀರು ನಾವು ಕೆಳಗೆ ಬಿದ್ದಾಗ ಮತ್ತೆ ಪುಟಿಯುವಂತೆ ಮಾಡುವ ಚೈತನ್ಯವನ್ನು ನೀಡುವುದಿಲ್ಲ. ಅದು ಅಳು ಕೃತ್ರಿಮವಾದ ಅಳು. ನಮ್ಮ ವೈಯಕ್ತಿಕ ಬದುಕಿನ ಮೂಲಕ ಅನುಭವಕ್ಕೆ ಬರುವ ಸಂಕಟವು ಪ್ರಪಂಚದಲ್ಲಿರುವ ಸಂಕಟವನ್ನು ಕ್ಷಣಾರ್ಧದಲ್ಲಿ ಅರ್ಥಮಾಡಿಸುತ್ತದೆ. ನಮ್ಮ ಸಂಕಟವನ್ನೂ ಹೀಗೆಯೇ ತನ್ನ ಸಂಕಟದ ಅನುಭವಮೂಲದಿಂದ ಅರ್ಥಮಾಡಿಕೊಳ್ಳಬಲ್ಲ ಸಹೃದಯರಿದ್ದಾರೆ ಎನ್ನುವ ನಂಬಿಕೆ ನಮ್ಮನ್ನು ಲೋಕದೊಟ್ಟಿಗೆ ಬೆಸೆಯುತ್ತದೆ. ಈ ಕಾರಣದಿಂದಲೇ ಅಳಲು ನಮಗೆ ಒಂದು ಭುಜ ಬೇಕು. ನಮ್ಮ ದುಃಖವನ್ನು ತನ್ನ ಕಣ್ಣಿನಲ್ಲಿ ಪ್ರತಿಫಲಿಸುವ ಮೂಲಕ ನಮ್ಮ ದುಃಖವನ್ನು ನಮಗೇ ತೋರ್ಪಡಿಸುವ ಕನ್ನಡಿಯಂತಹ ಪ್ರೀತಿಯ ಕಣ್ಣುಗಳು ಬೇಕು. ನಮ್ಮ ಅಳುವನ್ನು ಸಂತೈಸುವವರು ಯಾರೂ ಇಲ್ಲದಿದ್ದಾಗ ಅದನ್ನು ಅರಣ್ಯರೋದನವೆನ್ನುವುದು ಈ ಕಾರಣಕ್ಕಾಗಿಯೇ. ತಾತ್ಕಾಲಿಕವಾಗಿ ಯಾರೂ ಸ್ಪಂದಿಸದಿದ್ದರೂ ಅಳು ನಿಷ್ಪ್ರಯೋಜಕವಲ್ಲ. ಏಕೆಂದರೆ ಅದು ಸಂವಹನದ ಒಂದು ರೀತಿ; ಅದೊಂದು ಭಾಷೆ. ❖



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




ಸುಭಾಷಿತ

ನೀವು ಎಚ್ಚರಗೊಳ್ಳಿ, ಇತರರನ್ನೂ ಎಚ್ಚರಗೊಳಿಸಿ.
–ಸ್ವಾಮಿ ವಿವೇಕಾನಂದ

ಬಿಬಿಎಂಪಿ: ಟೆಂಡರ್ ಅಕ್ರಮಗಳಿಗೆ ಕಡಿವಾಣ ಬೀಳಲಿ

ಸರ್ಕಾರಿ ಕಾಮಗಾರಿಗಳ ಅನುಷ್ಠಾನಕ್ಕೆ ಗುತ್ತಿಗೆದಾರರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯಬೇಕು ಎಂಬ ಉದ್ದೇಶದಿಂದಲೇ 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆ'ಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. ಆದರೆ ಈ ಕಾಯ್ದೆಯ ಆಶಯಗಳನ್ನೇ ಗಾಳಿಗೆ ತೂರುವ ಪ್ರಯತ್ನಗಳು ಅವ್ಯಾಹತವಾಗಿ ನಡೆದಿವೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಕಾಮಗಾರಿಗಳಲ್ಲಂತೂ ರಾಜಕಾರಣಿಗಳ ಒತ್ತಡಕ್ಕೆ ಮಣಿದು ಕೆಟಿಪಿಪಿ ಕಾಯ್ದೆಯ ಅಂಶಗಳನ್ನು ಉಲ್ಲಂಘಿಸುವ ಪ್ರಕರಣಗಳು ಪದೇ ಪದೇ ಮರುಕಳಿಸುತ್ತಿವೆ. ಅಧಿಕಾರಿಗಳ ಮೇಲೆ ರಾಜಕಾರಣಿಗಳು ಒತ್ತಡ ಹೇರಿ ತಮಗೆ ಬೇಕಾದ ಗುತ್ತಿಗೆದಾರರಿಗೆ ಕಾಮಗಾರಿಯ ಗುತ್ತಿಗೆ ಕೊಡಿಸುವುದು ರಾಜಾರೋಷವಾಗಿಯೇ ನಡೆಯುತ್ತಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ಪೈಪೋಟಿಗೆ ಅವಕಾಶವೇ ಇಲ್ಲದಂತಾಗಿದೆ. ಕಾಮಗಾರಿಯ ಅಂದಾಜು ಮೊತ್ತಕ್ಕಿಂತ ಅನೇಕ ಪಟ್ಟು ಹೆಚ್ಚು ಮೊತ್ತಕ್ಕೆ ಗುತ್ತಿಗೆ ನೀಡುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೂ ನಷ್ಟ ಉಂಟಾಗುತ್ತಿದೆ. ವಿಶೇಷ ಮೂಲಸೌಕರ್ಯ ಯೋಜನೆಯಡಿ ಸರ್ಕಾರ 2017–18ನೇ ಸಾಲಿನಲ್ಲಿ ಬಿಬಿಎಂಪಿಗೆ ₹ 2,191 ಕೋಟಿ ಮಂಜೂರು ಮಾಡಿತ್ತು. ಈ ಮೊತ್ತದಲ್ಲಿ ಎರಡನೇ ಹಂತದ ವೈಟ್‌ಟಾಪಿಂಗ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಜ್ಞಾನಭಾರತಿ ಆವರಣದಲ್ಲಿ ಆರು ಪಥಗಳ ರಸ್ತೆಯ ವೈಟ್‌ಟಾಪಿಂಗ್ ಕಾಮಗಾರಿಯನ್ನು ₹ 35.50 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸುವ ಪ್ರಸ್ತಾವ ಈ ಯೋಜನೆಯಲ್ಲಿ ಇರಲಿಲ್ಲ. ಈ ಪ್ರಸ್ತಾವಕ್ಕೆ ಇತ್ತೀಚೆಗೆ ಒಪ್ಪಿಗೆ ನೀಡಿದ್ದ ಸರ್ಕಾರ, ಹೊಸದಾಗಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿ, ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆಯಬೇಕು. ಟೆಂಡರ್ ಕರೆದು ಕಾಮಗಾರಿ ಅನುಷ್ಠಾನಗೊಳಿಸಬೇಕು ಎಂದು ಸೂಚಿಸಿತ್ತು. ಟೆಂಡರ್ ಕರೆದರೆ ವೆಚ್ಚ ಹೆಚ್ಚಾಗುತ್ತದೆ ಎಂಬ ನೆಪ ಹೇಳಿದ್ದ ಬಿಬಿಎಂಪಿ, ಕೆಟಿಪಿಪಿ ಕಾಯ್ದೆಯ 4ಜಿ ಸೆಕ್ಷನ್‌ನಡಿಯಲ್ಲಿರುವ ಅವಕಾಶ ಬಳಸಿ ಟೆಂಡರ್ ಆಹ್ವಾನಿಸದೇ ಕಾಮಗಾರಿ ನಡೆಸಲು ನ. 17ರಂದು ಅನುಮತಿ ಕೋರಿತ್ತು. ಇದು ತುರ್ತು ಕಾಮಗಾರಿ ಅಲ್ಲದಿದ್ದರೂ ಈ ಪ್ರಸ್ತಾವಕ್ಕೆ ಸರ್ಕಾರ ಒಪ್ಪಿಗೆ ನೀಡಿತ್ತು. ಟೀಕೆ ವ್ಯಕ್ತವಾದ ಬಳಿಕ ಟೆಂಡರ್ ಕರೆದೇ ಕಾಮಗಾರಿ ನಡೆಸುವಂತೆ ಸೂಚಿಸಿದೆ.



ಟೆಂಡರ್ ಪ್ರಕ್ರಿಯೆಯಿಂದ ಸಕಾರಣ ಇಲ್ಲದೆ ವಿನಾಯಿತಿ ಪಡೆಯುವ ಪರಿಪಾಟ ಕೊನೆಗೊಳ್ಳಬೇಕು

ಹೆಚ್ಚುವರಿ ಕಾಮಗಾರಿಗಳ ನೆಪದಲ್ಲಿ ಮೂಲ ಗುತ್ತಿಗೆ ಮೊತ್ತಕ್ಕಿಂತ ಅನೇಕ ಪಟ್ಟು ಹೆಚ್ಚು ಮೊತ್ತದ ಕಾಮಗಾರಿಗಳನ್ನು ಒಬ್ಬರೇ ಗುತ್ತಿಗೆದಾರರಿಗೆ ವಹಿಸುವ ಮೂಲಕವೂ ಕೆಟಿಪಿಪಿ ಕಾಯ್ದೆಯ ಆಶಯವನ್ನು ಬುಡಮೇಲು ಮಾಡಲಾಗುತ್ತಿದೆ. ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಮೂರು ಕಡೆ ಮೇಲ್ಸೇತುವೆ ನಿರ್ಮಿಸುವ ಒಟ್ಟು ₹ 89.86 ಕೋಟಿ ಮೊತ್ತದ ಪ್ಯಾಕೇಜ್‌ಗೆ 2015ರಲ್ಲಿ ಅನುಮೋದನೆ ನೀಡಲಾಗಿತ್ತು. ಈ ಯೋಜನೆ ಮೊತ್ತ ಈಗ ₹ 169 ಕೋಟಿಗೆ ಹೆಚ್ಚಳವಾಗಿದೆ. ಈ ಕಾಮಗಾರಿಗಳ ಜೊತೆಗೆ ಹೆಚ್ಚುವರಿಯಾಗಿ ಮೇಲ್ಸೇತುವೆ ನಿರ್ಮಿಸುವ ಪ್ರಸ್ತಾವ ಸಿದ್ಧವಾಗಿದೆ. ಅಚ್ಚರಿ ಎಂದರೆ ಈ ಕಾಮಗಾರಿಗೂ ಟೆಂಡರ್ ಕರೆಯದೆಯೇ ಹಿಂದಿನ ಗುತ್ತಿಗೆದಾರರಿಂದಲೇ ಕೆಲಸ ಮಾಡಿಸಲು ತಯಾರಿ ನಡೆದಿದೆ. ಲೋಕೋಪಯೋಗಿ ಇಲಾಖೆಯ ದರಪಟ್ಟಿ ಪ್ರಕಾರ ಈ ಹೆಚ್ಚುವರಿ ಮೇಲ್ಸೇತುವೆಗೆ ₹ 18.52 ಕೋಟಿ ವೆಚ್ಚವಾಗುತ್ತದೆ. ಹಿಂದಿನ ಗುತ್ತಿಗೆದಾರರಿಂದ ಅಷ್ಟೇ ಮೊತ್ತದಲ್ಲಿ ಕೆಲಸ ಮಾಡಿಸುವ ಬದಲು ₹ 23.62 ಕೋಟಿ ಪಾವತಿಸಲು ಬಿಬಿಎಂಪಿ ನಿರ್ಧರಿಸಿದೆ. ಬಿಬಿಎಂಪಿಗೆ ಸೇರ್ಪಡೆಯಾಗಿರುವ 110 ಹಳ್ಳಿಗಳಿಗೆ ಮೂಲಸೌಕರ್ಯ ಕಲ್ಪಿಸುವ ಯೋಜನೆಯ ಅಡಿ ಮಹದೇವಪುರ ವಲಯ ವ್ಯಾಪ್ತಿಯಲ್ಲಿ ರಸ್ತೆ ನಿರ್ಮಿಸುವ ₹ 119.62 ಕೋಟಿ ಮೊತ್ತದ ಹೆಚ್ಚುವರಿ ಕಾಮಗಾರಿಯನ್ನು ಪಾಲಿಕೆ ಕೈಗೆತ್ತಿಕೊಳ್ಳುತ್ತಿದೆ. ಇದಕ್ಕೂ ಕೆಟಿಪಿಪಿ ಕಾಯ್ದೆಯ 4ಜಿ ಸೆಕ್ಷನ್ ಅಡಿ ವಿನಾಯಿತಿ ಕೋರಲಾಗಿದೆ. ವಿಪತ್ತು ಪರಿಹಾರ ನಿಧಿಯಡಿ ರಸ್ತೆ ಮತ್ತು ರಾಜಕಾಲುವೆ ದುರಸ್ತಿಪಡಿಸಲು ₹ 1,171 ಕೋಟಿ ಮೊತ್ತದ ಕಾಮಗಾರಿಗೂ ಇದೇ ಸೆಕ್ಷನ್ ಅಡಿ ವಿನಾಯಿತಿ ಕೋರಲಾಗಿದೆ. ಟೆಂಡರ್ ಆಹ್ವಾನಿಸಿದರೆ ಬೇರೆ ಗುತ್ತಿಗೆದಾರರು ಇದಕ್ಕಿಂತ ಕಡಿಮೆ ಮೊತ್ತಕ್ಕೆ ಕಾಮಗಾರಿ ನಿರ್ವಹಿಸುವ ಅವಕಾಶವಿರುತ್ತದೆ. ಇಂತಹ ಅವಕಾಶ ಕೈಚೆಲ್ಲುವುದು ಎಷ್ಟು ಸರಿ ಎಂಬುದು ಪ್ರಶ್ನೆ.

ಕಾಮಗಾರಿಗಳಿಗೆ ವಾಸ್ತವಕ್ಕಿಂತ ಹೆಚ್ಚು ಅಂದಾಜು ಮೊತ್ತವನ್ನು ನಮೂದಿಸಿ ಗುತ್ತಿಗೆದಾರರಿಗೆ ಲಾಭ ಮಾಡಿಕೊಡುವುದಂತೂ ಇತ್ತೀಚೆಗೆ ಚಾಲ್ತಿಗೆ ಬಂದಿರುವ ಅಪಾಯಕಾರಿ ಪರಿಪಾಟ. ಬೆಂಗಳೂರಿನ ಅತಿ ದಟ್ಟಣೆಯ 12 ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಯ ಟೆಂಡರ್ ಪ್ರಕ್ರಿಯೆಯಲ್ಲಿ ವಾಸ್ತವಕ್ಕಿಂತಲೂ ಕೋಟ್ಯಂತರ ರೂಪಾಯಿ ಹೆಚ್ಚು ಅಂದಾಜು ಮೊತ್ತ ನಮೂದಿಸಲಾಗಿತ್ತು. ₹ 1,120 ಕೋಟಿ ವೆಚ್ಚದ ಈ ಯೋಜನೆಯ ಟೆಂಡರ್ ಪ್ರಕ್ರಿಯೆಯ ನ್ಯೂನತೆಗಳ ಬಗ್ಗೆ ಟೀಕೆ ವ್ಯಕ್ತವಾಗುತ್ತಿದ್ದಂತೆಯೇ ಮರು ಟೆಂಡರ್ ಕರೆಯುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ. ತಪ್ಪು ಮಾಡಿ ಬಳಿಕ ಸರಿಪಡಿಸುವುದಕ್ಕಿಂತಲೂ ತಪ್ಪು ಆಗದಂತೆ ಎಚ್ಚರ ವಹಿಸುವುದು ಒಳ್ಳೆಯದು. ತಾವೇ ನಿಗದಿಪಡಿಸಿದ ಟೆಂಡರ್ ಷರತ್ತುಗಳನ್ನು ಉಲ್ಲಂಘಿಸುವುದರಲ್ಲಿ ಹಾಗೂ ಕಪ್ಪುಪಟ್ಟಿಯಲ್ಲಿರುವ ಗುತ್ತಿಗೆದಾರರ ಬಗ್ಗೆ ಜಾಣ ಕುರುಡು ಪ್ರದರ್ಶಿಸುವಲ್ಲಿ ಬಿಬಿಎಂಪಿ ಎಂಜಿನಿಯರ್‌ಗಳು ಬಲು ನಿಪುಣರು. ಕಾಮಗಾರಿಗಳನ್ನು ಸಣ್ಣ ಸಣ್ಣ ಪ್ಯಾಕೇಜ್‌ಗಳನ್ನಾಗಿ ವಿಭಜಿಸಿ ಟೆಂಡರ್ ಪ್ರಕ್ರಿಯೆ ತಪ್ಪಿಸುವುದರಲ್ಲೂ ಎತ್ತಿದ ಕೈ. ಗುತ್ತಿಗೆದಾರರು ಕೂಟ ರಚಿಸಿಕೊಂಡು ತಮ್ಮವರಲ್ಲೇ ಒಬ್ಬರಿಗೆ ಗುತ್ತಿಗೆ ಸಿಗುವಂತೆ ಮಾಡುವುದು ಟೆಂಡರ್ ಅಕ್ರಮದ ಮತ್ತೊಂದು ರೂಪ. ಬಿಬಿಎಂಪಿಯ ಕೆಲವು ವಿಭಾಗಗಳ ಕಾಮಗಾರಿಗಳು, ನಿರ್ದಿಷ್ಟ ವಾರ್ಡ್‌ಗಳ ಕಾಮಗಾರಿಗಳು ಅನೇಕ ವರ್ಷಗಳಿಂದ ಕೆಲವೇ ಕೆಲವು ಗುತ್ತಿಗೆದಾರರ ಪಾಲಾಗುತ್ತಿವೆ. ಸೆಪ್ಟೆಂಬರ್ ತಿಂಗಳಲ್ಲಿ ನಡೆದಿದ್ದ ವಿಧಾನ ಮಂಡಲ ಅಧಿವೇಶನದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದ ಮುಖ್ಯಮಂತ್ರಿ, 'ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಕಾಮಗಾರಿಗಳಿಗೆ ಐದು ವರ್ಷಗಳಲ್ಲಿ ₹ 20,060 ಕೋಟಿ ವ್ಯಯಿಸಲಾಗಿದೆ. ಆದರೂ ನಗರದಲ್ಲಿ ಸಂಪೂರ್ಣ ದೋಷರಹಿತವಾಗಿರುವ 1 ಕಿ.ಮೀ. ರಸ್ತೆಯೂ ಇಲ್ಲ' ಎಂದಿದ್ದರು. ಈ ಕಾಮಗಾರಿಗಳ ಲೆಕ್ಕಪರಿಶೋಧನೆ ನಡೆಸುವುದಾಗಿಯೂ ಭರವಸೆ ನೀಡಿದ್ದರು. ಲೆಕ್ಕಪರಿಶೋಧನೆ ಜೊತೆಗೆ ಟೆಂಡರ್ ಅಕ್ರಮಗಳ ಸಮಗ್ರ ತನಿಖೆಗೂ ಸರ್ಕಾರ ಕ್ರಮ ಕೈಗೊಳ್ಳಬೇಕು. ಜನರ ತೆರಿಗೆ ಹಣದ ಪ್ರತೀ ರೂಪಾಯಿ ಸದ್ಬಳಕೆ ಆಗುವಂತೆ ಎಚ್ಚರ ವಹಿಸುವುದು ಸರ್ಕಾರದ ಜವಾಬ್ದಾರಿ. ಟೆಂಡರ್ ಅಕ್ರಮಗಳಿಗೆ ಶಾಶ್ವತವಾಗಿ ಕಡಿವಾಣ ಹಾಕಬೇಕು.

ದಿನದ ಟ್ವೀಟ್



ಸಾಂಕೇತಿಕತೆ ಮತ್ತು ಕ್ರಿಯೆ

ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದಲ್ಲಿ ಚರ್ಚಿಸಲು ಅತ್ಯುತ್ತಮ ವಿಷಯಗಳು 'ವಿಕೇಂದ್ರೀಕರಣ ಮತ್ತು ಪ್ರಾದೇಶಿಕ ಅಭಿವೃದ್ಧಿ'. ಈ ಎರಡು ವಿಚಾರಗಳಲ್ಲಿ ಆಗಿರುವ ಪ್ರಗತಿಯ ಬಗ್ಗೆ ಪ್ರತಿವರ್ಷವೂ ಅಧಿವೇಶನದಲ್ಲಿ ಪರಾಮರ್ಶೆ ನಡೆಸಬಹುದು. ಆಗ ಸಾಂಕೇತಿಕತೆ ಮತ್ತು ಕ್ರಿಯೆಯ ನಡುವೆ ಗಟ್ಟಿಯಾದ ಸಂಬಂಧವೊಂದು ಸೃಷ್ಟಿಯಾಗುತ್ತದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ

ಏಳೂವರೆ ವರ್ಷಗಳಾದವು. ಈ ಎಲ್ಲ ವರ್ಷಗಳಲ್ಲಿ ಗಂಗಾ ನದಿ ಶುದ್ಧೀಕರಣ ಯೋಜನೆಗೆ ಏನಾಯಿತು ಎಂಬುದಕ್ಕೆ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಉತ್ತರ ನೀಡಿಲ್ಲ. ನದಿ ಶುದ್ಧೀಕರಣ ಯೋಜನೆ ಈಗಲೂ ಅಪೂರ್ಣವಾಗಿಯೇ ಉಳಿದಿದೆ.



ನವಾಬ್ ಮಲಿಕ್, ಮಹಾರಾಷ್ಟ್ರದ ಸಚಿವ

25 ವರ್ಷಗಳ ಹಿಂದೆ

ಶನಿವಾರ, 14-12-1996

• ವಿಶ್ವ ವ್ಯಾಪಾರ ಸಂಘಟನೆ ಒಪ್ಪಂದ: ಸಂಸತ್ತಿನಲ್ಲಿ ಗದ್ದಲ, ಕಲಾಪ ಸ್ಥಗಿತ

ನವದೆಹಲಿ, ಡಿ. 13 (ಪಿಟಿಐ)– ಸಿಂಗಪುರದಲ್ಲಿ ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ಘೋಷಣೆಯ ಸಹಿ ಹಾಗೂ ಅಂಗೀಕಾರದ ವಿಚಾರ ಕುರಿತಂತೆ ಸಂಸತ್ತಿನ ಎರಡೂ ಸದನಗಳಲ್ಲಿ ಇಂದು ಕೋಲಾಹಲ ಉಂಟಾಯಿತು. ಇದರಿಂದ ಉಭಯ ಸದನಗಳ ಕಲಾಪವನ್ನು ಮುಂದೂಡಲಾಯಿತು.

ತೀವ್ರ ಕೋಲಾಹಲದ ನಂತರ ರಾಜ್ಯಸಭೆಯ ಕಲಾಪ ಮುಂದೂಡಲಾಯಿತು. ಘೋಷಣೆಗೆ ಸಹಿ ಹಾಕುವುದರ ಪರಿಣಾಮಗಳನ್ನು ಕುರಿತು ಲೋಕಸಭೆಯಲ್ಲಿ ಸದಸ್ಯರು ಸ್ಪಷ್ಟೀಕರಣ ಕೋರಿದರು. ಸಹಿಗೂ ಮೊದಲು ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಇದ್ದುದರ ಬಗ್ಗೆ ಶೂನ್ಯವೇಳೆಯಲ್ಲಿ ರಾಜ್ಯಸಭೆಯಲ್ಲಿ ಸದಸ್ಯರು ಪ್ರತಿಭಟಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 14-12-1971

• ಕಿಲೋಗೆ 2 ರೂ. ದರದಲ್ಲಿ ಬಳಕೆದಾರರಿಗೆ ಸಕ್ಕರೆ

ನವದೆಹಲಿ, ಡಿ. 13– 'ರಾಷ್ಟ್ರದ ಅನೇಕ ಊರುಗಳಲ್ಲಿ ಬಳಕೆದಾರರಿಗೆ ಅವರ ಅಗತ್ಯದ ನ್ಯಾಯವಾದ ಪಾಲಿನಷ್ಟು ಸಕ್ಕರೆಯು ಕಿಲೋ ಒಂದಕ್ಕೆ ಎರಡು ರೂ. ದರದಲ್ಲಿ ದೊರೆಯುವುದು' ಎಂದು ಕೇಂದ್ರ ಕೃಷಿ ಮಂತ್ರಿ ಶ್ರೀ ಫಕ್ರುದ್ದೀನ್ ಅಲಿ ಅಹಮದ್ ಅವರು ಇಂದು ಲೋಕಸಭೆಗೆ ತಿಳಿಸಿದರು.

'ಸಾರ್ವಜನಿಕ ಹಂಚಿಕೆ ವ್ಯವಸ್ಥೆಗಾಗಿ ತಿಂಗಳಲ್ಲಿ ಬಿಡುಗಡೆ ಮಾಡಲಾಗುವ ಸಕ್ಕರೆ ಯಲ್ಲಿ ಶೇಕಡ 60ರಷ್ಟನ್ನು ಕ್ವಿಂಟಲ್ ಒಂದಕ್ಕೆ 150 ರೂಪಾಯಿ ಮೇರೆಗೆ (ಅಬಕಾರಿ ಸುಂಕ ಬಿಟ್ಟು) ಒದಗಿಸುವ ಸಕ್ಕರೆ ಕೈಗಾರಿಕಾ ಸಲಹೆಯನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ' ಎಂದೂ ಅವರು ಹೇಳಿದರು.

• ಢಾಕಾ ಸುತ್ತ ನಮ್ಮ ಸೇನೆ ಬಿಗಿ ಉರುಲು

ನವದೆಹಲಿ, ಡಿ. 13– ಬಾಂಗ್ಲಾ ದೇಶದ ರಾಜಧಾನಿ ಢಾಕಾ ನಗರವನ್ನು ಪಾಕಿಸ್ತಾನಿ ಸೈನಿಕರಿಂದ ವಿಮೋಚನೆಗೊಳಿಸಲು ಮೂರು ದಿಕ್ಕುಗಳಿಂದ ಭಾರತೀಯ ಸೇನೆ ತ್ವರಿತವಾಗಿ ಸಾಗಿಬರುತ್ತಿದ್ದು ಢಾಕಾದ ಸುತ್ತ ದಾಳಿಯ ಉರುಲು ಬಿಗಿಗೊಂಡಿದೆ.

ಟೆಸ್ಟ್ ಆಡಬೇಕೆಂಬ ಕರ್ನಾಟಕದ ಮನೀಷ್ ಪಾಂಡೆ ಆಸೆ ಭಗ್ನವಾಯಿತೇ?

ಆಯ್ಕೆ'ಆಟ'ದಲ್ಲಿ ಕಮರುವ ಕನಸು



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಭಾರತ ಕ್ರಿಕೆಟ್ ತಂಡಗಳ ನಾಯಕತ್ವವನ್ನು ವಿಭಜಿಸಿದ ನಂತರ ರಾಷ್ಟ್ರೀಯ ಆಯ್ಕೆ ಸಮಿತಿಯತ್ತ ಈಗ ಎಲ್ಲರ ದೃಷ್ಟಿ ಹೊರಳಿದೆ.

ಟಿ20 ನಾಯಕತ್ವವನ್ನು ಸ್ವಇಚ್ಛೆಯಿಂದ ಬಿಟ್ಟುಕೊಟ್ಟ ವಿರಾಟ್ ಕೊಹ್ಲಿ ಅವರಿಂದ ಏಕದಿನ ತಂಡದ ನಾಯಕ ಪಟ್ಟವನ್ನು ಚೇತನ್ ಶರ್ಮಾ ನೇತೃತ್ವದ ಆಯ್ಕೆ ಸಮಿತಿ ಕಿತ್ತುಕೊಂಡು ರೋಹಿತ್ ಶರ್ಮಾ ಅವರಿಗೆ ಹಸ್ತಾಂತರಿಸಿದೆ. ಮುಂದಿನ ದಿನಗಳಲ್ಲಿ ಇದರ ಪರಿಣಾಮ ಯಾವ ರೀತಿ ಇರಬಹುದು ಎಂಬ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗಳು ಜೋರಾಗಿಯೇ ನಡೆದಿವೆ. ನಾಯಕನಾಗಿ ಆಡಿದ ಏಕದಿನ ಪಂದ್ಯಗಳ ಪೈಕಿ ಶೇಕಡ 70ಕ್ಕಿಂತ ಹೆಚ್ಚಿನದರಲ್ಲಿ ಗೆಲುವಿನ ದಾಖಲೆಯನ್ನು ಕೊಹ್ಲಿ ಹೊಂದಿದ್ದಾರೆ. ಆದರೆ, ಐಸಿಸಿ ಟೂರ್ನಿಗಳಲ್ಲಿ ಟ್ರೋಫಿ ಜಯಿಸದಿರುವುದನ್ನೇ ನೆಪವಾಗಿಟ್ಟುಕೊಂಡು ಆಯ್ಕೆ ಸಮಿತಿ ಈ ರೀತಿಯ ನಿರ್ಧಾರಕ್ಕೆ ಬಂದಿದೆ ಎಂಬ ವಾದ ಒಂದೆಡೆಯಾದರೆ, ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ತಮ್ಮ ತಂಡವನ್ನು ಐದು ಬಾರಿ ಚಾಂಪಿಯನ್ ಮಾಡಿರುವ ರೋಹಿತ್ ಶರ್ಮಾ ಇಲ್ಲಿಯೂ ಗೆಲುವು ದೊರಕಿಸಿಕೊಡಬಲ್ಲರು ಎಂಬ ನಿರೀಕ್ಷೆ ಇನ್ನೊಂದೆಡೆ ಇದೆ.

ಇವೆಲ್ಲದರ ನಡುವೆ ಆಯ್ಕೆ ಸಮಿತಿಯ ಕೆಲವು 'ಆಟ'ಗಳು ಬೆಳಕಿಗೆ ಬರಲೇ ಇಲ್ಲ. ಅದರಲ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ ಆಡಬೇಕೆನ್ನುವ ಕರ್ನಾಟಕದ ಪ್ರತಿಭಾವಂತ ಬ್ಯಾಟರ್ ಮನೀಷ್ ಪಾಂಡೆ ಕನಸು ಬಹುತೇಕ ಕೊಚ್ಚಿಹೋದಂತಾಗಿದೆ.

ಇತ್ತೀಚೆಗೆ ನ್ಯೂಜಿಲೆಂಡ್ ವಿರುದ್ಧ ಕಾನ್ಪುರ ಟೆಸ್ಟ್ ತಂಡಕ್ಕೆ ಶ್ರೇಯಸ್ ಅಯ್ಯರ್ ಮತ್ತು ಸೂರ್ಯಕುಮಾರ್ ಯಾದವ್ ಆಯ್ಕೆಯಾದಾಗಲೇ ಪಾಂಡೆಗೆ ಟೆಸ್ಟ್ ಬಾಗಿಲು ಮುಚ್ಚಿದಂತಾಯಿತು. ಇದೀಗ ದಕ್ಷಿಣ ಆಫ್ರಿಕಾಕ್ಕೆ ತೆರಳುತ್ತಿರುವ ತಂಡದ ಯಾವ ವಿಭಾಗದಲ್ಲಿಯೂ ಅವರ ಹೆಸರಿಲ್ಲ. ಹಾಗೆ ನೋಡಿದರೆ, ನಾಲ್ಕು ವರ್ಷಗಳ ಹಿಂದೆಯೇ ಮನೀಷ್, ಭಾರತ ಟೆಸ್ಟ್ ತಂಡಕ್ಕೆ ಆಡಬೇಕಿತ್ತು.

ಅವರಿಗೆ 2015ರಲ್ಲಿ ಜಿಂಬಾಬ್ವೆ ಎದುರಿನ ಏಕದಿನ ಸರಣಿಯಲ್ಲಿ ಮೊದಲ ಬಾರಿಗೆ ಆಡುವ ಅವಕಾಶ ಲಭಿಸಿತು. 2008ರಲ್ಲಿಯೇ ಕರ್ನಾಟಕ ತಂಡದಲ್ಲಿ ಪದಾರ್ಪಣೆ ಮಾಡಿದ್ದ ಮನೀಷ್ ಬಹುಬೇಗ ಗಮನ ಸೆಳೆದ ಬ್ಯಾಟರ್. ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಶತಕ ಚಚ್ಚಿದ ಮೊದಲ ಭಾರತೀಯನೆಂಬ ಹೆಗ್ಗಳಿಕೆ ಹೊಂದಿದ್ದಾರೆ. ಕರ್ನಾಟಕ ತಂಡವು ಎರಡು ಬಾರಿ ರಣಜಿ ಟ್ರೋಫಿ, ಇರಾನಿ ಟ್ರೋಫಿ ಜಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇಷ್ಟೆಲ್ಲ ಇದ್ದರೂ ಅವರಿಗೆ ಭಾರತ ತಂಡದ ಪೋಷಾಕು ಧರಿಸುವ ಅವಕಾಶ ಸಿಕ್ಕಿದ್ದು 2015ರಲ್ಲಿ.

ಜಿಂಬಾಬ್ವೆ ಎದುರು ಪದಾರ್ಪಣೆ ಪಂದ್ಯದಲ್ಲಿ ಹೊಡೆದ 71 ರನ್‌ಗಳು ಮತ್ತು ಕೇದಾರ್ ಜಾಧವ್ ಅವರೊಂದಿಗಿನ ಜೊತೆಯಾಟವನ್ನು ಕ್ರಿಕೆಟ್ ಪ್ರಿಯರು ಮರೆಯುವುದಿಲ್ಲ. ಅಗ್ರಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದ್ದ ಆ ಪಂದ್ಯದಲ್ಲಿ ಮನೀಷ್ ಮಿಂಚಿದ್ದರು. ಆದರೆ 2016ರಲ್ಲಿ ಸಿಡ್ನಿಯಲ್ಲಿ ಆಸ್ಟ್ರೇಲಿಯಾ ಎದುರಿನ ಏಕದಿನ ಪಂದ್ಯದಲ್ಲಿ ಅವರು ಹೊಡೆದಿದ್ದ ಶತಕದ ಬಲದಿಂದ ಭಾರತ ತಂಡವು 330 ರನ್‌ಗಳ ಗುರಿಯನ್ನು ಮೀರುವಲ್ಲಿ ಯಶಸ್ವಿಯಾಗಿತ್ತು. 84 ಎಸೆತಗಳಲ್ಲಿ ಹೊಡೆದಿದ್ದ ಆ ಬಿರುಸಿನ ಶತಕಕ್ಕೆ ಆಸ್ಟ್ರೇಲಿಯಾದ ಬೌಲರ್‌ಗಳು ಬೆಚ್ಚಿಬಿದ್ದಿದ್ದರು. ಮನೀಷ್ ಪಂದ್ಯಶ್ರೇಷ್ಠರಾಗಿದ್ದರು. ಆದರೂ ಅವರ ಸ್ಥಾನ ತಂಡದಲ್ಲಿ ಭದ್ರವಾಗಲಿಲ್ಲ.

ಅವರು ಇಲ್ಲಿಯವರೆಗೆ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 91 ಪಂದ್ಯಗಳು, 6,389 ರನ್‌ಗಳು, 19 ಶತಕ ಮತ್ತು 29 ಅರ್ಧಶತಕಗಳನ್ನು ಗಳಿಸಿದ್ದಾರೆ. ಇದೀಗ ಅವರಿಗೆ ವಯಸ್ಸಾಗುತ್ತಿದೆ ಎಂಬ ಸಬೂಬು ಕೇಳಿಬರುತ್ತಿದೆ. ಆದರೆ ಹೋದ ತಿಂಗಳು ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಅವರ ಚುರುಕಿನ ಫೀಲ್ಡಿಂಗ್ ಮತ್ತು ಅಬ್ಬರದ ಬ್ಯಾಟಿಂಗ್‌ನಿಂದ ಕರ್ನಾಟಕ ಫೈನಲ್ ತಲುಪಿತ್ತು.

ಇಷ್ಟಾದರೂ ಆಯ್ಕೆ ಸಮಿತಿ ಕಣ್ಣಿಗೆ ಮನೀಷ್ ಬೀಳಲೇ ಇಲ್ಲ. ಸೋಜಿಗವೆಂದರೆ, 26 ವರ್ಷದ ಶ್ರೇಯಸ್ ಮತ್ತು 31 ವರ್ಷದ ಸೂರ್ಯಕುಮಾರ್ ಯಾದವ್ ಅವರನ್ನು ಟೆಸ್ಟ್ ತಂಡಕ್ಕೆ ಸೇರಿಸಿಕೊಳ್ಳಲಾಯಿತು. ಕಾನ್ಪುರದಲ್ಲಿ ಸುನೀಲ್ ಗಾವಸ್ಕರ್ ಕೊಟ್ಟ ಕ್ಯಾಪ್ ಧರಿಸಿ ಕಣಕ್ಕಿಳಿದ ಶ್ರೇಯಸ್ ಶತಕ ಹೊಡೆದು ತಾನು ಸೀಮಿತ ಓವರ್ ಕ್ರಿಕೆಟಿಗಷ್ಟೇ ಸೀಮಿತವಲ್ಲ ಎಂದು ಸಾರಿದರು.



ತಂಡಕ್ಕೂ ಲಾಭವಾಯಿತು. ಆದರೆ ಮೂರು ಏಕದಿನ ಮತ್ತು 11 ಟಿ20 ಪಂದ್ಯಗಳನ್ನಷ್ಟೇ ಆಡಿರುವ, ಪ್ರಥಮ ದರ್ಜೆಯಲ್ಲೂ ಮನೀಷ್‌ಗಿಂತ ಕಡಿಮೆ ರನ್ ಗಳಿಸಿರುವ ಯಾದವ್ ಆಯ್ಕೆ ಮಾತ್ರ ಪ್ರಶ್ನೆಯಾಗಿಯೇ ಉಳಿಯಿತು. ಯಾದವ್‌ಗೆ ಸೀಮಿತ ಓವರ್‌ಗಳ ಪಂದ್ಯಗಳಲ್ಲಿ ಆಡುವ ಅವಕಾಶ ಲಭಿಸಿದ್ದು ಕೂಡ ಇದೇ ವರ್ಷದ ಆರಂಭದಲ್ಲಿ ಎನ್ನುವುದು ಇಲ್ಲಿ ಗಮನಿಸಬೇಕಾದ ಅಂಶ.

ಕೆಲವರಿಗೆ ಅದು ಹೇಗೆ ಇಷ್ಟೊಂದು ಅವಕಾಶಗಳು ತ್ವರಿತವಾಗಿ ಸಿಗುತ್ತವೆ ಎನ್ನುವುದೇ ಅಚ್ಚರಿ. ಆದರೆ ಮನೀಷ್ ಮತ್ತು ಅವರಂತಹ ಇನ್ನೂ ಕೆಲವು ಆಟಗಾರರಿಗೆ ಕೌಶಲ, ಪ್ರತಿಭೆ ಇದ್ದರೂ ಸ್ಥಾನ ಸಿಗುವುದಿಲ್ಲ.

'ಆಯ್ಕೆದಾರರು ಇರುವುದೇ ಆಟಗಾರರನ್ನು ಕೈಬಿಡುವುದಕ್ಕಾಗಿ. ಆದ್ದರಿಂದ ಅವರ ಗಮನ ಸೆಳೆದು ಆಯ್ಕೆಯಾಗಲು ನಿರಂತರವಾಗಿ ಸಾಧನೆ ತೋರುವುದೊಂದೇ ದಾರಿ' ಎಂದು ಈ ಹಿಂದೆ ಕ್ರಿಕೆಟಿಗ ಅನಿಲ್ ಕುಂಬ್ಳೆ ಹೇಳಿದ್ದರು. ಆದರೆ, ಇಲ್ಲಿ ತಮಗೆ ಸಿಕ್ಕ ಅವಕಾಶಗಳಲ್ಲಿ ಚೆನ್ನಾಗಿ ಆಡುತ್ತಿರುವ ಕೆಲವು ಆಟಗಾರರತ್ತ ಆಯ್ಕೆ ಸಮಿತಿ ಕಣ್ಣುಗಳ ಹೊರಳದಿರುವುದು ಏಕೆ?

ಮನೀಷ್ ಒಬ್ಬರೇ ಅಲ್ಲ, ಬಂಗಾಳದ ಅಭಿಮನ್ಯು ಈಶ್ವರನ್ ಅವರಂತಹ ಆಟಗಾರರನ್ನು ಪರಿಗಣಿಸದಿರುವುದು ಸೋಜಿಗ. 100 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿ ರನ್‌ಗಳ ಹೊಳೆ ಹರಿಸುತ್ತಿರುವ ಗುಜರಾತ್‌ನ ಪ್ರಿಯಾಂಕ್ ಪಾಂಚಾಲ್ ಅವರಿಗೆ ರೋಹಿತ್ ಶರ್ಮಾ ಬದಲಿಗೆ ಅವಕಾಶ ನೀಡಲಾಗಿದೆಯಾದರೂ ಆಡುವ ಅಂತಿಮ 11ರಲ್ಲಿ ಅವಕಾಶ ಸಿಗುವುದೋ ಎಂದು ಕಾದು ನೋಡಬೇಕಿದೆ. ಈಚೆಗೆ ದಕ್ಷಿಣ ಆಫ್ರಿಕಾದಲ್ಲಿ ಭಾರತ ಎ ತಂಡದ ನಾಯಕರಾಗಿದ್ದ ಪಾಂಚಾಲ್ ಚೆನ್ನಾಗಿ ಬ್ಯಾಟಿಂಗ್ ಮಾಡಿದ್ದರು.

ಕ್ರಿಕೆಟ್ ಎಷ್ಟೇ ಆಧುನಿಕವಾಗಿ ಬೆಳೆದರೂ ಟೆಸ್ಟ್ ಪಂದ್ಯದಲ್ಲಿ ಆಡುವ ಗೌರವ ಮತ್ತು ಸಂತೃಪ್ತಿಯ ಮುಂದೆ ಬೇರೆ ಯಾವುದೂ ಸರಿಸಾಟಿಯಲ್ಲ. ಆದ್ದರಿಂದ ಆಟಗಾರರನ್ನು ಕೇವಲ ಒಂದು ಮಾದರಿಗೆ ಸೀಮಿತಗೊಳಿಸುವ ಬದಲು ಸಾಮರ್ಥ್ಯ ಇದ್ದಾಗಲೇ ಕರೆದು ಅವಕಾಶ ಕೊಡುವತ್ತ ಆಯ್ಕೆಗಾರರ ದೃಷ್ಟಿ ಇರಬೇಕು. ಇಲ್ಲದಿದ್ದರೆ 2019ರ ಏಕದಿನ ವಿಶ್ವಕಪ್ ಸೋಲಿನಲ್ಲಿ ತಂಡದ ಆಯ್ಕೆಯಲ್ಲಿ ನಡೆದಿದ್ದ ಲೋಪದ ಕುರಿತು ಮಾಜಿ ಕೋಚ್ ರವಿಶಾಸ್ತ್ರಿ ತಕರಾರು ಎತ್ತಿರುವಂತೆಯೇ ಮುಂದಿನ ದಿನಗಳಲ್ಲಿ ಬೇರೆಯವರೂ ಮಾತನಾಡುವುದು ತಪ್ಪುವುದಿಲ್ಲ.

ಮಾದರಿಗಳ ಆಧಾರದಲ್ಲಿ ತಂಡ ರಚನೆ ಮತ್ತು ನಾಯಕರ ನೇಮಕ ನಡೆಯುತ್ತಿರುವ ಈ ಹೊತ್ತಿನಲ್ಲಿ ಯಾವುದೇ ಆಟಗಾರನ ಸಾಮರ್ಥ್ಯವನ್ನು ಸಮರ್ಥವಾಗಿ ಅಳೆಯುವ ಮಾನದಂಡವೂ ಇರಬೇಕು. ಟೆಸ್ಟ್ ಕ್ರಿಕೆಟ್ ಉಳಿದು ಬೆಳೆಯಬೇಕಾದರೆ ದೇಶಿ ಕ್ರಿಕೆಟ್‌ನ ಬೇರುಗಳೂ ಗಟ್ಟಿಯಾಗಿರಬೇಕು. ಕೇವಲ ಐಪಿಎಲ್‌ನಲ್ಲಿ ಫ್ರ್ಯಾಂಚೈಸಿಗಳ ಗಮನ ಸೆಳೆಯಲು ಆಡಿಸುವ ಸೀಮಿತ ಓವರ್‌ಗಳ ದೇಶಿ ಕ್ರಿಕೆಟ್ ಟೂರ್ನಿಗಳಿಗಿಂತ ರಣಜಿ ಟ್ರೋಫಿ ಟೂರ್ನಿಗೆ ಆದ್ಯತೆ ಸಿಗಬೇಕು. ಭಾರತ ಕ್ರಿಕೆಟ್‌ನ ಮೂಲಬೇರು ಇರುವುದೇ ಈ ಟೂರ್ನಿಯಲ್ಲಿ. ಇದರಲ್ಲಿ ಮಿಂಚಿದರೆ ಟೆಸ್ಟ್ ತಂಡದಲ್ಲಿ ಜಾಗ ಸಿಗುವ ಭರವಸೆ ಆಟಗಾರರಲ್ಲಿ ಮೂಡಬೇಕು. ಮನೀಷ್ ಪಾಂಡೆಯಂತಹ ಉದಾಹರಣೆಗಳು ಪದೇ ಪದೇ ಸೃಷ್ಟಿಯಾದರೆ, ಭವಿಷ್ಯದ ಆಟಗಾರರು ಕೇವಲ ಬಿಳಿಚೆಂಡಿನ ಹಿಂದೆ ಮಾತ್ರ ಓಡುವಂತಾಗುತ್ತದೆ.

ಚುರುಮುರಿ



ಕನ್ನಡದ ಟೋಪಿ

• ಲಿಂಗರಾಜು ಡಿ.ಎಸ್.

'ಬೆಂಗಳೂರಿನ 26 ಪರ್ಸೆಂಟ್ ಜನಕ್ಕೆ ಮಾತ್ರ ಶುದ್ಧ ಕನ್ನಡದ ಅ ಕಾರ ಹ ಕಾರ ಗೊತ್ತಿರದು' ಅಂದದಲ್ಲೋ ಮಯೇಸ್ ಜೋಸಿ! ಅಲ್ಲಾ ನಾವು ಮಾತಾಡದೇ ಹಂಗಪ್ಪ! ಕನ್ನಡ ಮಾತಾಡದು ಮುಖ್ಯ ಅಲ್ಲವುಲಾ?' ಅಂತು ಯಂಟಪ್ಪಣ್ಣ.

'ಮೋದಿ ಮಾವಾರೇ 'ಮೇರೆ ದೇಸ್ ವಾಸಿಯೋ!' ಅನ್ನಕುಲ್ವೆ. ಅದುನ್ನ ಅಪಸಬ್ದ ಅನ್ನಕಾದದೇ? ಅದ್ಯಕ್ಸರು ಮುಂದ್ಲ ಪರಿಸತ್ ಎಲೆಕ್ಸನ್ನಲ್ಲಿ ಯಾರ್‍ಯಾರು ತಪ್ಪಿಲ್ಲದೇ ಕಾಗುಣತ, ಹತ್ತರಗಂಟ ಕನ್ನಡದಲ್ಲಿ ಮಗ್ಗಿ ಹೇಳತರೋ ಅವರಿಗೆ ಮಾತ್ರ ಉಮೇದುವಾರರಾಗಕೆ ಅವಕಾಸ ಅಂತ ಕಾನೂನು ಮಾಡ್ಲಿ ಮೊದಲು!' ತುರೇಮಣೆ ಸಿಡೇಬಿದ್ದರು.

'ಹೂ ಕಯಾ ಇನ್ಮುಮ್ಯಾಲಿಂದ 'ಅ ಆ ಇ ಈ ಕನ್ನಡದ ಅಕ್ಸರ ಮಾಲೆ' ಹಾಡು ಪರಿಸತ್ತಿನ ಶೋ-ಬಾನದ ಪದ ಆಗಬೈದು! ನಾನೇ ಹಾಡ್ತೀನಿ ಅಂತ ಅದ್ಯಕ್ಸರು ಹೊಂಡದಿದ್ದರೆ ಸಾಕು!' ಯಂಟಪ್ಪಣ್ಣ ಹೇಳ್ತು.

ಅಷ್ಟರಲ್ಲಿ ತುರೇಮಣೆ ಐದೊರ್ಸದ ಮೊಮ್ಮಗ ಒಂದ್ಕೈಲಿ ಕ್ಯಾಲ್ಕುಲೇಟರು ಇನ್ನೊಂದು ಕೈಲಿ ಮಕ್ಮಲ್‌ಟೋಪಿ ಹಿಡಕಂದು ಈಚೆಗೆ ಕಡೆದ.

'ಇದೇನ್ಲಾ ಮಗೀಗೆ ಈ ಅವತಾರ ಮಾಡಿದ್ದರಿ?' ಅಂದು ಕೇಳಿದೆ.

'ನೋಡ್ಲಾ ಅಣ್ತಮ್ಮಾ ಈಗ ಕಾಲ ಬದಲಾಗ್ಯದೆ. ದೇಸದ ಸಂಪತ್ತೆಲ್ಲಾ 10 ಪರ್ಸೆಂಟ್ ಜನದ ತಾವ್ಕೆ ಹೋಗಿ ಸೇರಿಕ್ಯಂಡದಂತೆ. ತೊಂಬತ್ತು ಪರ್ಸೆಂಟ್ ಪಟ್ಟಲಿರಾ ಅವನೂ ನಮ್ಮ ಥರಾ ಕಡ ತಗಂಡು ತಗಂಡು ಕಡಪಾಯಿಯಾಗದು ಬ್ಯಾಡ. ಮೊನ್ನೆ ಎಲೆಕ್ಸನ್ನಿನಗೆ ನೀನು ಕಾಣಾ ಅಬ್ಯರ್ಥಿಗಳು ಆಣೆ ಪ್ರಮಾಣ ಮಾಡಿಸಿಗ್ಯಂಡು ಖರ್ಚಿಗೆ ಕಾಸು-ಕರೆಮಣ ಕೊಟ್ಟು ವೋಟು ಕೊಂಡ್ಕತಾವ್ರೆ. ಗೆದ್ದ ಮ್ಯಾಲೆ ಶೇಕಡಾ-ವಾರು ವಸೂಲಿ ಇದ್ದೇ ಅದೆ! ಇದುನ್ನ ಕಂಡೇ ಅವನಿಗೆ ಪರ್ಸೆಂಟೇಜ್ ತಗಂಡಾದ್ರು ಬದಿಕ್ಯಾ ಇಲ್ಲ ಟೋಪಿ ಹಾಕ್ಯಾದ್ರು ಬದಿಕ್ಯಾ ಅಂತ ಒಂದ್ಕೈಗೆ ಕ್ಯಾಲಿಕ್ಯುಲೇಟರ್ ಇನ್ನೊಂದ್ಕೈಗೆ ಮಕ್ಮಲ್‌ಟೋಪಿ ಕೊಟ್ಟಿವ್ನಿ' ಅಂತ ತಮ್ಮ ಮುಳ್ಳೆಳೆಯೋ ಬುದ್ಧಿ ತೋರಿಸಿದರು.

ಸಂಗತ

ಇಂಧನ: ಪರಿಸರ ಸಂರಕ್ಷಣೆಯ ತುರ್ತು

ನಾವು ಬಳಸುವ ಬಲ್ಬ್, ಎಲೆಕ್ಟ್ರಾನಿಕ್ ಉತ್ಪನ್ನಗಳು ಇಂಧನ ಉಳಿತಾಯದ ಕ್ಷಮತೆ ಹೊಂದಿರುತ್ತವೆ. ಅಂಥವನ್ನೇ ಖರೀದಿಸಿ ಉಪಯೋಗಿಸಬೇಕು

• ಶ್ರೀಗುರು

ಇಡೀ ಜಗತ್ತು ಇಂಧನ ಬಿಕ್ಕಟ್ಟಿಗೆ ಸಿಲುಕಿದೆ. ಉತ್ಪಾದನೆಯು ಬೇಡಿಕೆಯ ಅರ್ಧದಷ್ಟೂ ಇಲ್ಲ. ಹೆಚ್ಚಿನ ಇಂಧನ ಕೊಡುತ್ತಿರುವ ಕಲ್ಲಿದ್ದಲು, ಅಣುಸ್ಥಾವರ ಬಯೋಮಾಸ್ ಘಟಕಗಳು ಮಾಲಿನ್ಯ ಹೆಚ್ಚಿಸಿ ಜನರ ಆರೋಗ್ಯ ಕೆಡಿಸುತ್ತಿವೆ. ಜೀವವೈವಿಧ್ಯ ಹಿಂದೆಂದೂ ಅನುಭವಿಸದ ಒತ್ತಡಕ್ಕೆ ಸಿಲುಕಿದೆ. ವಾಯುಗುಣ ಬದಲಾವಣೆ ತಾರಕಕ್ಕೇರಿ ಅಕಾಲಿಕ ಮಳೆ, ಬಿಸಿಲು, ಭೂಕಂಪನ, ಪ್ರವಾಹಗಳಿಂದ ಜನಪಲ್ಲಟ ಗಾಬರಿ ಹುಟ್ಟಿಸುವಷ್ಟು ಪ್ರಮಾಣದಲ್ಲಿ ನಡೆಯುತ್ತಿದೆ. ಬೆಳೆದ ಬೆಳೆ ಕೈಗೆ ಸಿಗದೆ ರೈತರು ಕೃಷಿ ಎಂದರೆ ಬೆಚ್ಚಿ ಬೀಳುತ್ತಿದ್ದಾರೆ. ಭೂಮಿಯ ಬಿಸಿ ನಿಯಂತ್ರಣದಲ್ಲಿದ್ದರೆ ಮಾತ್ರ ದೇಶ–ರಾಜ್ಯಗಳ ಆರ್ಥಿಕತೆಯ ರೈಲು ಚೆನ್ನಾಗಿ ಓಡುತ್ತದೆ. ಆದರೆ, ವಾಸ್ತವ ಇದಕ್ಕೆ ವಿರುದ್ಧವಾಗಿದೆ. ವಾಯುಗುಣ ನಿಯಂತ್ರಣ ಉದ್ದೇಶದ ಗ್ಲಾಸ್ಗೊ ಶೃಂಗಸಭೆಯು ರಚನಾತ್ಮಕ ನಿರ್ಣಯಗಳಿಲ್ಲದೆ ಮಕಾಡೆ ಮಲಗಿದೆ. ಈ ನಡುವೆ 'ರಾಷ್ಟ್ರೀಯ ಇಂಧನ ಸಂರಕ್ಷಣೆ' ದಿನ (ಡಿ.14) ಬಂದಿದೆ.


ಸುಧಾರಿತ ದೇಶಗಳು ಭಾರಿ ಪ್ರಮಾಣದ ಇಂಧನ ಬಳಸಿ ಜೀವನಮಟ್ಟ ಸುಧಾರಿಸಿಕೊಂಡಿವೆ. ನಮ್ಮಲ್ಲಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಇಂಧನ ಬೇಡಿಕೆಯು ಏರುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ದುಪ್ಪಟ್ಟಾಗಿದೆ. ವಿಶ್ವದ ಪ್ರಜೆಗಳ ಲೆಕ್ಕದಲ್ಲಿ ನಮ್ಮವರ ತಲಾ ಬಳಕೆ ಕೇವಲ ಅರ್ಧದಷ್ಟು. ಆದರೂ ನಮ್ಮಲ್ಲಿ ಮಾಲಿನ್ಯ ಜಾಸ್ತಿ. ಅದಕ್ಕೆ ಕಾರಣ ಕಳಪೆ ಕಲ್ಲಿದ್ದಲು. ಇಂಧನ ಕ್ಷೇತ್ರದಲ್ಲಿ ನಾವು ಬಳಸುತ್ತಿರುವ ಇಂಗಾಲದ ಪ್ರಮಾಣ ವಿಶ್ವದ ಸರಾಸರಿಗಿಂತ ಹೆಚ್ಚು. ಅತಿಹೆಚ್ಚು ಇಂಗಾಲದ ಡೈ ಆಕ್ಸೈಡ್ ಹೊಮ್ಮಿಸುವ ವಿಶ್ವದ ದೇಶಗಳ ಪೈಕಿ ನಾವು ಮೂರನೆಯ ಸ್ಥಾನದಲ್ಲಿದ್ದೇವೆ. ಗಾಳಿಯಲ್ಲಿನ ತೇಲುಕಣದ ಪ್ರಮಾಣವು ದೇಶದ ಅತ್ಯಂತ ಗಂಭೀರ ಪರಿಸರ ಮಾಲಿನ್ಯಕ್ಕೆ ಕಾರಣವಾಗಿದ್ದು 2019ರಲ್ಲಿ ಹತ್ತು ಲಕ್ಷ ಶಿಶುಗಳ ಮರಣ ಮಾಲಿನ್ಯದಿಂದಾಗಿಯೇ ಸಂಭವಿಸಿದೆ. ಆದರೆ ತ್ವರಿತಗತಿಯ ಅಭಿವೃದ್ಧಿಗೆ ಕಲ್ಲಿದ್ದಲು ಸುಡದೇ ಬೇರೆ ದಾರಿ ಇಲ್ಲ.

ಲಾಕ್‌ಡೌನ್‌ನಿಂದ ಬೇಡಿಕೆಯ ಪ್ರಮಾಣ ಶೇ 5ರಷ್ಟು ಕುಸಿದಿದೆ. ಇಂಧನ ಕ್ಷೇತ್ರದಲ್ಲಿ ತೊಡಗಿಸುವ ಬಂಡವಾಳವೂ ಶೇ 15ರಷ್ಟು ಸೊರಗಿದೆ. ನಮ್ಮ ಇಂಧನ ಬೇಡಿಕೆಯ ಮುಕ್ಕಾಲು ಪಾಲು ಪೂರೈಕೆ ಕಲ್ಲಿದ್ದಲ್ಲು, ಪೆಟ್ರೋಲ್, ಡೀಸೆಲ್ ಮತ್ತು ಘನ ಬಯೋಮಾಸ್‌ನಿಂದ ಆಗುತ್ತಿದೆ. ಅದರಲ್ಲಿ ಕಲ್ಲಿದ್ದಲಿನ ಭಾಗ ಅರ್ಧಕ್ಕಿಂತ ಹೆಚ್ಚು.

ಕೋವಿಡ್‌ನಿಂದಾಗಿರುವ ಆರ್ಥಿಕ ಹಿಂಜರಿತವನ್ನು ತಡೆದು, ಮೊದಲಿನ ವೇಗಕ್ಕೆ ತರುವುದು ಮತ್ತು ದೀರ್ಘಕಾಲೀನ ಬೆಳವಣಿಗೆ ಕಡೆಗೆ ಒತ್ತು ನೀಡಿ ಅಭಿವೃದ್ಧಿ ಸಾಧಿಸುವುದು ಈಗ ನಮ್ಮ ಮುಂದಿರುವ ಸವಾಲು. ಆದರೆ, ಕೋವಿಡ್ ಮಾರಿ ಮುಗಿಯುತ್ತಿಲ್ಲ. ಈಗತಾನೆ ಚೇತರಿಕೆ ಕಾಣುತ್ತಿರುವ ಉದ್ಯಮಗಳು ಮತ್ತೆ ಬಾಗಿಲು ಹಾಕಿಕೊಂಡರೆ ಆರ್ಥಿಕತೆಯ ಗತಿ ಏನು?

ಹವಾಮಾನದ ವೈಪರೀತ್ಯವು ಭೂಸ್ವರೂಪ, ಸಂಸ್ಕೃತಿ, ವಾಣಿಜ್ಯಗಳನ್ನೆಲ್ಲಾ ಹದತಪ್ಪಿಸುತ್ತ ಆಹಾರ ಮತ್ತು ಸಹಜ ಬದುಕಿನ ಸ್ವಾತಂತ್ರ್ಯವನ್ನೇ ಮೊಟಕುಗೊಳಿಸುತ್ತಿವೆ. ನಾವೆಲ್ಲ ಚರ್ಚೆ ಮಾಡಿ, ಒಪ್ಪಂದಕ್ಕೆ ಸಹಿ ಮಾಡಿ ಇಂಗಾಲವನ್ನು ಮಟ್ಟ ಹಾಕಬೇಕೆನ್ನುತ್ತೇವೆ. ವಾಸ್ತವದಲ್ಲಿ ಹೆಚ್ಚಿನ ಕಾರ್ಬನ್ (ಕಲ್ಲಿದ್ದಲು ಮತ್ತು ಪೆಟ್ರೋಲ್) ಹೊಂದಿದ ಧನಿಕ ದೇಶಗಳು ಉಳಿದವರಿಗೆ ತನ್ನ ಸರಕು ಮಾರಿ ಇನ್ನಷ್ಟು ಶ್ರೀಮಂತವಾಗುತ್ತಿವೆ. ಅವರನ್ನೇ ಅನುಕರಿಸುವ ಅಭಿವೃದ್ಧಿ ಬಯಸುವ ದೇಶಗಳೂ ತನ್ನ ಸಂಪನ್ಮೂಲಗಳನ್ನು ಅಗೆದು ಸುಡುತ್ತ ಹೆಚ್ಚುಹೆಚ್ಚು ಇಂಧನ ಸಂಪಾದಿಸುತ್ತಿವೆ.

ವಿವಿಧ ಮೂಲಗಳಿಂದ ಸಿಗುವ ವಿದ್ಯುಚ್ಛಕ್ತಿ, ವಾಹನಗಳಿಗೆ ಶಕ್ತಿ ತುಂಬುವ ಫಾಸಿಲ್ ಇಂಧನ, ಅಡುಗೆ ಬೇಯಿಸುವ ಸೌದೆ, ಸೀಮೆಎಣ್ಣೆ, ಅನಿಲ, ಶುದ್ಧೀಕರಣ– ರೀಸೈಕಲ್- ಪುನರುತ್ಪಾದನೆ ಘಟಕಗಳಲ್ಲೆಲ್ಲಾ ಬಳಸಲಾಗುವ ಇಂಧನವನ್ನು ಉಳಿಸಲೇಬೇಕಾದ ಅನಿವಾರ್ಯ ಬಹಳ ಹಿಂದಿನಿಂದಲೂ ಇದೆ. ಜಾಹೀರಾತುಗಳು, ಸರ್ಕಾರದ ಯೋಜನೆಗಳು ಇಂಧನ ಉಳಿತಾಯಕ್ಕೆ 'ಹೀಗೆ ಮಾಡಿ' ಎಂದು ಸಲಹೆ ನೀಡುತ್ತಲೇ ಇರುತ್ತವೆ. ಪ್ರೋತ್ಸಾಹ ನೀಡಲು ಸಬ್ಸಿಡಿ, ರಿಯಾಯಿತಿ ನೀಡುವುದೂ ಇದೆ.



ಉಳಿತಾಯ ಮಾಡಿದರೆ ಸಂಪಾದಿಸಿದಂತೆ ಎಂಬ ಮಾತಿದೆ. ಇಂಧನ ಉಳಿತಾಯದ ಹೊಣೆ ನಮ್ಮ ಮೇಲೂ ಇದೆ. ನಾವು ಬಳಸುವ ಬಲ್ಬ್, ಎಲೆಕ್ಟ್ರಾನಿಕ್ ಉತ್ಪನ್ನಗಳು ಇಂಧನ ಉಳಿತಾಯದ ಕ್ಷಮತೆ ಹೊಂದಿರುತ್ತವೆ. ಅಂಥವನ್ನೇ ಖರೀದಿಸಿ ಉಪಯೋಗಿಸಬೇಕು. ಬಿಇಇ (ಬ್ಯೂರೊ ಆಫ್ ಎನರ್ಜಿ ಎಫಿಶಿಯನ್ಸಿ) ಪ್ರಮಾಣಪತ್ರವಿರುವ ಉಪಕರಣಗಳು ಹೆಚ್ಚಿನ ಇಂಧನ ಉಳಿಸುತ್ತವೆ. ವಾಶಿಂಗ್ ಮಶೀನ್, ಫ್ರಿಜ್, ಓವೆನ್, ಇಸ್ತ್ರಿಪೆಟ್ಟಿಗೆ ಖರೀದಿಸುವಾಗ ಬಿಇಇ ಸರ್ಟಿಫಿಕೇಟ್ ಇದೆಯೇ ಎಂದು ಪರೀಕ್ಷಿಸಿಕೊಳ್ಳಿ. ಅನಗತ್ಯವಾಗಿ ಉರಿಯುವ ದೀಪ ಆರಿಸಿ, ಟ್ರಾಫಿಕ್ ಸಿಗ್ನಲ್‌ನಲ್ಲಿ ಎಂಜಿನ್ ಆಫ್ ಮಾಡಿ, ಹೆಚ್ಚು ಮೈಲೇಜ್ ಕೊಡುವ ವಾಹನ ಓಡಿಸಿ ಇಂಧನ ಉಳಿಸಬಹುದು. ವಿದ್ಯುತ್ ಉಳಿತಾಯ ಮಾಡಲು ಸೌದೆ ಸುಟ್ಟು ಅಡುಗೆ ಮಾಡುವುದು ಬೇಡ. ಬದಲಿಗೆ ಸೌರ ಒಲೆಗಳನ್ನು ಬಳಸಿ ವಿದ್ಯುತ್ ಉಳಿಸಿ. ಸೌರಶಕ್ತಿಯಿಂದ ಮನೆಗೆ ವಿದ್ಯುತ್ ಪಡೆಯಿರಿ. ಇಂಧನ ಉಳಿತಾಯದಿಂದ ಪರಿಸರ ಸಂರಕ್ಷಣೆಯ ಕೆಲಸವೂ ಆಗುತ್ತದೆ.

ವಾಚಕರ ವಾಣಿ

ಆಡುಭಾಷೆಯಲ್ಲಿ ಶುದ್ಧತೆ ಎಂಬುದುಂಟೇ?

ಭಾಷೆ ಎಂಬುದೊಂದು ಆಯುಧವಿದ್ದಂತೆ. ಅದು ಕಾಯಲೂ ಬಲ್ಲದು, ಕೊಲ್ಲಲೂ ಬಲ್ಲದು. ಒಂದು ಸಮೂಹದ ಸೊಲ್ಲಡಗಿಸಿದರೆ ಆ ಸಮೂಹವೇ ಅವಸಾನವಾದಂತೆ. ಒಟ್ಟಾರೆ ನಾವು ಹೇಳಬೇಕಾದ್ದು ನಮ್ಮೆದುರಿನ ವ್ಯಕ್ತಿಗೆ ಸಂವಹನಗೊಂಡರೆ ಸಾಕು. ಅಲ್ಲಿಗೆ ಆ ಭಾಷೆಯ ಕೆಲಸ ಮುಗಿಯಿತು. ಲಾಕ್ಷಣಿಕರು ಅದಕ್ಕೆ ಕಟ್ಟು–ಕಟ್ಟಲೆ ಹಾಕಹೋದರೆ ಜೀವಂತ ಭಾಷೆ ಬಗ್ಗುವುದಿಲ್ಲ. ಪಾಣಿನಿಯ ಲಕ್ಷಣಸೂತ್ರಗಳಿಂದ ಸಂಸ್ಕೃತ ಭಾಷೆಯು ಆಡುಮಾತಿನಿಂದ ದೂರವಾಯಿತು. ಹಾಗೆಯೇ ಕನ್ನಡ ನುಡಿಯ ಉಚ್ಚಾರಣೆಗೂ ಲಕ್ಷಣಸೂತ್ರಗಳನ್ನು ಬಿಗಿದರೆ ಅದು ಬಗ್ಗುವುದಿಲ್ಲ. ಯಾವುದೇ ಭಾಷೆಯು ಅದನ್ನಾಡುವವರ ಸ್ವತ್ತು. ಉದಾಹರಣೆಗೆ ಕಲಿತ ಮೇಲೆ ಕನ್ನಡವಿರಲೀ, ಇಂಗ್ಲಿಷ್– ಹಿಂದಿ ಇರಲೀ ಬೇರಾವುದೇ ಭಾಷೆಯಾಗಿರಲಿ ಅದು ಆಡುವವರ ಕಾಮಧೇನು.

ಪ್ರಸ್ತುತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಅವರು, ಬೆಂಗಳೂರು ನಗರ ಕನ್ನಡಿಗರ ಉಚ್ಚಾರಣೆ ಸರಿಯಿಲ್ಲವೆಂದು 'ಅ' ಕಾರ ಮತ್ತು 'ಹ' ಕಾರ ದೋಷವನ್ನು ಹಿಡಿವ ಮಡಿವಂತಿಕೆಯನ್ನು ಮೆರೆಯುತ್ತಿದ್ದಾರೆ. ಕನ್ನಡ ಭಾಷೆಗೆ ತನ್ನದೇ ಆದ ಜಾನಪದ ಸೊಗಡಿದೆ. ಇಂಥ ಜನಪದರ ಆಡುಭಾಷೆಯಲ್ಲಿ 'ಅ' ಕಾರ ಮತ್ತು 'ಹ' ಕಾರ ದೋಷವನ್ನು ಹುಡುಕುವುದು ಭಾಷಾ ಶುದ್ಧಿಯ ವ್ಯಸನ. ದೇವನೂರ ಮಹಾದೇವ ಅವರು ನಂಜನಗೂಡು ಉಪಭಾಷೆಯಲ್ಲಿ ಬರೆದ 'ಕುಸುಮಬಾಲೆ'ಯ ಸೊಗಡನ್ನು ಇಂಥ ಮಡಿವಂತರು ಅರಿಯಬಲ್ಲರೇ?

ಪ್ರೊ. ಶಿವರಾಮಯ್ಯ, ಬೆಂಗಳೂರು

ನೀತಿಬೋಧನೆಯ ತರಗತಿ ಇರಲಿ

ದಾವಣಗೆರೆ ಜಿಲ್ಲೆಯ ನಲ್ಲೂರಿನ ಸರ್ಕಾರಿ ಶಾಲೆಯಲ್ಲಿ ಈಚೆಗೆ ಕೆಲ ವಿದ್ಯಾರ್ಥಿಗಳು ಶಿಕ್ಷಕರೊಬ್ಬರ ಮೇಲೆ ಎಸಗಿದ ಕಿಡಿಗೇಡಿತನ ತಲೆತಗ್ಗಿಸುವಂಥದ್ದು. 'ಸಾ ವಿದ್ಯಾ ಯಾ ವಿಮುಕ್ತಯೆ'– ಯಾವುದು ಅಶಿಸ್ತು, ದುರ್ವರ್ತನೆ-ಯಿಂದ ಪಾರು ಮಾಡುವುದೋ ಅದೇ ವಿದ್ಯೆ ಎನ್ನುವುದು ಸುಭಾಷಿತ. ವಿದ್ಯಾರ್ಥಿಗಳ ಪಾಲಿಗೆ ಮುಂದೆ ಗುರಿ, ಹಿಂದೆ ಗುರು ಇರದಿದ್ದರೆ ಹೇಗೆ? ಪೋಷಕರನ್ನು ಕರೆಸುವುದು, ಕ್ಷಮೆ ಕೇಳಿಸುವುದು ಕೇವಲ ಯಾಂತ್ರಿಕ. ಮಕ್ಕಳೇಕೆ ಹೀಗೆ ವರ್ತಿಸುತ್ತಾರೆ, ಶಿಕ್ಷಣ ವ್ಯವಸ್ಥೆಯಲ್ಲೇ ಏನಾದರೂ ದೋಷಗಳುಂಟೆ? ಹೌದಾದರೆ ಅವನ್ನು ಸರಿಪಡಿಸುವ ಕುರಿತು ಚರ್ಚಿಸುವ ತುರ್ತು ಅಗತ್ಯವಿದೆ.

ಈ ಹಿಂದೆ, ತರಗತಿಯ ಶಿಕ್ಷಕರು ರಜೆಯಲ್ಲಿದ್ದರೆ ಅವರ ತರಗತಿಗಳನ್ನು ಮತ್ತೊಬ್ಬ ಶಿಕ್ಷಕರು ತೆಗೆದುಕೊಳ್ಳು-ತ್ತಿದ್ದರು. ಆಗ ನೀತಿಕತೆ, ಇತಿಹಾಸ, ಪ್ರಸಿದ್ಧ ಕವಿಗಳ ಕವನ ವಾಚನ... ಹೀಗೆ ಜ್ಞಾನ ಸಮಾರಾಧನೆಯೇ ಮಕ್ಕಳಿಗೆ ಸಲ್ಲುತ್ತಿತ್ತು. ಮಕ್ಕಳಿಗೂ ತಮ್ಮ ಅನುಭವ ಹಂಚಿಕೊಳ್ಳಲು, ಹಾಡು, ನಟನೆ ಪ್ರದರ್ಶಿಸಲು ಆ ಬಿಡುವು ವೇದಿಕೆ ಆಗುತ್ತಿತ್ತು. ಇಡೀ ವಾರ ಪಠ್ಯಕ್ರಮದ ಅಧ್ಯಾಯಗಳಷ್ಟೇ ಮಕ್ಕಳ ಮೇಲೆ ರವಾನೆಯಾದರೆ ಸಾಲದು, ಅವರು ತಮ್ಮ ಬದುಕಿಗೆ ಅವುಗಳನ್ನು ಸಮರ್ಪಕವಾಗಿ ಅನ್ವಯಿಸಿಕೊಂಡು ರೂಢಿಸಿಕೊಳ್ಳುವಂತಾಗಬೇಕು. ಈ ನಿಟ್ಟಿನಲ್ಲಿ ಶಾಲಾ–ಕಾಲೇಜುಗಳಲ್ಲಿ ಪ್ರತೀ ತರಗತಿಗೆ ವಾರಕ್ಕೊಂದು 'ಮಾರಲ್ ಪೀರಿಯಡ್' ವೇಳಾಪಟ್ಟಿಯಲ್ಲೇ ನಿಯೋಜಿಸುವುದು ಪರಿಣಾಮಕಾರಿ.

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಮಕ್ಕಳ ಆಹಾರದ ಹಕ್ಕನ್ನು ಕಸಿಯದಿರಿ

ಅಪೌಷ್ಟಿಕತೆ ಮತ್ತು ರಕ್ತಹೀನತೆಯಿಂದ ಬಳಲುತ್ತಿರುವ ಮಕ್ಕಳಲ್ಲಿ ಈ ಕೊರತೆ ನೀಗುವ ಸಲುವಾಗಿ ರಾಜ್ಯ ಸರ್ಕಾರವು ಕಲ್ಯಾಣ ಕರ್ನಾಟಕದ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದ ಜತೆಗೆ ಮೊಟ್ಟೆ ನೀಡುತ್ತಿರುವುದು ಉತ್ತಮ ಯೋಜನೆ. ಆದರೆ, ಮೊಟ್ಟೆ ವಿತರಣೆಗೆ ಕೆಲವೇ ಜನರು ವಿರೋಧ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ. ಸರ್ಕಾರವು ಇಂಥವರ ಒತ್ತಡಕ್ಕೆ ಮಣಿಯದೇ ಪೌಷ್ಟಿಕ ಆಹಾರ ಸೇವಿಸುವ ಮಕ್ಕಳ ಹಕ್ಕನ್ನು ರಕ್ಷಿಸಬೇಕು.

ದೇಶದಾದ್ಯಂತ ದುರ್ಬಲರ ಮೇಲೆ ನಿರಂತರವಾಗಿ ಶೋಷಣೆ, ದಬ್ಬಾಳಿಕೆ, ಹಲ್ಲೆ, ದೌರ್ಜನ್ಯಗಳು ನಡೆಯುತ್ತಿವೆ. ಮಕ್ಕಳು–ಮಹಿಳೆಯರ ಮೇಲಿನ ಅತ್ಯಾಚಾರದ ಪ್ರಕರಣಗಳು ನಿತ್ಯವೂ ವರದಿಯಾಗುತ್ತಿವೆ. ವಿದ್ಯಾರ್ಥಿಗಳಿಗೆ ಸಕಾಲಕ್ಕೆ ವಿದ್ಯಾರ್ಥಿವೇತನವೂ ಸಿಗುತ್ತಿಲ್ಲ. ಇವುಗಳ ಬಗ್ಗೆ ಮಾತನಾಡದ ಮಠಾಧೀಶರು, ಶಾಲಾ ಮಕ್ಕಳಿಗೆ ಮೊಟ್ಟೆ ವಿತರಿಸುವ ಸರ್ಕಾರದ ಯೋಜನೆಯನ್ನು ವಿರೋಧಿಸಿ ಹೋರಾಟಕ್ಕೆ ಮುಂದಾಗಿರುವುದು ದುರದೃಷ್ಟದ ಸಂಗತಿ. ಇವರ ಒತ್ತಡಕ್ಕೆ ಮಣಿಯದೇ 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೂ ಮೊಟ್ಟೆ ನೀಡುವ ಯೋಜನೆಯನ್ನು ವಿಸ್ತರಿಸಬೇಕು. ಮಕ್ಕಳ ಆರೋಗ್ಯದ ದೃಷ್ಟಿಯಿಂದ ಈ ಯೋಜನೆಯನ್ನು ರಾಜ್ಯದಾದ್ಯಂತ ಎಲ್ಲಾ ಶಾಲೆಗಳಲ್ಲೂ ಜಾರಿಗೆ ತರಬೇಕು.

ಮಹೇಶ್ ಕೂದುವಳ್ಳಿ, ಚಿಕ್ಕಮಗಳೂರು

ನದಿ ಜೋಡಣೆಯ ಸಾಧಕ–ಬಾಧಕ

ಸರಯೂ ಕೆನಾಲ್ ಉದ್ಘಾಟನೆಯ ಸಂದರ್ಭದಲ್ಲಿ ಪ್ರದರ್ಶಿಸಿದ ಸಾಕ್ಷ್ಯಚಿತ್ರ ಹಾಗೂ ಪ್ರಧಾನಿ ಅವರ ಭಾಷಣ ಕೇಳಿ, ಕೇಂದ್ರ ಸರ್ಕಾರ ಈಚೆಗಷ್ಟೆ ಅಂಗೀಕಾರ ನೀಡಿದ ಕೆನ್ ಮತ್ತು ಬೆಟ್ವಾ ನದಿ ಜೋಡಣೆ ಯೋಜನೆ ನೆನಪಾಯಿತು. 'ಬರಪೀಡಿತ ಪ್ರದೇಶಗಳಿಗೆ ನೀರು ಹರಿಸಿ ರೈತರು ಬಂಗಾರದ ಬೆಳೆ ಪಡೆಯುವಂತೆ ಮಾಡುತ್ತೇವೆ'– ಚುನಾವಣಾ-ಪೂರ್ವದಲ್ಲಿ ಹೀಗೆ ಹೇಳುವುದು ಲಾಭದಾಯಕ ನಿಜ. ಆದರೆ, ಸಂಬಂಧಿಸಿದ ರಾಜ್ಯಗಳಾದ ಉತ್ತರಪ್ರದೇಶ ಮತ್ತು ಮಧ್ಯಪ್ರದೇಶ ಸರ್ಕಾರಗಳು ನೀರಿನ ಹಂಚಿಕೆ ಬಗ್ಗೆ ಇದೇ ಮಾರ್ಚ್‌ನಲ್ಲಿ ಒಮ್ಮತಕ್ಕೆ ಬಂದಿದ್ದರೂ ಪರಿಸರ, ಅರಣ್ಯ ಸಚಿವಾಲಯದ ಅನುಮೋದನೆ ದೊರೆತಿಲ್ಲ.

ಅಷ್ಟೇ ಅಲ್ಲ, ಎಂಟು ವರ್ಷಗಳಲ್ಲಿ ₹ 44,605 ಕೋಟಿ ಅಂದಾಜುವೆಚ್ಚದಲ್ಲಿ ಕಾರ್ಯಗತವಾಗಬೇಕಾದ ಈ ಯೋಜನೆಯ ಮೂಲಭೂತ ಅಂಶಗಳ ಬಗೆಗೇ ವಿವಾದವಿದೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಹಾಗೂ ಸುಪ್ರೀಂ ಕೋರ್ಟ್ ಅವುಗಳನ್ನು ಪರಿಶೀಲಿಸುತ್ತಿವೆ. ಬುಂದೇಲಖಂಡಕ್ಕೆ ನಿಜಕ್ಕೂ ಏನಾಗುತ್ತದೆ, ಪನ್ನಾ ಮತ್ತು ಅಲ್ಲಿನ ಹುಲಿಗಳ ಭವಿಷ್ಯದ ಮೇಲೆ ಯಾವ ಪರಿಣಾಮವಾದೀತು ಎಂಬುದು ಮೌಲಿಕ ಪ್ರಶ್ನೆಗಳೇ ಸರಿ. ಈ ನಿಟ್ಟಿನಲ್ಲಿ ಆಳುವವರು ಆಳವಾಗಿ ಯೋಚಿಸಬೇಕಲ್ಲವೆ?

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚುನಾವಣೆ ದಾರಿಯಲ್ಲಿ ಕಾಶಿ ಹೆದ್ದಾರಿ

ಕಾಶಿ ವಿಶ್ವನಾಥ ದೇವಾಲಯದಿಂದ ಗಂಗಾ ನದಿ ದಂಡೆಯಲ್ಲಿನ ಮಣಿಕರ್ಣಿಕಾ ಘಾಟ್‌ವರೆಗಿನ ಪ್ರದೇಶವನ್ನು ಒಂದು ಧಾರ್ಮಿಕ ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಪಡಿಸುವುದು ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದು. ಯೋಜನೆ ವಿಸ್ತೃತ ವರದಿ ಸಿದ್ಧವಾಗುವುದಕ್ಕೂ ಮುನ್ನ ಈ ಯೋಜನೆಗೆ, 'ಕಾಶಿ ವಿಶ್ವನಾಥ ಕಾರಿಡಾರ್' ಎಂದು ಹೆಸರಿಡಲಾಗಿತ್ತು. ಆದರೆ ನಂತರದ ದಿನಗಳಲ್ಲಿ ಯೋಜನೆಯನ್ನು 'ಕಾಶಿ ವಿಶ್ವನಾಥ ಧಾಮ' ಎಂದು ಬದಲಿಸಲಾಯಿತು. ಈ ಯೋಜನೆ ಅನುಷ್ಠಾನಕ್ಕೆಂದು ಕಾಶಿ ವಿಶ್ವನಾಥ ವಿಶೇಷ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ರಚಿಸಲಾಗಿದೆ. ಯೋಜನೆ ಅನುಷ್ಠಾನದ ಉಸ್ತುವಾರಿಯನ್ನು ಈ ಮಂಡಳಿ ನೋಡಿಕೊಳ್ಳುತ್ತಿದೆ



'ದೆಹಲಿಯ ಗದ್ದುಗೆ ಹಿಡಿಯಲು ಉತ್ತರ ಪ್ರದೇಶವೇ ಹೆದ್ದಾರಿ' ಎಂಬುದು ಭಾರತದ ರಾಜಕೀಯ ಪಕ್ಷಗಳಿಗೆ ಸ್ಪಷ್ಟವಾಗಿ ಅರಿವಿದೆ. ಉತ್ತರ ಪ್ರದೇಶವನ್ನು ಗೆದ್ದರಷ್ಟೇ ದೆಹಲಿಯ ದಾರಿ ಸರಳ ಎಂಬುದು ಬಿಜೆಪಿಗೆ ಇನ್ನೂ ಚೆನ್ನಾಗಿ ತಿಳಿದಿದೆ. ಇನ್ನು ಕೆಲವೇ ತಿಂಗಳುಗಳಲ್ಲಿ ಉತ್ತರ ಪ್ರದೇಶ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಚುನಾವಣೆ ಗೆಲ್ಲುವ ದಿಸೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಕಾರ್ಯತಂತ್ರ ಆರಂಭಿಸಿವೆ. ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಅವರ ವಿಜಯ ಯಾತ್ರೆಯ ನಾಲ್ಕು ಹಂತಗಳು ಪೂರ್ಣಗೊಂಡಿವೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ 'ಪ್ರತಿಜ್ಞಾ ಯಾತ್ರೆ' ಒಂದು ಸುತ್ತು ಮುಗಿಸಿದೆ. ಆದರೆ, ಬಿಜೆಪಿ ಅತ್ಯಂತ ಭಿನ್ನವಾಗಿ ಚುನಾವಣೆ ಎದುರಿಸಲು ನೆಲ ಹದಗೊಳಿಸುವ ಕೆಲಸ ಮಾಡುತ್ತಿದೆ.

'ನರೇಂದ್ರ ಮೋದಿ ಅವರು 2014ರಲ್ಲಿ ಪ್ರಧಾನಿಯಾದ ಬಳಿಕ, ಸನಾತನ ಸಂಸ್ಕೃತಿಯ ಪವಿತ್ರ ತಾಣಗಳು ಅಪೂರ್ವ ನಿಜ ಅಸ್ತಿತ್ವವನ್ನು ಪಡೆಯುವಲ್ಲಿ ಅತ್ಯಂತ ವೈಭವದ ಕೆಲಸ ಮಾಡುತ್ತಿದ್ದಾರೆ. ರಾಮಜನ್ಮಭೂಮಿ ಅಥವಾ ವಿಶ್ವನಾಥ ಧಾಮವೇ ಇರಲಿ, ಇವೆಲ್ಲವನ್ನೂ ನೋಡುವ ಬಹುದೊಡ್ಡ ಅದೃಷ್ಟ ನಮ್ಮದಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಟ್ವೀಟ್ ಮಾಡಿದ್ದಾರೆ.

'ಮೊಘಲ್ ದೊರೆ ಔರಂಗಜೇಬ್ ನಾಶಗೊಳಿಸಿದ್ದ ಕಾಶಿ ವಿಶ್ವನಾಥ ದೇಗುಲವನ್ನು ರಾಣಿ ಅಹಿಲ್ಯಾ ಹೋಳ್ಕರ್ ನವೀಕರಿಸಿದ್ದರು. ಅದಾದ ಸುಮಾರು 250 ವರ್ಷಗಳ ಬಳಿಕ ನರೇಂದ್ರ ಮೋದಿ ಅವರು ದೇಗುಲಕ್ಕೆ ಪುನಶ್ಚೇತನ ನೀಡುವ ಕೆಲಸ ಮಾಡಿದ್ದಾರೆ' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಅವರು ಹೇಳಿದ್ದಾಗಿ ವರದಿಯಾಗಿದೆ.


ಹಿಂದೂ ಸಂಸ್ಕೃತಿ, ದೇವಾಲಯಗಳ ರಕ್ಷಕ ಮತ್ತು ಪೋಷಕ ಮೋದಿ ಎಂದು ಬಿಂಬಿಸುವ ಪ್ರಯತ್ನದ ಭಾಗ ಎಂದು ಈ ಎರಡೂ ಹೇಳಿಕೆಗಳನ್ನು ಪರಿಗಣಿಸಬಹುದು. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಮೋದಿ ಅವರು ಚಾಲನೆ ಕೊಟ್ಟಿದ್ದಾರೆ; ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಮೋದಿ ಅವರು ಸೋಮನಾಥ ದೇವಾಲಯದ ನವೀಕರಣ ಮಾಡಿದ್ದರು; 2013ರ ಪ್ರವಾಹದಲ್ಲಿ ಧ್ವಂಸವಾಗಿದ್ದ ಚಾರ್ ಧಾಮವನ್ನು ಮೋದಿ ನೇತೃತ್ವದ ಕೇಂದ್ರ ಸರ್ಕಾರ ಸರಿಪಡಿಸಿತ್ತು; ಚಾರ್ ಧಾಮದ ನಾಲ್ಕು ತಾಣಗಳಾದ ಗಂಗೋತ್ರಿ, ಯಮುನೋತ್ರಿ, ಕೇದಾರನಾಥ, ಬದರೀನಾಥವನ್ನು ಸಂಪರ್ಕಿಸುವ ಸರ್ವ ಋತು ರಸ್ತೆ ಯೋಜನೆಗೂ ಕೇಂದ್ರ ಅನುಮೋದನೆ ನೀಡಿದೆ. ಈ ಎಲ್ಲ ವಿಚಾರಗಳನ್ನು ಬಿಜೆಪಿ ಮುನ್ನೆಲೆಗೆ ತರುವ ಕೆಲಸ ಮಾಡುತ್ತಿದೆ.

ಕಾಶಿ ವಿಶ್ವನಾಥ ಧಾಮ ಯೋಜನೆಯ ಮೊದಲ ಹಂತವಷ್ಟೇ ಪೂರ್ಣಗೊಂಡಿದೆ. ಆದರೆ, ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ ಕಾರಣಕ್ಕಾಗಿಯೇ ಈಗ ಉದ್ಘಾಟನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ವಿರೋಧ ಪಕ್ಷಗಳ ಮುಖಂಡರು ಟೀಕಿಸುತ್ತಿದ್ದಾರೆ. ಮೋದಿ ಅವರು ಎರಡು ದಿನ ವಾರಾಣಸಿಯಲ್ಲಿಯೇ ಉಳಿದು ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ. ಕಾರ್ಯಕ್ರಮಕ್ಕೆ ವ್ಯಾಪಕ ಪ್ರಚಾರ ನೀಡುವ ಕೆಲಸವನ್ನೂ ಮಾಡಲಾಗುತ್ತಿದೆ. ದೇಶದ 51 ಸಾವಿರ ಸ್ಥಳಗಳಲ್ಲಿ ಬೃಹತ್ ಎಲ್‌ಇಡಿ ಪರದೆಗಳನ್ನು ಅಳವಡಿಸಿ ಸೋಮವಾರದ ಕಾರ್ಯಕ್ರಮದ ನೇರಪ್ರಸಾರಕ್ಕೆ ಬಿಜೆಪಿ ವ್ಯವಸ್ಥೆ ಮಾಡಿದೆ.

ಈ ಎಲ್ಲವುಗಳಿಂದ ಎರಡು ಅಂಶ ಸ್ಪಷ್ಟವಾಗುತ್ತಿದೆ. ಮೊದಲನೆಯದು, ಉತ್ತರ ಪ್ರದೇಶ ಚುನಾವಣೆಯಲ್ಲಿ ಧಾರ್ಮಿಕ ಧ್ರುವೀಕರಣವೇ ಬಿಜೆಪಿಯ ಪ್ರಮುಖ ತಂತ್ರ. ಎರಡನೆಯದಾಗಿ, ಚುನಾವಣಾ ಪ್ರಚಾರದಲ್ಲಿ ಮೋದಿ ಅವರೇ ಎಂದಿನಂತೆ ಮುಂಚೂಣಿಯಲ್ಲಿ ಇರಲಿದ್ದಾರೆ. 2017ರ ವಿಧಾನಸಭಾ ಚುನಾವಣೆ, 2019ರ ಲೋಕಸಭಾ ಚುನಾವಣೆಯ ರೀತಿಯಲ್ಲಿಯೇ ಈ ಬಾರಿಯೂ ಮೋದಿ ಅವರು ಪ್ರಚಾರ ಮಾಡಲಿದ್ದಾರೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಅತ್ಯಂತ ಮುಖ್ಯ. ರಾಜ್ಯದಲ್ಲಿ ಚುನಾವಣಾ ಪ್ರಚಾರದ ನೇತಾರರ ಹೊಣೆಗಾರಿಕೆ ವಹಿಸಲು ಮೋದಿ ಅವರು ಸಿದ್ಧರಾಗುವ ಸಾಧ್ಯತೆ ಬಹಳ ಕ್ಷೀಣ.

ಚುನಾವಣೆಗೆ ರಣತಂತ್ರ ಹೆಣೆಯುವುದರಲ್ಲಿ ಬಿಜೆಪಿ ನಾಯಕರು ನಿಸ್ಸೀಮರು. ಆದರೆ ಈ ಬಾರಿ ಎಂದೂ ಇಲ್ಲದಷ್ಟು ವ್ಯವಸ್ಥಿತವಾಗಿ, ಗಂಭೀರವಾಗಿ ಬಿಜೆಪಿ ಕೆಲಸ ಮಾಡುತ್ತಿದೆ. ಉತ್ತರ ಪ್ರದೇಶದಲ್ಲಿ ನಿರಾಯಾಸ ಗೆಲುವು ಸಾಧ್ಯವಿಲ್ಲ ಎಂಬ ಭಾವನೆ ಬಿಜೆಪಿಯಲ್ಲಿ ಇದೆ ಎಂಬುದರ ಸುಳಿವು ಇದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ. ಉತ್ತರ ಪ್ರದೇಶದ ಪಶ್ಚಿಮ ಭಾಗದ ರೈತರು ವಿರೋಧಿಸುತ್ತಿದ್ದ ಮೂರು ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು ಕೂಡ ಇದೇ ಕಾರಣದಿಂದ ಎಂದು ಹೇಳಲಾಗುತ್ತಿದೆ.

ಕಾಶಿ ವಿಶ್ವನಾಥ ಧಾಮ ಅಭಿವೃದ್ಧಿ ಯೋಜನೆ



ಪ್ರಜಾವಾಣಿ ಗ್ರಾಫಿಕ್ಸ್: ಶಿಲ್ಪಾ ಕಬ್ಬಿಣಕಂತಿ

₹850 ಕೋಟಿ ಯೋಜನೆಯ ಒಟ್ಟು ವೆಚ್ಚ	42,000 ಚದರ ಮೀಟರ್ ಕಾಶಿ ವಿಶ್ವನಾಥ ಧಾಮದ ವಿಸ್ತೀರ್ಣ	50 ಅಡಿ ವಿಶ್ವನಾಥ ದೇವಾಲಯದಿಂದ ಮಣಿಕರ್ಣಿಕಾ ಘಾಟ್‌ಗೆ ಸಂಪರ್ಕ ಕಲ್ಪಿಸುವ ಕಾರಿಡಾರ್‌ನ ಅಗಲ	850 ಚದರ ಮೀಟರ್ ಅತಿಗಣ್ಯ ವ್ಯಕ್ತಿಗಳ ವಾಹನ ನಿಲುಗಡೆ ಪ್ರದೇಶ

ಜ್ಞಾನವ್ಯಾಪಿ ಮಸೀದಿ

ಕಾಶಿ ವಿಶ್ವನಾಥ ದೇವಾಲಯದ ಸುತ್ತಾಲಯದ ಉತ್ತರ ದಿಕ್ಕಿನಲ್ಲಿ ಜ್ಞಾನವ್ಯಾಪಿ ಮಸೀದಿ ಇದೆ. ವಿಶ್ವನಾಥ ದೇವಾಲಯದ ಉತ್ತರ ದಿಕ್ಕಿನಲ್ಲಿದ್ದ ವಿಶ್ವೇಶ್ವರ ದೇವಾಲಯವನ್ನು ಕೆಡವಿ, ಮೊಘಲ್ ದೊರೆ ಔರಂಗಜೇಬ್ 1660ರಲ್ಲಿ ಈ ಮಸೀದಿಯನ್ನು ನಿರ್ಮಿಸಿದ ಎಂದು ಇತಿಹಾಸಕಾರರ ಒಂದು ಬಣ ಹೇಳುತ್ತದೆ. 14ನೇ ಶತಮಾನದಲ್ಲಿಯೇ ಜುನಾಪುರದ ಸಾರಿಖಿ ಸುಲ್ತಾನ ಈ ಮಸೀದಿಯನ್ನು ನಿರ್ಮಿಸಿದ ಎಂದು ಇತಿಹಾಸಕರರ ಮತ್ತೊಂದು ಗುಂಪು ಪ್ರತಿಪಾದಿಸುತ್ತದೆ.

ಈಗ ಗುರುತಿಸಲಾಗಿರುವ 'ಕಾಶಿ ವಿಶ್ವನಾಥ ವಿಶೇಷ ಪ್ರದೇಶ'ದ ವ್ಯಾಪ್ತಿಯಲ್ಲಿ ಈ ಮಸೀದಿಯು ಇದೆ. ಮಸೀದಿ ಕಟ್ಟಡವನ್ನು ಕೆಡವಿ ದೇವಾಲಯ ಸಂಕೀರ್ಣ ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗಿತ್ತು.

ಅಯೋಧ್ಯೆ ರಾಮಮಂದಿರ–ಬಾಬರಿ ಮಸೀದಿ ತೀರ್ಪು ಬಂದ ನಂತರ, 'ಅಯೋಧ್ಯೆ ನಮ್ಮದಾಯಿತು. ಕಾಶಿ, ಮಥುರಾ ಬಾಕಿ ಇದೆ' ಎಂದು ಬಿಜೆಪಿಯ ಹಲವು ನಾಯಕರು ಹೇಳಿದ್ದರು. ಈ ಘೋಷಣೆಯ ಭಾಗವಾಗಿಯೇ ಮಸೀದಿಯನ್ನು ಕೆಡವಿ, ಆ ಜಾಗವನ್ನು ಕಾಶಿ ವಿಶ್ವನಾಥ ದೇವಾಲಯ ಟ್ರಸ್ಟ್‌ನ ವಶಕ್ಕೆ ನೀಡಬೇಕು ಎಂದು ಹಲವರು ವಾರಾಣಸಿ ಜಿಲ್ಲಾ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ದೇವಾಲಯದ ಭಾಗವನ್ನು ಕೆಡವಿ, ಮಸೀದಿಯನ್ನು ನಿರ್ಮಿಸಲಾಗಿದೆಯೇ ಎಂಬುದನ್ನು ಪತ್ತೆ ಮಾಡಲು ಉತ್ಖನನ ನಡೆಸಿ ಎಂದು 2021ರ ಮಾರ್ಚ್‌ನಲ್ಲಿ ವಾರಾಣಸಿ ಜಿಲ್ಲಾ ಸಿವಿಲ್ ನ್ಯಾಯಾಲಯವು ಆದೇಶ ನೀಡಿತ್ತು. ಅದರಂತೆ, ಭಾರತೀಯ ಪುರಾತತ್ವ ಇಲಾಖೆಯು ಸರ್ವೇಕ್ಷಣೆ ಕಾರ್ಯವನ್ನು ಆರಂಭಿಸಿತ್ತು. ಈ ಆದೇಶದ ವಿರುದ್ಧ ಅಲಹಾಬಾದ್ ಹೈಕೋರ್ಟ್‌ನಲ್ಲಿ ಉತ್ತರ ಪ್ರದೇಶ ವಕ್ಫ್ ಮಂಡಳಿ ಮೇಲ್ಮನವಿ ಸಲ್ಲಿಸಿತ್ತು. ಅಲಹಾಬಾದ್ ಹೈಕೋರ್ಟ್ ಸರ್ವೇಕ್ಷಣೆ ಕಾರ್ಯಕ್ಕೆ ಇದೇ ಸೆಪ್ಟೆಂಬರ್ 9ರಂದು ತಡೆ ನೀಡಿತು. ಹೀಗಾಗಿ ಸರ್ವೇಕ್ಷಣೆ ಕಾರ್ಯ ಸ್ಥಗಿತವಾಗಿದೆ.

ಮಸೀದಿಯ ಕೆಲವು ಭಾಗವನ್ನು ಕೆಡವಲಾಗಿದೆ ಎಂದು ಕೆಲವು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಆದರೆ ಈ ಬಗ್ಗೆ ಯಾವುದೇ ಅಧಿಕೃತ ಮಾಹಿತಿ ಲಭ್ಯವಿಲ್ಲ.

ಆಧಾರ: ಕಾಶಿ ವಿಶ್ವನಾಥ ಧಾಮ ಅಭಿವೃದ್ಧಿ ಮಾಸ್ಟರ್‌ಪ್ಲಾನ್, ರಾಷ್ಟ್ರೀಯ ಮಾಹಿತಿ ಕೇಂದ್ರ

ವರದಿ: ಹಮೀದ್ ಕೆ., ಜಯಸಿಂಹ ಆರ್.

ಪ್ರಜಾ ಮತ
ಜನತಂತ್ರದ ಹಬ್ಬ 2021

ಬೆಲೆ ಏರಿಕೆ ಖಂಡಿಸಿ ರಾಹುಲ್ ಪಾದಯಾತ್ರೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬೆಲೆ ಏರಿಕೆ ವಿರೋಧಿಸಿ ಇದೇ 18ರಂದು ಉತ್ತರ ಪ್ರದೇಶದ ಅಮೇಠಿಯಲ್ಲಿ ಪಾದಯಾತ್ರೆ ನಡೆಸಲಿದ್ದಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಕೂಡಾ ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಬೆಲೆ ಏರಿಕೆ ವಿರುದ್ಧ 'ಜನ ಜಾಗೃತಿ ಅಭಿಯಾನ' ಹೆಸರಿನಲ್ಲಿ ದೇಶದಾದ್ಯಂತ ಕಾಂಗ್ರೆಸ್ ಪ್ರತಿಭಟನೆ ನಡೆಸುತ್ತಿದೆ. ಅದರ ಭಾಗವಾಗಿ ಈ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. 'ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿರುವ ಹಿನ್ನೆಲೆಯಲ್ಲಿ ಅವರು ಅಮೇಠಿಗೆ ಆಗಮಿಸುತ್ತಿರುವುದು ಮಹತ್ವ ಪಡೆದಿದೆ. ಇದು ಪಕ್ಷದ ಹುರುಪನ್ನು ತೋರಿಸುತ್ತದೆ. ರಾಹುಲ್ ಅಮೇಠಿಯಲ್ಲಿ ಪಾದಯಾತ್ರೆ ಮಾಡುತ್ತಿರುವುದು ಎದುರಾಳಿ ಪಕ್ಷಗಳಿಗೆ ಮಾತ್ರವಲ್ಲ, ನಮ್ಮ ಪಕ್ಷದ ಸದಸ್ಯರಿಗೂ ದೊಡ್ಡ ಸಂದೇಶ' ಎಂದು ಕಾಂಗ್ರೆಸ್ ಮುಖಂಡರೊಬ್ಬರು ತಿಳಿಸಿದ್ದಾರೆ.



ರಾಹುಲ್ ಗಾಂಧಿ

ರಾಯ್‌ಬರೇಲಿಯಲ್ಲೂ ಸೇರಿ ಎರಡು ದಿನಗಳ ಪಾದಯಾತ್ರೆ ಹಮ್ಮಿಕೊಳ್ಳಲು ಮೊದಲಿಗೆ ನಿರ್ಧರಿಸಲಾಗಿತ್ತು. ಬಳಿಕ ಆ ನಿರ್ಧಾರ ಬದಲಿಸಿ, ಪಾದಯಾತ್ರೆಯನ್ನು ಅಮೇಠಿಗೆ ಸೀಮಿತಗೊಳಿಸಲಾಯಿತು. ಬೆಲೆ ಏರಿಕೆ ವಿಷಯಕ್ಕೆ ಆದ್ಯತೆ ನೀಡಬೇಕು ಎಂದು ದಿಗ್ವಿಜಯ್ ಸಿಂಗ್ ನೇತೃತ್ವದ ಸಮಿತಿ ನಿರ್ಧರಿಸಿದೆ ಎನ್ನಲಾಗಿದೆ.

2019ರ ಲೋಕಸಭೆ ಚುನಾವಣೆಯಲ್ಲಿ ರಾಹುಲ್ ಗಾಂಧಿ ಅಮೇಠಿ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ಕೇಂದ್ರ ಸಚಿವೆ ಸ್ಮೃತಿ ಇರಾನಿ ಎದುರು ಸೋಲು ಕಂಡಿದ್ದರು. ಅದಾದ ಬಳಿಕ ರಾಹುಲ್ ಅಮೇಠಿಗೆ ಆಗಮಿಸುತ್ತಿರುವುದು ಇದು ಎರಡನೇ ಬಾರಿ.

ಎರಡನೇ ಹಂತದ ಪ್ರತಿಭಟನೆ ಆಯೋಜಿಸಲು ಕಾಂಗ್ರೆಸ್ ತಯಾರಿ ನಡೆಸಿದೆ. ಮುಂದಿನ ವರ್ಷ ಜನವರಿ ಕೊನೆಯ ವಾರದಲ್ಲಿ ಪ್ರತಿಭಟನೆಗಳನ್ನು ಹಮ್ಮಿಕೊಳ್ಳುವ ಸಾಧ್ಯತೆ ಇದೆ. ನಿರುದ್ಯೋಗ ಮತ್ತು ದೇಶದ ಆಸ್ತಿಯನ್ನು ಕೇಂದ್ರ ಸರ್ಕಾರ ಮಾರಾಟ ಮಾಡುತ್ತಿರುವುದರತ್ತ ಜನರ ಗಮನ ಸೆಳೆಯಲು ಆ ವೇಳೆ ಒತ್ತು ನೀಡಲಾಗುವುದು. ಈ ಕುರಿತು ಚರ್ಚಿಸಲು ಕಾಂಗ್ರೆಸ್‌ನ ಪ್ರತಿಭಟನೆ ಆಯೋಜನೆ ಸಮಿತಿಯು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಇತ್ತೀಚೆಗೆ ಭೇಟಿಯಾಗಿತ್ತು ಎಂದು ಮೂಲಗಳು ತಿಳಿಸಿವೆ.

ಗೋಶಾಲೆ ದುಃಸ್ಥಿತಿ: ಪ್ರಿಯಾಂಕಾ ವಾಗ್ದಾಳಿ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಗೋಶಾಲೆಗಳ ದುಃಸ್ಥಿತಿ ಕುರಿತು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರದ ವಿರುದ್ಧ ಸೋಮವಾರ ವಾಗ್ದಾಳಿ ನಡೆಸಿದ್ದಾರೆ.

ಬಂದಾ ಗೋಶಾಲೆಯ ಜಾನುವಾರುಗಳನ್ನು ಜೀವಂತವಾಗಿ ಹೂಳಲಾಗಿರುವ ಕುರಿತು ಮಾಧ್ಯಮಗಳು ವರದಿ ಮಾಡಿದ ಬಳಿಕ ಅವರು ಈ ಕುರಿತು ಪ್ರಶ್ನೆ ಎತ್ತಿದ್ದಾರೆ. ಟ್ವೀಟ್ ಮಾಡಿರುವ ಅವರು 'ಯೋಗಿ ಆದಿತ್ಯನಾಥ ಅವರೇ, ಬಂದಾದಲ್ಲಿ ನೂರಾರು ಜಾನುವಾರುಗಳನ್ನು ನಿಮ್ಮ ಸರ್ಕಾರ ಜೀವಂತವಾಗಿ ಸಮಾಧಿ ಮಾಡಿದೆ. ಗೋಶಾಲೆಗಳಲ್ಲಿ ಜಾನುವಾರುಗಳು ಕ್ರೌರ್ಯ ಮತ್ತು ಅಮಾನವೀಯತೆಯ ಸಂತ್ರಸ್ತರಾಗಿವೆ. ನರೇಂದ್ರ ಮೋದಿ ಅವರೇ, ನೀವು ಇಂದು ಉತ್ತರ ಪ್ರದೇಶದಲ್ಲಿ ಇದ್ದೀರಿ. ಗೋಶಾಲೆಗಳ ಸ್ಥಿತಿ ಕುರಿತು ಹೊಣೆಗಾರಿಕೆ ತೆಗೆದುಕೊಳ್ಳಲು ಉತ್ತರ ಪ್ರದೇಶ ಸರ್ಕಾರವನ್ನು ಕೇಳುತ್ತೀರಾ?' ಎಂದಿದ್ದಾರೆ.

ಬಂದಾ ಗೋಶಾಲೆ ಕುರಿತು ಇದಕ್ಕೂ ಮೊದಲು ಪ್ರತಿಕ್ರಿಯೆ ನೀಡಿದ್ದ ಬಂದಾ ಜಿಲ್ಲಾ ಮ್ಯಾಜಿಸ್ಟ್ರೇಟ್ ಅನುರಾಗ್ ಪಟೇಲ್, ಬಂದಾ ಗೋಶಾಲೆಯ 134 ಗೋವುಗಳು ಮತ್ತು ಇತರ ಜಾನುವಾರುಗಳನ್ನು ನಾರೈನಿಯ ತಾತ್ಕಾಲಿಕ ಗೋಶಾಲೆಗೆ ಶನಿವಾರ ವರ್ಗಾಯಿಸಲಾಗಿದೆ ಎಂದು ಹೇಳಿದ್ದರು.

'ಮಥುರಾ ಐತಿಹಾಸಿಕ ಅಭಿವೃದ್ಧಿ'

ಹರ್‌ದೋಯಿ (ಪಿಟಿಐ): ಬಿಜೆಪಿ ಆಡಳಿತದಲ್ಲಿ ಮಥುರಾ ಐತಿಹಾಸಿಕ ಅಭಿವೃದ್ಧಿ ಹೊಂದಲಿದೆ ಎಂದು ಉತ್ತರ ಪ್ರದೇಶ ವಿಧಾನಸಭೆ ಉಪ ಸ್ಪೀಕರ್ ನಿತಿನ್ ಅಗರ್‌ವಾಲ್ ಭಾನುವಾರ ಹೇಳಿದ್ದಾರೆ.

ಪುಣ್ಯಕ್ಷೇತ್ರಗಳನ್ನು ಬಿಜೆಪಿ ಅಲ್ಲದೇ ಬೇರೆ ಯಾರು ಅಭಿವೃದ್ಧಿಪಡಿಸುತ್ತಾರೆ ಎಂದು ಪ್ರಶ್ನಿಸಿದ್ದಾರೆ. ಇಲ್ಲಿಯ ಆಂಗ್ಲೋ–ವೇದಿಕ್ ಇಂಟರ್ ಕಾಲೇಜಿನಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಅವರು, '500 ವರ್ಷಗಳಷ್ಟು ಹಳೆಯದಾದ ಅಯೋಧ್ಯೆ ಯುದ್ಧವನ್ನು ಬಿಜೆಪಿ ಗೆದ್ದಿದೆ. ಭವ್ಯವಾದ ರಾಮ ಮಂದಿರವನ್ನು ನಿರ್ಮಿಸಲಾಗುತ್ತಿದೆ. ಕಾಶಿಯನ್ನೂ ಅಂತರರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಲಾಗಿದೆ. ಮಥುರಾ ಶ್ರೀಕೃಷ್ಣನ ಭೂಮಿ. ಬಿಜೆಪಿ ಸರ್ಕಾರವು ಮಥುರಾದ ದೇವಾಯಲಗಳನ್ನು ಅಭಿವೃದ್ಧಿಪಡಿಸದೇ ಇದ್ದರೆ ಬೇರೆ ಯಾವ ಸರ್ಕಾರ ಅಭಿವೃದ್ಧಿಪಡಿಸುತ್ತದೆ' ಎಂದು ಅವರು ಪ್ರಶ್ನಿಸಿದ್ದಾರೆ. ನಾವು ಈಗಾಗಲೇ ಎರಡು ಯುದ್ಧಗಳನ್ನು ಗೆದ್ದಿದ್ದೇವೆ. ಮೂರನೇ ಯುದ್ಧವನ್ನೂ ಗೆಲ್ಲುತ್ತೇವೆ ಎಂದರು.

ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ (ಎಲ್ಲರ ಜೊತೆ, ಎಲ್ಲರ ವಿಕಾಸ, ಎಲ್ಲರ ವಿಶ್ವಾಸ) ಎಂಬ ತತ್ವದಡಿ ಬಿಜೆಪಿ ಕೆಲಸ ಮಾಡುತ್ತಿದೆ. ಆದರೆ, ಸಮಾಜವಾದಿ ಪಕ್ಷ ಭಯ ಬಿತ್ತುವ ರಾಜಕೀಯದಲ್ಲಿ ತೊಡಗಿದೆ. ಎಸ್‌ಪಿ ಆಡಳಿತದಲ್ಲಿಯೇ ಮುಜಫ್ಫರ್‌ನಗರ ಗಲಭೆ ನಡೆದಿದ್ದು ಎಂದು ಹೇಳಿದರು.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೋವಿಡ್–19 ತಡೆಗೆ ದೇಶದಲ್ಲಿ ದಾಖಲೆ ಮಟ್ಟದಲ್ಲಿ ಲಸಿಕೆ ನೀಡಲಾಗಿದೆ. ಈ ಸಂಭ್ರಮ ಆಚರಿಸಲು ಸರ್ಕಾರ ಮೂರು ತಿಂಗಳು ಉಚಿತ ಇಂಟರ್‌ನೆಟ್ ಸಂಪರ್ಕ ನೀಡಲಿದೆ ಎಂಬ ಮಾಹಿತಿಯೊಂದು ಹರಿದಾಡುತ್ತಿದೆ. ನಿಮ್ಮ ಬಳಿ ರಿಲಯನ್ಸ್ ಜಿಯೊ, ಏರ್‌ಟೆಲ್ ಅಥವಾ ವಿ ಮೊಬೈಲ್ ಸಂಪರ್ಕ ಇದ್ದರೆ ನೀವು ಈ ಕೊಡುಗೆ ಪಡೆಯಬಹುದು ಎನ್ನಲಾಗಿದೆ. ಜೊತೆಗೆ ಒಂದು ಲಿಂಕ್ ಅನ್ನು ಕೂಡಾ ನೀಡಲಾಗಿದೆ. ಈ ಲಿಂಕ್ ಬಳಸಿ ಇಂಟರ್‌ನೆಟ್ ರೀಚಾರ್ಜ್ ಮಾಡಬಹುದು ಎಂದು ಹೇಳಲಾಗಿದೆ.



ಈ ರೀತಿಯ ಕೊಡುಗೆಯನ್ನು ನೀಡುತ್ತಿಲ್ಲ ಎಂದು ಸರ್ಕಾರವೇ ಖಚಿತಪಡಿಸಿದೆ. ಜೊತೆಗೆ ಈ ಕೊಡುಗೆ ಪಡೆಯುವ ಸಲುವಾಗಿ ತಮ್ಮ ಬ್ಯಾಂಕ್ ಖಾತೆ ವಿವರ ಸೇರಿ ಯಾವುದೇ ವೈಯಕ್ತಿಕ ವಿವರಗಳನ್ನು ಯಾರೊಡನೆಯೂ ಅಥವಾ ಯಾವ ಲಿಂಕ್‌ನಲ್ಲಿಯೂ ಹಂಚಿಕೊಳ್ಳಬೇಡಿ ಎಂದು ಜನರಿಗೆ ಹೇಳಿದೆ. ಸರ್ಕಾರದ ಪಿಐಬಿ ಫ್ಯಾಕ್ಟ್‌ಚೆಕ್ ಟ್ವಿಟರ್ ಖಾತೆಯಲ್ಲಿ ಈ ಕುರಿತು ಮಾಹಿತಿ ನೀಡಲಾಗಿದೆ.

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ಡಿಸೆಂಬರ್ 14, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮೃಗಶಿರ ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಜ್ಯೇಷ್ಠ ಏಕಾದಶಿ ಗಂ. 45-52 (ರಾ. 1-01) ಮಂಗಳವಾರ ನಿತ್ಯ ನಕ್ಷತ್ರ ಅಶ್ವಿನಿ ಗಂ. 59-30 (ಬೆ.ಝಾ. 6-28) ವರೀಯನ್ ನಾಮ ಯೋಗ ಗಂ. 5-54 ವಣಿಜ ಕರಣ ಗಂ. 14-45 ವಿಷ ಗಂ. 49-10 ಅಮೃತ ಗಂ 40-37: ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-36 ಸೂರ್ಯಾಸ್ತ: 5-51 ಅದೃಷ್ಟ ಸಂಖ್ಯೆ 3, 7

ಮೇಷ: ಒತ್ತಡಗಳ ನಡುವೆಯೂ ನೆಮ್ಮದಿ ಸಂತೋಷ. ಕೆಲಸದಲ್ಲಿ ಉತ್ಸುಕತೆಯಿಂದ ತೊಡಗಿಕೊಳ್ಳುವಿರಿ. ಗೆಳೆಯರೊಂದಿಗೆ ಸಂತೋಷ ಕೂಟದಲ್ಲಿ ಭಾಗವಹಿಸುವ ಸಾಧ್ಯತೆ. ವಾಹನ ಚಾಲನೆಯಲ್ಲಿ ಎಚ್ಚರಿಕೆ ಇರಲಿ.

ವೃಷಭ: ನಿತ್ಯದ ಉದ್ಯೋಗದಲ್ಲಿ ಹೊಸತನವನ್ನು ಕಂಡುಕೊಳ್ಳುವಿರಿ. ರೈತಾಪಿ ವರ್ಗದವರಿಗೆ ಉತ್ಪನ್ನಗಳಿಗೆ ಉತ್ತಮ ಬೆಲೆಕಂಡು ಉತ್ಸಾಹ ಮೂಡುವುದು. ದೂರದವರಿಂದ ಸಂತೋಷದ ಸುದ್ದಿಯೊಂದನ್ನು ಕೇಳಲಿದ್ದೀರಿ.

ಮಿಥುನ: ಉದ್ಯೋಗ ವ್ಯವಹಾರಗಳಲ್ಲಿ ಕೂಲಂಕಷ ಅವಲೋಕನ ಒಳಿತು. ಆರ್ಥಿಕ ಅಭಿವೃದ್ಧಿ ಸಾಧಿಸುವಿರಿ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಖರ್ಚು. ಮಕ್ಕಳ ಪ್ರಗತಿಯಿಂದಾಗಿ ಸಂತಸ ಮೂಡುವುದು.

ಕರ್ಕಾಟಕ: ಆರ್ಥಿಕ ಸುಧಾರಣೆಯನ್ನು ಕಂಡುಕೊಳ್ಳುವ ದಿನ. ಷೇರು ಮುಂತಾದ ಹೂಡಿಕೆಗಳಿಗೆ ಅನುಕೂಲಕರ ದಿನ. ನಿಮ್ಮ ಒಳ್ಳೆಯ ನಿರ್ಧಾರದಿಂದಾಗಿ ಸಹೋದ್ಯೋಗಿಗಳ ಸಂತಸಕ್ಕೆ ಕಾರಣರಾಗುವಿರಿ.

ಸಿಂಹ: ಕಟ್ಟಡ ಸಾಮಗ್ರಿಗಳ ದಾಸ್ತಾನುದಾರರಿಗೆ ಅತ್ಯಂತ ಹೆಚ್ಚಿನ ಲಾಭ. ಸ್ಥಿರಾಸ್ತಿ ಖರೀದಿಯ ಬಗ್ಗೆ ಮಾತುಕತೆಯ ಸಾಧ್ಯತೆ ಕಂಡುಬರುವುದು. ಲೇವಾದೇವಿ ವ್ಯವಹಾರಗಳಿಂದಾಗಿ ಹೆಚ್ಚಿನ ಲಾಭದ ನಿರೀಕ್ಷೆ.

ಕನ್ಯಾ: ಗೃಹ ನಿರ್ಮಾಣ ವಿಷಯವಾಗಿ ಹಿರಿಯರೊಂದಿಗೆ ಗಹನ ಚರ್ಚೆ ನಡೆಸಿ ನಿರ್ಧಾರ ಕೈಗೊಳ್ಳುವ ಸಾಧ್ಯತೆ. ವೃತ್ತಿ ಬದುಕಿನಲ್ಲಿ ಅಪೂರ್ವ ಯಶಸ್ಸು. ಅನೇಕ ಅವಕಾಶಗಳು ತೆರೆದುಕೊಳ್ಳುವುದರಿಂದ ಆಯ್ಕೆಯಲ್ಲಿ ಗೊಂದಲ.

ತುಲಾ: ಚಿತ್ರಕಲಾವಿದರಿಗೆ ಉತ್ತಮ ಅವಕಾಶಗಳು. ಬ್ಯಾಂಕ್ ವ್ಯವಹಾರಗಳಿಂದ ಹೆಚ್ಚಿನ ಅನುಕೂಲ. ಭರವಸೆಯನ್ನು ನೀಡುವಾಗ ಪೂರ್ವಾಪರ ಆಲೋಚನೆ ಮಾಡುವುದು ಸೂಕ್ತ. ನಿರ್ವಹಿಸಿದ ಕೆಲಸ–ಕಾರ್ಯಗಳು ಸುಗಮ.

ವೃಶ್ಚಿಕ: ಸ್ವಸಾಮರ್ಥ್ಯದಿಂದ ಸಮಸ್ಯೆಗಳನ್ನು ಪರಿಹರಿಸಿ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕಾದೀತು. ಬಹುಕಾಲದ ಗೆಳೆಯರನ್ನು ಭೇಟಿಯಾಗಿ ಕುಶಲೋಪರಿ ಸಾಧ್ಯತೆ. ಅಧಿಕಾರದ ಇತಿಮಿತಿಯನ್ನರಿತು ಕಾರ್ಯ ನಿರ್ವಹಿಸಿ.

ಧನು: ಸೃಜನಶೀಲ, ಕುಶಲಕರ್ಮಿಗಳಿಗೆ ಉತ್ತಮ ಅವಕಾಶ. ಲಭ್ಯವಿರುವ ಅವಕಾಶಗಳನ್ನು ಸೂಕ್ತವಾಗಿ ಬಳಸಿಕೊಳ್ಳಿ. ವ್ಯಾಪಾರದಲ್ಲಿ ತೊಡಗಿದವರಿಗೆ ಉತ್ತಮ ಲಾಭ. ಆರೋಗ್ಯ ಭಾಗ್ಯ ನಿಮ್ಮದಾಗಲಿದೆ.

ಮಕರ: ರಾಜಕಾರಣದ ಒಳ ಹೊರಗುಗಳ ಬಗ್ಗೆ ರಹಸ್ಯ ಮಾತುಕತೆ ಸಾಧ್ಯತೆ. ಚರ್ಮದ ಸಿದ್ಧ ವಸ್ತುಗಳ ವ್ಯಾಪಾರದಿಂದಾಗಿ ಲಾಭದ ನಿರೀಕ್ಷೆ. ಚಿಲ್ಲರೆ ವ್ಯಾಪಾರಸ್ಥರಿಗೆ ಆದಾಯ. ಮನೆ ನವೀಕರಣ ಕೆಲಸ ಪ್ರಾರಂಭಿಸಲು ಸಕಾಲ.

ಕುಂಭ: ಗುರಿ ತಲುಪುವಲ್ಲಿ ನಿಮ್ಮ ಶ್ರಮವು ಸಾರ್ಥಕ್ಯ ಪಡೆಯುವುದು. ದೂರ ಪ್ರಯಾಣ ಸಾಧ್ಯತೆ. ಆಪ್ತರ ಭೇಟಿ ಸಾಧ್ಯತೆ. ಉದ್ಯೋಗ ಸಂಬಂಧ ಪರೀಕ್ಷೆಯನ್ನು ಎದುರಿಸುವ ಧಾವಂತದಿಂದಾಗಿ ಆರೋಗ್ಯದಲ್ಲಿ ವ್ಯತ್ಯಯ ಸಾಧ್ಯತೆ.

ಮೀನ: ನಿರುದ್ಯೋಗಿಗಳಿಗೆ ಉತ್ತಮ ಅವಕಾಶ ದೊರಕಲಿದೆ. ಉದ್ಯೋಗದ ನಿಮಿತ್ತ ವಿದೇಶ ಪ್ರಯಾಣ ಸಾಧ್ಯತೆ. ಆರ್ಥಿಕ ಸುಧಾರಣೆ. ಸಂಗಾತಿಯ ಆರೋಗ್ಯದ ಕಡೆ ಹೆಚ್ಚಿನ ಗಮನವಹಿಸುವುದು ಸೂಕ್ತ.

ನಿಮ್ಮ ಜನ್ಮದಿನ 14-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ವ್ಯಾಪಾರದಲ್ಲಿ ಯಶಸ್ಸು. ಹೊಸ ಯೋಜನೆಗಳನ್ನು ಪ್ರಾರಂಭಿಸಲು ಸಕಾಲ. ಉದ್ಯೋಗದಲ್ಲಿನ ಕೆಲವು ಬದಲಾವಣೆಗಳನ್ನು ಮಾಡಿಕೊಂಡಲ್ಲಿ ಉನ್ನತ ಸ್ಥಾನವನ್ನು ಹೊಂದುವುದು ಖಚಿತ. ಮೃದು ಸ್ವಭಾವದಿಂದ ಎಲ್ಲರ ಮೆಚ್ಚುಗೆ ಪ್ರಶಂಸೆಗೆ ಪಾತ್ರವಾಗುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಸಾರ್ಥಕವಾದ ಅನುಭವ

ಅರ್ಥವುಂಟನುಭವಕ್ಕಾದೊಡದು ಮಿತದರ್ಥ: |
ಸ್ವಾರ್ಥ ಮಿತವಾದಂತೆ ವಿಸ್ತರಿಪುದರ್ಥ ||
ಸಾರ್ಥಕವದಪ್ಪುದಾರ್ಷೇಯಾರ್ಥದೊಡವೆರೆಯೆ |
ಪಾರ್ಥನನುಭವದಂತೆ – ಮಂಕುತಿಮ್ಮ || 518 ||

ಪದ-ಅರ್ಥ: ಅರ್ಥವುಂಟನುಭವಕ್ಕಾದೊಡದು = ಅರ್ಥವುಂಟು + ಅನುಭವಕ್ಕೆ + ಆದೊಡೆ + ಅದು, ಮಿತದರ್ಥ = ಮಿತದ(ಮಿತವಾದ) + ಅರ್ಥ, ವಿಸ್ತರಿಪುದರ್ಥ = ವಿಸ್ತರಿಪುದು(ವಿಸ್ತರಿಸುವುದು) + ಅರ್ಥ, ಸಾರ್ಥಕವದಪ್ಪುದಾರ್ಷೇಯಾರ್ಥದೊಡವೆರೆಯೆ = ಸಾರ್ಥಕವಪ್ಪುದು(ಸಾರ್ಥಕವಾಗುವುದು) + ಆರ್ಷೇಯ (ಋಷಿ-ಮುನಿಗಳಿಂದ ಬಂದ ಜ್ಞಾನ) + ಅರ್ಥದೊಡವೆರೆಯೆ = ಅರ್ಥದೊಡನೆ ಮಿಳಿತವಾದರೆ.

ವಾಚ್ಯಾರ್ಥ: ಅನುಭವದಿಂದ ದೊರೆತ ಅರ್ಥ ಮಿತಿಯಾದದ್ದು. ಸ್ವಾರ್ಥ ಕಡಿಮೆಯಾಗುತ್ತ ಹೋದಂತೆ ಅನುಭವದ ಅರ್ಥ ವಿಸ್ತಾರವಾಗುತ್ತದೆ. ಅದು ನಮ್ಮ ಆರ್ಷೇಯರು ನೀಡಿದ ಜ್ಞಾನದೊಡನೆ ಸಮ್ಮಿಳಿತವಾದಾಗ ಸಾರ್ಥಕವಾಗುತ್ತದೆ. ಅರ್ಜುನನ ಅನುಭವವೂ ಅದೇ.

ವಿವರಣೆ: ಬಾಳುವುದು ಎಂದರೆ ಬೆಳೆಯುವುದು. ಹಲವಾರು ಆಯಾಮಗಳಲ್ಲಿ ವ್ಯಕ್ತಿ ಬೆಳೆಯುತ್ತಾನೆ. ಬೆಳವಣಿಗೆಗೆ ಮುಖ್ಯ ಆಧಾರ ಅನುಭವ. ಬಾಲ್ಯದಲ್ಲಿ ಮಗುವಿಗೆ ಪ್ರತಿಯೊಂದು ಘಟನೆಯೂ ಅನುಭವವೇ. ಮನುಷ್ಯ ಬೆಳೆದಂತೆ ಅನುಭವಗಳನ್ನು ಅರಗಿಸಿಕೊಳ್ಳುವ ಸಾಮರ್ಥ್ಯವೂ ಕಡಿಮೆಯಾಗುತ್ತ ಹೋಗುತ್ತದೆ. ಒಂದು ಮಗುವಿಗೆ ವಸ್ತುವೊಂದು ದೊರೆತರೆ ಅದು ಅದನ್ನು ಗಮನಿಸುವುದರಲ್ಲಿ ಮಗ್ನವಾಗಿ ಹೋಗುತ್ತದೆ. ಅದನ್ನು ಪೂರ್ತಿಯಾಗಿ ಅನುಭವಿಸುತ್ತದೆ. ಅದೇ ವಸ್ತು ಹಿರಿಯನೊಬ್ಬನಿಗೆ ದೊರೆತರೆ, ಅದು ಯಾವುದರಿಂದ ಮಾಡಲಾದದ್ದು, ಯಾವ ದೇಶದ್ದು, ಅದಕ್ಕೆಷ್ಟು ಬೆಲೆ ಇದ್ದೀತು, ಅದರ ಗುಣಮಟ್ಟ ಯಾವುದು ಎಂದು ಲೆಕ್ಕಾಚಾರ ಮಾಡುತ್ತ ವಸ್ತುವನ್ನು ಸಂಪೂರ್ಣವಾಗಿ ಅನುಭವಿಸಲಾಗುವುದಿಲ್ಲ. ಆದ್ದರಿಂದ ಅನುಭವದಿಂದ ಬರುವ ಅರ್ಥ ಮಿತವಾದದ್ದು. ಅದು ವೈಯಕ್ತಿಕವಾದದ್ದು. ಅದೇ ವಸ್ತು ಮತ್ತೊಬ್ಬರಲ್ಲಿ ಅದೇ ಅನುಭವವನ್ನು ಉಂಟುಮಾಡಲಾರದು. ಅದಕ್ಕೇ ಕಗ್ಗ ಅದನ್ನು ಮಿತದ ಅರ್ಥ ಎನ್ನುತ್ತದೆ. ಅಲ್ಲಿ ಪ್ರತಿಯೊಂದು ಅನುಭವವೂ 'ನಾನು', 'ನನ್ನದು' ಎಂಬುದರ ಸುತ್ತಲೇ ತಿರುಗುತ್ತದೆ. ಮುಂದೆ ಅನುಭವದಲ್ಲಿ ಸ್ವಾರ್ಥ ಕಡಿಮೆಯಾದಂತೆ ಅನುಭವದ ಅರ್ಥ ವಿಸ್ತರಿಸುತ್ತದೆ. ಸ್ವಾಮಿ ವಿವೇಕಾನಂದರು ಶಿಷ್ಯರಿಗೆ ಹೇಳಿದರು, 'ನಾನೀಗ ತುಂಬ ವಿಸ್ತಾರವಾಗುತ್ತಿದ್ದೇನೆ ಎನ್ನಿಸುತ್ತಿದೆ. ಪ್ರಪಂಚದ ಯಾವುದೇ ಮೂಲೆಯಲ್ಲಾದ ನೋವು ನನ್ನದೇ ಎಂದು ಭಾಸವಾಗುತ್ತದೆ, ತಟ್ಟುತ್ತದೆ'. ಅದು ಅತ್ಯಂತ ಸ್ವಾರ್ಥರಹಿತವಾದ ಅನುಭವ.

ಕಗ್ಗ ಹೇಳುತ್ತದೆ, ಈ ಅನುಭವ ನಮ್ಮ ಋಷಿ-ಮುನಿಗಳು, ತಮ್ಮ ತಪಸ್ಸನ್ನು, ತಿಳಿವಳಿಕೆಯನ್ನು ಘನೀಕರಿಸಿ ನೀಡಿದ ತತ್ವಜ್ಞಾನದೊಡನೆ, ಬೆರೆಸಿದಾಗ ಅದು ಸಾರ್ಥಕವಾಗುತ್ತದೆ. ಅದಕ್ಕೊಂದು ಸುಂದರ ಉದಾಹರಣೆಯಾಗಿ ಪಾರ್ಥನ ಅನುಭವವನ್ನು ನೀಡುತ್ತದೆ. ಅರ್ಜುನ ಶೂರ, ತಿಳಿವಳಿಕೆಯುಳ್ಳವನು. ಯುದ್ಧವನ್ನು ತಾನೇ ಮಾಡುತ್ತೇನೆ, ತನ್ನಿಂದಲೇ ಎಲ್ಲರೂ ಹತರಾಗುತ್ತಾರೆ, ಅದರಿಂದ ಸ್ವಜನಹತ್ಯೆಯ ಪಾಪ ಬರುತ್ತದೆ ಎಂದುಕೊಂಡಿದ್ದ. ಅದು 'ಅರ್ಜುನ' ಕೇಂದ್ರಿತವಾದ್ದರಿಂದ ಸ್ವಾರ್ಥದ್ದಾಗಿ ಮಿತವಾಗಿತ್ತು. ಶ್ರೀಕೃಷ್ಣ ಆರ್ಷೇಯ ಜ್ಞಾನವನ್ನು ಅವನಿಗೆ ಬೋಧಿಸಿದಾಗ ಅವನ ದೃಷ್ಟಿ ನಿರ್ಮಲವಾಯಿತು. ತಾನು ಕೇವಲ ಒಂದು ಉಪಕರಣ ಮಾತ್ರ ಎಂಬುದನ್ನು ಅರಿತಾಗ ಅವನ ಯತ್ನ ಸಾರ್ಥಕವಾಯಿತು. ಸ್ವಂತ ಅನುಭವ ಮತ್ತು ಆರ್ಷೇಯ ಜ್ಞಾನದ ಸೇರುವಿಕೆಯಿಂದ ಸಾರ್ಥಕತೆ.


ಪದಬಂಧ 4807 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸುರಕ್ಷಿತವಲ್ಲದುದು (3)
2.ಗರಳದಿಂದ ಕೂಡಿದ ಸಮಾಚಾರ! (3)
4.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
6.ಯಾರೂ ಇಲ್ಲದ ಸ್ಥಳ (3)
7.ಹೆಸರನ್ನಿಡುವ ಶಾಸ್ತ್ರ (5)
10.ಒಳ್ಳೆಯ ಸ್ವಭಾವ (3)
11.ಪುಷ್ಪಗಳನ್ನು ಜೋಡಿಸಿಡುವ ಕರಂಡಕ (3)
13.ಗುಲಾಬಿ ಹೂ ತಂದಿರುವ ಆಳು (3)
14.ಋಷಿಗಳ ವಾಸಸ್ಥಾನ (3)

ಮೇಲಿಂದ ಕೆಳಕ್ಕೆ

1.ಅತ್ಯಂತ ಕೀಳಾದವನು (3)
2.ವಿಧಿಯನ್ನು ಬರೆಯುವಾತ (3)
3.ಮೊದಲಿದ್ದ ಹಾಗೆ! (4)
5.ಒಡೆಯ ಇಲ್ಲಿ ತಿರುಗಿದ್ದಾನಲ್ಲಾ? (3)
6.ಎಲ್ಲರನ್ನು ಒಂದುಗೂಡಿಸುವುದು (5)
8.ಪುಷ್ಪದ ಶರವಿಲ್ಲಿ ಉಲ್ಟಾ ಆಗಿದೆ (3)
9.ತುಸುವೇ ಬಿರಿದ ಮಂದಹಾಸ (4)
10.ಕೊನೆಗೆ ಮಗ ತಿರುಗಿದರೆ ಇದು ಸಲೀಸು! (3)
12.ಯಮವಿದ್ದಾಗಿನ ಸೂತ್ರ (3)



4806ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಶುಷ್ಕಪಾಂಡಿತ್ಯ 3.ಕಲಭ 5.ವಾದ 6.ರವ 10.ತೈಲಶೋಧನಾಗಾರ 13.ರಾಟೆ 15.ರಂಪ 16.ತಕ್ಕಡಿ 17.ಶ್ರವಣೇಂದ್ರಿಯ
ಮೇಲಿಂದ ಕೆಳಕ್ಕೆ: 1.ಶುಭವಾರ್ತೆ 2.ಡಿಕಾವು 4.ಭರವಸೆ 7.ಆಲಸಿ 8.ಅಧಮ 9.ಬಂಗಾರ 11.ಐರಾವತ 12.ಅಪಜಯ 13.ಶೈಶವ

ಸುಡೊಕು 5193

	7	6		4				9
	9			7		3		
7	8			2			5	3
			4		5			7
6		5		8			2	
		7					9	5
	5	2			7			
9		1		5	8	2		4


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5192 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಷೇರುಪೇಟೆ ವಹಿವಾಟು 503



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,511
ಇಂದಿನ ಅಂತ್ಯ	17,368
▼	143
ದಿನದ ಕನಿಷ್ಠ	17,355

ವಿನಿಮಯ ದರ

$ ಡಾಲರ್	75.78
£ ಪೌಂಡ್	100.22
€ ಯುರೊ	85.43
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹505

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1300)
ಸೋಯಾ (ರಿಫೈನ್ಡ್)	₹1210 (1210)
ಸೂರ್ಯಕಾಂತಿ (ರಿಫೈನ್ಡ್)	₹1270 (1270)
ಪಾಮೋಲಿನ್	₹1175 (1176)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹20000-27000
2ನೇ ದರ್ಜೆ	₹10000-18000



ವಿದ್ಯುತ್ ಚಾಲಿತ ಬಿಎಂಡಬ್ಲ್ಯು ಐಎಕ್ಸ್

ಬಿಎಂಡಬ್ಲ್ಯು ವಿದ್ಯುತ್ ಚಾಲಿತ ಎಸ್‌ಯುವಿ 'ಐಎಕ್ಸ್' ಬಿಡುಗಡೆ

ನವದೆಹಲಿ (ಪಿಟಿಐ): ಐಷಾರಾಮಿ ಕಾರು ತಯಾರಿಸುವ ಜರ್ಮನಿಯ ಬಿಎಂಡಬ್ಲ್ಯು ಕಂಪನಿಯು ಭಾರತದ ಮಾರುಕಟ್ಟೆಗೆ ತನ್ನ ಮೊದಲ ವಿದ್ಯುತ್ ಚಾಲಿತ (ಇ.ವಿ.) ಎಸ್‌ಯುವಿ 'ಐಎಕ್ಸ್' ಬಿಡುಗಡೆ ಮಾಡಿದೆ. ಇದರ ಪರಿಚಯಾತ್ಮಕ ಬೆಲೆ ₹ 1.16 ಕೋಟಿ.

ಕಂಪನಿಯು ಆರು ತಿಂಗಳಿನಲ್ಲಿ ಮೂರು ವಿದ್ಯುತ್ ಚಾಲಿತ ವಾಹನಗಳನ್ನು ಬಿಡುಗಡೆ ಮಾಡುವುದಾಗಿ ಘೋಷಿಸಿದ್ದು, ಮೊದಲ ವಾಹನ ಇದಾಗಿದೆ.

2022ರ ಏಪ್ರಿಲ್ ಆರಂಭದಲ್ಲಿ ಈ ಎಸ್‌ಯುವಿಯನ್ನು ಗ್ರಾಹಕರಿಗೆ ವಿತರಿಸಲಾಗುವುದು ಎಂದು ಹೇಳಿದೆ. ಒಮ್ಮೆ ಚಾರ್ಜ್ ಮಾಡಿದರೆ ಕ್ರಮಿಸುವ ದೂರ ಕನಿಷ್ಠ 372 ಕಿಲೋ ಮೀಟರ್, ಗರಿಷ್ಠ 425 ಕಿಲೋ ಮೀಟರ್.

ಈ ಎಸ್‌ಯುವಿ ಅನ್ನು ಭಾರತಕ್ಕೆ ಆಮದು ಮಾಡಿಕೊಳ್ಳಲಾಗುವುದು. ಬಿಎಂಡಬ್ಲ್ಯು ವಿತರಣಾ ಕೇಂದ್ರಗಳು ಮತ್ತು shop.bmw.in ಮೂಲಕ ಬುಕಿಂಗ್ ಮಾಡಬಹುದಾಗಿದೆ ಎಂದು ಬಿಎಂಡಬ್ಲ್ಯು ಗ್ರೂಪ್ ಇಂಡಿಯಾ ಪ್ರಕಟಣೆ ತಿಳಿಸಿದೆ.

ಪರಿಚಯಾತ್ಮಕ ಕೊಡುಗೆಯಲ್ಲಿ ಸ್ಮಾರ್ಟ್ ಬಿಎಂಡಬ್ಲ್ಯು ವಾಲ್‌ಬಾಕ್ಸ್ ಚಾರ್ಜರ್ ಇರಲಿದೆ.

11 ಕಿಲೋವಾಟ್ ಎಸಿ ಚಾರ್ಜರ್ ಮೂಲಕ 7 ಗಂಟೆಗಳಲ್ಲಿ ಶೇಕಡ 100ರಷ್ಟು ಚಾರ್ಜ್ ಮಾಡಬಹುದು. 150 ಕಿಲೋವಾಟ್ ಡಿಸಿ ಚಾರ್ಜರ್ ಮೂಲಕ 31 ನಿಮಿಷಗಳಲ್ಲಿ ಶೇ 80ರವರೆಗೆ, 50 ಕಿಲೋ ವಾಟ್ ಡಿಸಿ ಚಾರ್ಜರ್‌ನಲ್ಲಿ 73 ನಿಮಿಷಗಳಲ್ಲಿ ಶೇ 80ರಷ್ಟು ಚಾರ್ಜ್ ಮಾಡಬಹುದು. ದೇಶದಾದ್ಯಂತ 35 ನಗರಗಳ ತನ್ನ ಡೀಲರ್ ಕೇಂದ್ರಗಳಲ್ಲಿ ವೇಗದ ಚಾರ್ಜಿಂಗ್ ವ್ಯವಸ್ಥೆ ಕಲ್ಪಿಸುವುದಾಗಿ ಕಂಪನಿಯು ಹೇಳಿದೆ.

ಆಹಾರ ಉತ್ಪನ್ನಗಳು ಮತ್ತು ಇಂಧನ ಬೆಲೆ ಏರಿಕೆ ಪರಿಣಾಮ

ಚಿಲ್ಲರೆ ಹಣದುಬ್ಬರ 3 ತಿಂಗಳ ಗರಿಷ್ಠ

• ಅನ್ನಪೂರ್ಣಾ ಸಿಂಗ್

ನವದೆಹಲಿ: ದೇಶದ ಚಿಲ್ಲರೆ ಹಣದುಬ್ಬರ ದರವು ನವೆಂಬರ್‌ನಲ್ಲಿ ಶೇಕಡ 4.91ಕ್ಕೆ ಏರಿಕೆ ಕಂಡಿದೆ. ಇದು ಮೂರು ತಿಂಗಳ ಗರಿಷ್ಠ ಪ್ರಮಾಣ. ಆಹಾರ ಮತ್ತು ಇಂಧನ ಬೆಲೆ ಜಾಸ್ತಿ ಆಗಿದ್ದು ಇತರ ಉತ್ಪನ್ನಗಳ ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ. ಇದರಿಂದಾಗಿ ಹಣದುಬ್ಬರ ಪ್ರಮಾಣ ಕೂಡ ಜಾಸ್ತಿ ಆಗಿದೆ ಎಂದು ತಜ್ಞರು ಹೇಳಿದ್ದಾರೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ (ಸಿಪಿಐ) ಚಿಲ್ಲರೆ ಹಣದುಬ್ಬರ ಪ್ರಮಾಣವು ಹೆಚ್ಚಳ ಆಗಿದ್ದರೂ ಅದು ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿ ಮಾಡಿಕೊಂಡಿರುವ ಗರಿಷ್ಠ ಪ್ರಮಾಣವಾದ ಶೇ 6ಕ್ಕಿಂತ ಕಡಿಮೆ ಮಟ್ಟದಲ್ಲಿಯೇ ಉಳಿದಿದೆ ಎಂಬುದನ್ನು ಕೇಂದ್ರ ಸರ್ಕಾರ ಮಂಗಳವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳಿವೆ.



ಇಂಧನ ಹಾಗೂ ಆಹಾರ ವಸ್ತುಗಳನ್ನು ಹೊರತುಪಡಿಸಿ, ಇತರ ಉತ್ಪನ್ನಗಳ ಹಣದುಬ್ಬರ ಪ್ರಮಾಣವು ನವೆಂಬರ್‌ನಲ್ಲಿ ಶೇ 6.1ಕ್ಕೆ ಏರಿಕೆ ಆಗಿದೆ. ಇದು ಅಕ್ಟೋಬರ್‌ನಲ್ಲಿ ಶೇ 5.8ರಷ್ಟಿತ್ತು.

'ಹಣದುಬ್ಬರದ ಹೆಚ್ಚಳದಲ್ಲಿ ಇಂಧನ ಮತ್ತು ಸರಕು ಸಾಗಣೆ ವೆಚ್ಚಗಳು ಮುಖ್ಯ ಪಾತ್ರ ವಹಿಸಿವೆ. ಆದರೆ, ವೆಚ್ಚ ಹೆಚ್ಚಳದ ಎಷ್ಟು ಪಾಲನ್ನು ಗ್ರಾಹಕರ ಮೇಲೆ ವರ್ಗಾಯಿಸಲಾಗಿದೆ ಎಂಬುದು ಬೇಡಿಕೆ ಎಷ್ಟಿದೆ ಎನ್ನುವುದನ್ನೂ ಆಧರಿಸಿರುತ್ತದೆ' ಎಂದು ನೈಟ್ ಫ್ರ್ಯಾಂಕ್ ಇಂಡಿಯಾ ಸಂಸ್ಥೆಯ ಸಂಶೋಧನಾ ನಿರ್ದೇಶಕ ವಿವೇಕ್ ರಾಠಿ ಹೇಳಿದ್ದಾರೆ.

ಮುಖ್ಯಾಂಶಗಳು
- ಆರ್‌ಬಿಐ ನಿಗದಿ ಮಾಡಿರುವ ಶೇ 6ಕ್ಕಿಂತಲೂ ಕೆಳಮಟ್ಟದಲ್ಲಿ ಸಿಪಿಐ
- ಆಹಾರ ವಸ್ತುಗಳ ಬೆಲೆ ನವೆಂಬರ್‌ನಲ್ಲಿ ಶೇ 1.87ರಷ್ಟು ಹೆಚ್ಚಳ

ಉತ್ಪಾದನೆಯಲ್ಲಿ ಬಳಸುವ ವಸ್ತುಗಳ ಬೆಲೆ ಹೆಚ್ಚಳದ ಕಾರಣದಿಂದಾಗಿ ಹಲವು ವಲಯಗಳಲ್ಲಿನ ಉತ್ಪಾದಕರು ಬೆಲೆ ಏರಿಕೆ ಮಾಡಿದ್ದಾರೆ. ನವೆಂಬರ್ ತಿಂಗಳ ಚಿಲ್ಲರೆ ಹಣದುಬ್ಬರ ದರವು ನಿರೀಕ್ಷಿತ ಮಟ್ಟಕ್ಕಿಂತ ತುಸು ಹೆಚ್ಚಾಗಿರುವುದಕ್ಕೆ ಕಾರಣ ಇದು ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಗ್ರಾಹಕರ ಬೆಲೆ ಸೂಚ್ಯಂಕದಲ್ಲಿ ಸರಿಸುಮಾರು ಅರ್ಧದಷ್ಟು ಪಾಲು ಹೊಂದಿರುವ ಆಹಾರ ವಸ್ತುಗಳ ಬೆಲೆಯು ನವೆಂಬರ್ ತಿಂಗಳಿನಲ್ಲಿ ಶೇಕಡ 1.87ರಷ್ಟು ಹೆಚ್ಚಳ ಕಂಡಿದೆ. ಅಕ್ಟೋಬರ್ ತಿಂಗಳಿನಲ್ಲಿ ಇವುಗಳ ಬೆಲೆ ಹೆಚ್ಚಳವು ಶೇಕಡ 0.85ರಷ್ಟು ಇತ್ತು. ನವೆಂಬರ್‌ನಲ್ಲಿ ಅಡುಗೆ ಎಣ್ಣೆಗಳ ಬೆಲೆ ಹೆಚ್ಚಳ ಪ್ರಮಾಣವು ಸರಿಸುಮಾರು ಶೇಕಡ 30ರಷ್ಟು ಆಗಿದೆ.

'ಸದ್ಯದ ಪರಿಸ್ಥಿತಿಯಲ್ಲಿ ಬೆಲೆ ಹೆಚ್ಚಳದ ಸಾಧ್ಯತೆ ಇದ್ದೇ ಇದೆ. ಚಳಿಗಾಲ ಶುರುವಾದಾಗ ತರಕಾರಿಗಳ ಬೆಲೆಯು ತುಸು ತಗ್ಗಬಹುದು. ಹಣಕಾಸು ವರ್ಷದ ಇನ್ನುಳಿದ ಅವಧಿಯಲ್ಲಿ ಹಣದುಬ್ಬರ ಪ್ರಮಾಣವು ಹೆಚ್ಚಿನ ಮಟ್ಟದಲ್ಲಿಯೇ ಇರಬಹುದಾದ ಸಾಧ್ಯತೆ ಇದೆ. ಪ್ರಸಕ್ತ ಹಣಕಾಸು ವರ್ಷದ ನಾಲ್ಕನೆಯ ತ್ರೈಮಾಸಿಕದ ನಂತರದಲ್ಲಿ ಹಣದುಬ್ಬರ ದರವು ಕಡಿಮೆ ಆಗಬಹುದು' ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಹಿಂದಿನ ವಾರ ಹಣಕಾಸು ನೀತಿ ಸಮಿತಿಯ ಸಭೆಯಲ್ಲಿ ಹೇಳಿದ್ದರು.

ಕೊಬ್ಬರಿ ಧಾರಣೆ

ಕೆ.ಆರ್. ಪೇಟೆ	₹10180-10180
ತುಮಕೂರು	₹14800-16900
ತುರುವೇಕೆರೆ	₹17400-17500

ಸರ್ಕಾರಿ ಬ್ಯಾಂಕ್‌ಗಳಲ್ಲಿ 41 ಸಾವಿರ ಹುದ್ದೆಗಳು ಖಾಲಿ: ನಿರ್ಮಲಾ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ 12 ಬ್ಯಾಂಕ್‌ಗಳಲ್ಲಿ ಒಟ್ಟು 41,177 ಹುದ್ದೆಗಳು ಖಾಲಿ ಇವೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಒಟ್ಟಾರೆ 8.05 ಲಕ್ಷ ಹುದ್ದೆಗಳು ಮಂಜೂರಾಗಿದ್ದು ಅವುಗಳಲ್ಲಿ 41,177 (ಶೇಕಡ 5ರಷ್ಟು) ಹುದ್ದೆಗಳು ಖಾಲಿ ಇವೆ. ಇದರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿಯೇ (ಎಸ್‌ಬಿಐ) ಗರಿಷ್ಠ 8,544 ಹುದ್ದೆಗಳು ಖಾಲಿ ಇವೆ ಎಂದು ಅವರು ಲೋಕಸಭೆಗೆ ಮಾಹಿತಿ ನೀಡಿದ್ದಾರೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಸಿಬ್ಬಂದಿ ಕೊರತೆ ತೀವ್ರವಾಗಿದೆ. ಇದರಿಂದಾಗಿ, ಕರ್ತವ್ಯದಲ್ಲಿ ಇರುವ ಸಿಬ್ಬಂದಿಗೆ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎನ್ನುವುದು ಸರ್ಕಾರಕ್ಕೆ ತಿಳಿದಿದೆಯೇ ಎನ್ನುವ ಪ್ರಶ್ನೆಗೆ ನಿರ್ಮಲಾ ಅವರು ಈ ಉತ್ತರ ನೀಡಿದ್ದಾರೆ.



ನಿರ್ಮಲಾ

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ನೀಡಿರುವ ಮಾಹಿತಿ ಪ್ರಕಾರ, ಮಂಜೂರು ಮಾಡಿರುವ ಒಟ್ಟಾರೆ ಹುದ್ದೆಗಳಲ್ಲಿ ಈ ವರ್ಷದ ಡಿಸೆಂಬರ್ 1ರವರೆಗೆ ಶೇ 95ರಷ್ಟು ಸಿಬ್ಬಂದಿ ಕರ್ತವ್ಯದಲ್ಲಿದ್ದಾರೆ. ಸಿಬ್ಬಂದಿಯ ನಿವೃತ್ತಿ ಮತ್ತು ಇನ್ನಿತರ ಸಾಮಾನ್ಯ ಕಾರಣಗಳಿಂದಾಗಿ ಅಲ್ಪ ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಉಳಿದಿವೆ ಎಂದು ಅವರು ತಿಳಿಸಿದ್ದಾರೆ.

ಖಾಲಿ ಇರುವ ಹುದ್ದೆಗಳ ವಿವರ

ಎಸ್‌ಬಿಐ	8,544
ಪಂಜಾಬ್ ನ್ಯಾಷನಲ್ ಬ್ಯಾಂಕ್	6,743
ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ	6,295
ಇಂಡಿಯನ್ ಓವರ್‌ಸೀಸ್ ಬ್ಯಾಂಕ್	5,112
ಬ್ಯಾಂಕ್ ಆಫ್ ಇಂಡಿಯಾ	4,848


2016ರಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ಒಂದು ಹುದ್ದೆಯನ್ನು ರದ್ದುಪಡಿಸಲಾಗಿತ್ತು. ಅದನ್ನು ಹೊರತುಪಡಿಸಿದರೆ ಕಳೆದ ಆರು ವರ್ಷಗಳಲ್ಲಿ ಸರ್ಕಾರಿ ಸ್ವಾಮ್ಯದ ಯಾವುದೇ ಬ್ಯಾಂಕ್‌ನ ಯಾವುದೇ ಹುದ್ದೆಯನ್ನು ರದ್ದುಮಾಡಿಲ್ಲ ಎಂದು ಅವರು ಹೇಳಿದ್ದಾರೆ.

ಸುದ್ದಿ 2 ನಿಮಿಷ

503 ಅಂಶ ಕುಸಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್, ಎಚ್‌ಡಿಎಫ್‌ಸಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳ ಮಾರಾಟದ ಒತ್ತಡ ತೀವ್ರವಾಗಿದ್ದ ಕಾರಣ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಸೋಮವಾರದ ವಹಿವಾಟಿನಲ್ಲಿ 503 ಅಂಶ ಇಳಿಕೆ ಕಂಡಿತು.

ದಿನದ ಕೊನೆಯಲ್ಲಿ ಸೆನ್ಸೆಕ್ಸ್ 58,283 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 143 ಅಂಶ ಇಳಿಕೆಯಾಗಿ 17,368 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು.



ಬ್ರಿಟನ್ನಿನಲ್ಲಿ ಓಮೈಕ್ರಾನ್ ಪ್ರಕರಣಗಳು ತೀವ್ರವಾಗಿ ಹೆಚ್ಚುತ್ತಿರುವುದು ಜಾಗತಿಕ ಮಾರುಕಟ್ಟೆಗಳಲ್ಲಿ ಕಳವಳಕ್ಕೆ ಕಾರಣವಾಗಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದ್ದಾರೆ.

ವಿದೇಶಿ ಹೂಡಿಕೆದಾರರು ಭಾರತದ ಬಂಡವಾಳ ಮಾರುಕಟ್ಟೆಗಳಿಂದ ಹಣವನ್ನು ಹಿಂದಕ್ಕೆ ಪಡೆಯುತ್ತಿದ್ದಾರೆ (ನವೆಂಬರ್‌ನಲ್ಲಿ ₹ 33 ಸಾವಿರ ಕೋಟಿ, ಡಿಸೆಂಬರ್‌ನಲ್ಲಿ 10ನೆಯ ತಾರೀಕಿನವರೆಗೆ ₹ 17 ಸಾವಿರ ಕೋಟಿ). ಇದು ಮಾರುಕಟ್ಟೆಗಳ ಪಾಲಿಗೆ ಪ್ರಮುಖ ಸವಾಲಾಗಿದೆ ಎಂದು ವಿಜಯಕುಮಾರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 0.11ರಷ್ಟು ಹೆಚ್ಚಳ ಆಗಿದ್ದು ಪ್ರತಿ ಬ್ಯಾರೆಲ್‌ಗೆ 75.23 ಅಮೆರಿಕನ್ ಡಾಲರ್‌ಗೆ ತಲುಪಿದೆ.

ಸಾಲಪತ್ರ ಆಧಾರಿತ ಉಳಿತಾಯ ಯೋಜನೆ: ಎಎಂಎಫ್‌ಐ ಬೇಡಿಕೆ

ನವದೆಹಲಿ (ಪಿಟಿಐ): ಈಕ್ವಿಟಿ ಆಧಾರಿತ ಉಳಿತಾಯ ಯೋಜನೆ (ಇಎಲ್‌ಎಸ್‌ಎಸ್) ಮಾದರಿಯಲ್ಲಿಯೇ ಆದಾಯ ತೆರಿಗೆ ವಿನಾಯಿತಿ ಹೊಂದಿರುವ ಸಾಲಪತ್ರ ಆಧಾರಿತ ಉಳಿತಾಯ ಯೋಜನೆ (ಡಿಎಲ್‌ಎಸ್‌ಎಸ್) ಆರಂಭಿಸಲು ಅವಕಾಶ ನೀಡುವಂತೆ ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು (ಎಎಂಎಫ್‌ಐ) ಕೇಂದ್ರ ಸರ್ಕಾರವನ್ನು ಕೋರಿದೆ.

ಎಫ್‌.ಡಿ. ಮಾದರಿಯಲ್ಲಿ ಐದು ವರ್ಷಗಳ ಲಾಕ್‌ಇನ್ ಅವಧಿ ನೀಡಿ, 'ಡಿಎಲ್‌ಎಸ್‌ಎಸ್'ನಲ್ಲಿ ₹ 1.5 ಲಕ್ಷದವರೆಗಿನ ಹೂಡಿಕೆಗೆ ತೆರಿಗೆ ವಿನಾಯಿತಿ ನಿಡುವಂತೆಯೂ ಒಕ್ಕೂಟವು ಬೇಡಿಕೆ ಇಟ್ಟಿದೆ. ಸದ್ಯ, ಆದಾಯ ತೆರಿಗೆ ಕಾಯ್ದೆ ಸೆಕ್ಷನ್ 80ಸಿಸಿಸಿ ಅಡಿಯಲ್ಲಿ ಹಣಕಾಸು ವರ್ಷವೊಂದರಲ್ಲಿ ಇಎಲ್‌ಎಸ್‌ಎಸ್‌ನಲ್ಲಿ ಮಾಡುವ ₹ 1.5 ಲಕ್ಷದವರೆಗಿನ ಹೂಡಿಕೆಗೆ ತೆರಿಗೆ ವಿನಾಯಿತಿ ಇದೆ.

ಸಾಲಪತ್ರ ಆಧಾರಿತ ಮ್ಯೂಚುವಲ್ ಫಂಡ್ ಹಾಗೂ ಸಾಲಪತ್ರಗಳಲ್ಲಿ ನೇರ ಹೂಡಿಕೆ ಮೇಲಿನ ತೆರಿಗೆಯಲ್ಲಿ ಏಕರೂಪತೆ ತರುವಂತೆ ಹಣಕಾಸು ಸಚಿವಾಲಯಕ್ಕೆ ಕಳುಹಿಸಿರುವ ಬಜೆಟ್ ಪ್ರಸ್ತಾವನೆಯಲ್ಲಿ ಎಎಂಎಫ್‌ಐ ಒತ್ತಾಯಿಸಿದೆ. ಮ್ಯೂಚುವಲ್ ಫಂಡ್ ಮತ್ತು ಯುಲಿಪ್ ಮಧ್ಯೆ ತೆರಿಗೆ ಸಮಾನತೆ ತರುವಂತೆಯೂ ಅದು ಕೇಳಿದೆ.

'ಲಸಿಕೆ ಪ್ರಮಾಣ ಪತ್ರದಲ್ಲಿ ಮೋದಿ ಚಿತ್ರ ಇದ್ದರೆ ನಾಚಿಕೆ ಏಕೆ?'

ಕೊಚ್ಚಿ: ಕೋವಿಡ್ ಲಸಿಕೆ ಪಡೆದಿರುವ ಪ್ರಮಾಣಪತ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾವಚಿತ್ರ ಇರುವುದರಿಂದ ನಾಚಿಕೆಪಡುವಂತಹದು ಏನಿದೆ? ಎಂದು ಕೇರಳ ಹೈಕೋರ್ಟ್ ನ್ಯಾಯಮೂರ್ತಿ ಪಿ.ವಿ. ಕುಂಞಿಕೃಷ್ಣನ್ ಅವರು ಅರ್ಜಿದಾರರನ್ನು ಪ್ರಶ್ನಿಸಿದರು.

ಅರ್ಜಿದಾರ ಪೀಟರ್ ಮೈಯಲಿ ಪರಂಪಿಲ್ ಪರವಾಗಿ ವಾದಿಸಿದ ವಕೀಲ ಅಜಿತ್ ಜಾಯ್, ಬೇರೆ ಯಾವ ದೇಶದಲ್ಲೂ ಲಸಿಕೆ ಪ್ರಮಾಣಪತ್ರದಲ್ಲಿ ಪ್ರಧಾನಿಯ ಚಿತ್ರ ಹಾಕುವ ಪರಿಪಾಠವಿಲ್ಲ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಅವರು, 'ಮೋದಿ ನಮ್ಮ ದೇಶದ ಪ್ರಧಾನಿಯೇ ಹೊರತು ಬೇರೆ ದೇಶದ ಪ್ರಧಾನಿ ಅಲ್ಲ. ಜನಾದೇಶದ ಮೂಲಕ ಅಧಿಕಾರಕ್ಕೆ ಬಂದಿದ್ದಾರೆ. ರಾಜಕೀಯ ನಿಲುವುಗಳು ಬೇರೆ ಇರಬಹುದು. ಆದರೆ, ಅವರು ನಮ್ಮ ಪ್ರಧಾನಿ ಎಂಬ ವಿಚಾರ ಬದಲಾಗದು' ಎಂದರು.

ಇದಕ್ಕೆ ಉತ್ತರಿಸಿದ ವಕೀಲರು, 'ಪ್ರಮಾಣ ಪತ್ರ ಒಂದು ಖಾಸಗಿ ದಾಖಲೆ. ಅದರಲ್ಲಿ ವೈಯಕ್ತಿಕ ಮಾಹಿತಿಗಳು ಇರುತ್ತವೆ. ಹೀಗಾಗಿ ವ್ಯಕ್ತಿಯ ಖಾಸಗಿ ವಿಷಯದಲ್ಲಿ ತಲೆಹಾಕುವುದು ಸಮಂಜಸವಲ್ಲ. ಪ್ರಮಾಣಪತ್ರದಲ್ಲಿ ಪ್ರಧಾನಿ ಚಿತ್ರ ಇರುವುದು ಜನರ ಖಾಸಗಿ ವಿಷಯದಲ್ಲಿ ತಲೆಹಾಕಿದಂತೆ' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ, ದೇಶದ 100 ಕೋಟಿಗೂ ಹೆಚ್ಚು ಜನರಿಗೆ ಪ್ರಧಾನಿ ಚಿತ್ರದಿಂದ ಸಮಸ್ಯೆ ಆಗಿಲ್ಲ. ನಿಮಗೆ ಮಾತ್ರ ಏಕೆ ಸಮಸ್ಯೆ ಆಗಿದೆ ಎಂದರು. ಈ ಅರ್ಜಿ ಮಹತ್ವ ಹೊಂದಿದೆಯೇ ಎಂದು ಪರಿಶೀಲಿಸಲಾಗುವುದು. ಮಹತ್ವ ಹೊಂದಿಲ್ಲ ಎಂದು ತಿಳಿದುಬಂದರೆ ಅರ್ಜಿಯನ್ನು ವಜಾಗೊಳಿಸಲಾಗುವುದು ಎಂದರು.

ಪ್ರಧಾನಿಗೆ ಗೌರವ ನೀಡುವುದು, ಬಿಡುವುದು ವೈಯಕ್ತಿಕ ಆಯ್ಕೆ. ಸಾರ್ವಜನಿಕರ ಹಣ ಬಳಸಿ ಜಾಹೀರಾತು ನೀಡಲು ಮತ್ತು ಅಭಿಯಾನ ನಡೆಸಲು ಸುಪ್ರೀಂ ಕೋರ್ಟ್ ಮಾರ್ಗಸೂಚಿ ನೀಡಿದೆ. ಪ್ರಮಾಣ ಪತ್ರದಲ್ಲಿ ಪ್ರಧಾನಿ ಚಿತ್ರವಿದ್ದರೆ ಅದು ಮತದಾರರ ಮೇಲೆ ಪ್ರಭಾವ ಬೀರುತ್ತದೆ ಎಂದು ವಕೀಲರು ಹೇಳಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	520
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-43500
ಹಳತು	46000-52500
ಚಿತ್ರದುರ್ಗ	
ಆಪಿ	46729-47169
ಬೆಟ್ಟೆ	39819-40299
ಕೆಂಪುಗೋಟು	31609-32010
ರಾಶಿ	46239-46689
ಕಾರ್ಕಳ	
ಹೊಸತು	38000-43500
ಹಳತು	46000-52500
ಕುಮಟ	
ಚಿಪ್ಪು	25809-41019
ಕೋಕ	21099-36019
ಫ್ಯಾಕ್ಟರಿ	13019-18800
ಹಳೆಚಾಲಿ	47019-50799
ಹೊಸಚಾಲಿ	38509-42599
ಸಿದ್ದಾಪುರ	
ಬಿಳಿಗೋಟು	35099-41208
ಚಾಲಿ	46689-50599
ಕೋಕ	22099-37099
ಹೊಸಚಾಲಿ	33699-40389
ಕೆಂಪುಗೋಟು	21099-26899
ರಾಶಿ	45689-48599
ತಟ್ಟಿಬೆಟ್ಟೆ	32899-44289
ಯಲ್ಲಾಪುರ	
ಬಿಳಿಗೋಟು	31529-41629
ಚಾಲಿ	44669-50670
ಕೋಕ	22601-33109
ಕೆಂಪುಗೋಟು	30899-34146
ರಾಶಿ	46490-52969
ತಟ್ಟಿಬೆಟ್ಟೆ	37899-45069
ರಾಮನಗರ ರೇಷ್ಮೆ	
ಮಿಶ್ರತಳಿ	350-645
ದ್ವಿತಳಿ	350-820

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15000	15000	15100	232.60ಸೆಂಟ್ಸ್
ಎಸಿ	6600	6300	6350	
ಆರ್‌ಪಿ	6200	---	---	ಲಂಡನ್
ಆರ್‌ಸಿ	3770	3700	---	2376 ಡಾಲರ್ಸ್

ಸಾಮಾಜಿಕ ಭದ್ರತೆ: ಕೇಂದ್ರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಆ್ಯಪ್ ಆಧಾರಿತ ಸೇವೆ ಒದಗಿಸುವ ಓಲಾ, ಉಬರ್, ಜೊಮ್ಯಾಟೊ, ಸ್ವಿಗ್ಗಿ ಕಂಪನಿಗಳ ನೌಕರರಿಗೆ ಸಾಮಾಜಿಕ ಭದ್ರತೆ ಒದಗಿಸುವ ಕುರಿತ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ದಾಖಲಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಕಂಪನಿಗಳ ನೌಕರರ ಒಕ್ಕೂಟವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲರಾದ ಇಂದಿರಾ ಜೈಸಿಂಗ್, ಗಾಯತ್ರಿ ಸಿಂಗ್, ಪ್ರಸ್ತುತ ನೌಕರರಿಗೆ ಯಾವುದೇ ರೀತಿಯ ಸಾಮಾಜಿಕ ಭದ್ರತೆ ಇಲ್ಲವಾಗಿದೆ ಎಂದು ಕೋರ್ಟ್ ಗಮನಕ್ಕೆ ತಂದರು. ಕೇಂದ್ರ ಮತ್ತು ಅರ್ಜಿಯಲ್ಲಿ ಉಲ್ಲೇಖಿಸಿದ್ದ ಇತರೆ ಸಂಸ್ಥೆಗಳಿಗೆ ಕೋರ್ಟ್ ನೋಟಿಸ್ ಜಾರಿ ಮಾಡಿತು.

ಮುಂಬೈ ಧಾರಣೆ

ಶೇಂಗಾ

13-12-2021

ಜಾವಾ 70/80(ಹೊಸ)	10700-10750
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	8600-8700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1310)
ಒಂದು ವಾರದ ಡೆಲಿವರಿ	1315 (1305)
ಸೋಯಾ ಕಚ್ಚಾ	1157 (1160)
ಪಾಮ್ ವಾರದ ಡೆಲಿವರಿ	1173 (1174)
ಸೂರ್ಯಕಾಂತಿ ಎಣ್ಣೆ ಕಚ್ಚಾ	1190 (1190)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,900 (47,875)
ಬೆಳ್ಳಿ ಕೆ.ಜಿ	61,000 (60,700)

ಆವರಣದಲ್ಲಿ ಶನಿವಾರದ ಧಾರಣೆ

'ಐಪಿಒ'ದಲ್ಲಿ ಹೂಡಿಕೆ ಮಾಡುವುದು ಹೇಗೆ?

ಷೇರು ಮಾತು
ಶರತ್ ಎಂ.ಎಸ್.



ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಹೂಡಿಕೆ ಮಾಡುವ ಮುನ್ನ ಯಾವೆಲ್ಲ ವಿಚಾರಗಳನ್ನು ಗಮನಿಸಬೇಕು ಎನ್ನುವುದನ್ನು ಹಿಂದೊಮ್ಮೆ ಇದೇ ಅಂಕಣದಲ್ಲಿ ಪ್ರಸ್ತಾಪಿಸಲಾಗಿತ್ತು. ಈಗ, ಐಪಿಒಗಳಲ್ಲಿ ಹೂಡಿಕೆ ಮಾಡುವ ಪ್ರಕ್ರಿಯೆಯ ಬಗ್ಗೆ ಒಂದಿಷ್ಟು ಕಲಿಯೋಣ.

1 **ಯಾವ ಕಂಪನಿಯಲ್ಲಿ ಹೂಡಿಕೆ ಮಾಡಬೇಕು ತೀರ್ಮಾನಿಸಿ:** ಮೊದಲು ನೀವು ಯಾವ ಕಂಪನಿಯ ಐಪಿಒದಲ್ಲಿ ಹೂಡಿಕೆ ಮಾಡಬೇಕು ಎಂದು ತೀರ್ಮಾನಿಸಿ. ಕಂಪನಿಯ ಹಿನ್ನೆಲೆ, ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ, ಯಾವ ಉದ್ದೇಶಕ್ಕೆ ಐಪಿಒ ನಡೆಯುತ್ತಿದೆ, ಭವಿಷ್ಯದಲ್ಲಿ ಕಂಪನಿ ಹೇಗೆ ಬೆಳವಣಿಗೆ ಸಾಧಿಸಬಹುದು, ಕಂಪನಿಯ ಮೌಲ್ಯಮಾಪನ ಸರಿಯಾದ ರೀತಿಯಲ್ಲಿ ಆಗಿದೆಯಾ, ಕಂಪನಿಯ ಮುಂದಿನ ಯೋಜನೆಗಳೇನು ಎನ್ನುವುದನ್ನು ಅರಿತು ಮುಂದಿನ ತೀರ್ಮಾನ ಕೈಗೊಳ್ಳಿ.

2 **ಐಪಿಒ ಹೂಡಿಕೆಗೆ ಹಣ ಹೊಂದಿಸುವುದು:** ಯಾವ ಐಪಿಒದಲ್ಲಿ ಹೂಡಿಕೆ ಮಾಡಬೇಕು ಎಂದು ತೀರ್ಮಾನಿಸಿದ ಬಳಿಕ, ಎಷ್ಟು ಹಣ ಬೇಕಾಗುತ್ತದೆ ಎನ್ನುವುದನ್ನು ಅಂದಾಜು ಮಾಡಿಕೊಳ್ಳಿ. ನಿಮ್ಮ ಉಳಿತಾಯದ ಹಣ ಬಳಸಿ ಐಪಿಒಗಳಲ್ಲಿ ಹೂಡಿಕೆ ಮಾಡುವುದು ಸೂಕ್ತ. ಸಾಲ ಮಾಡಿ ಐಪಿಒ ಹೂಡಿಕೆ ಮಾಡುವುದು ಸರಿಯಲ್ಲ.

3 **ಡಿ-ಮ್ಯಾಟ್, ಟ್ರೇಡಿಂಗ್ ಖಾತೆ ಆರಂಭಿಸಿ:** ಡಿ-ಮ್ಯಾಟ್ ಖಾತೆ ಇಲ್ಲದೆ ಐಪಿಒ ಹೂಡಿಕೆ ಸಾಧ್ಯವಿಲ್ಲ. ಬ್ಯಾಂಕ್‌ಗಳು ಅಥವಾ ವಿಶ್ವಾಸಾರ್ಹ ಆನ್‌ಲೈನ್ ಆ್ಯಪ್‌ಗಳ ಮೂಲಕ ಡಿ-ಮ್ಯಾಟ್ ಖಾತೆ ತೆರೆಯಬಹುದು. ಇದಕ್ಕೆ ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್ ಸೇರಿ ಕೆಲವು ದಾಖಲೆಗಳು ಬೇಕಾಗುತ್ತವೆ. ಡಿ-ಮ್ಯಾಟ್ ಖಾತೆ ನಿಮ್ಮ ಹೂಡಿಕೆ ವಿವರಗಳು ಮತ್ತು ದಾಖಲೆಗಳನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಹೊಂದಿರುತ್ತದೆ.

4 **ಅರ್ಜಿಯ ಪ್ರಕ್ರಿಯೆ:** ಹೂಡಿಕೆದಾರ ಬ್ಯಾಂಕ್ ಖಾತೆ ಅಥವಾ ಟ್ರೇಡಿಂಗ್ ಖಾತೆ ಮೂಲಕ ಐಪಿಒಗೆ ಅರ್ಜಿ ಸಲ್ಲಿಸಬಹುದು. ಕೆಲ ವಿಶ್ವಾಸಾರ್ಹ ಆ್ಯಪ್‌ಗಳ ಮೂಲಕವೂ ನೀವು ಐಪಿಒಗೆ ಬಿಡ್ ಮಾಡಬಹುದು. ಐಪಿಒ ಹೂಡಿಕೆಗೆ ಮತ್ತೊಂದು ಅಗತ್ಯ ಎಎಸ್‌ಬಿಎ (ASBA) ವ್ಯವಸ್ಥೆ. ಎಎಸ್‌ಬಿಎ ವಿಸ್ತೃತ ರೂಪ ಅಪ್ಲಿಕೇಷನ್ ಸಪೋರ್ಟೆಡ್ ಬೈ ಬ್ಲಾಕ್ಡ್ ಫೆಸಿಲಿಟಿ. ಈ ವ್ಯವಸ್ಥೆ ಇದ್ದಾಗ ಐಪಿಒಗೆ ಬಿಡ್ ಮಾಡಿರುವ ಮೊತ್ತವನ್ನು ನಿಮ್ಮ ಬ್ಯಾಂಕ್ ಖಾತೆಯಲ್ಲಿ ಕಾಯ್ದಿರಿಸಲು ಸಾಧ್ಯವಾಗುತ್ತದೆ. ಯುಪಿಐ ಮ್ಯಾಂಡೇಟ್ ಮೂಲಕವೂ ಐಪಿಒ ಹೂಡಿಕೆ ಬಿಡ್ಡಿಂಗ್ ಹಣ ಮೀಸಲಿರಿಸಲು ಸಾಧ್ಯ.

5 **ಬಿಡ್ಡಿಂಗ್:** ಹೂಡಿಕೆದಾರ ಈ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಂಡ ನಂತರ ಬಿಡ್ಡಿಂಗ್‌ಗೆ ಸಜ್ಜಾಗಬೇಕು. ನಿಗದಿತ ಲಾಟ್ ಸೈಜ್‌ಗೆ (ಹೂಡಿಕೆದಾರ ಖರೀದಿಸಬೇಕಿರುವ ಕನಿಷ್ಠ ಸಂಖ್ಯೆಯ ಷೇರುಗಳು), ನಿಗದಿತ ದರಕ್ಕೆ ಅನುಗುಣವಾಗಿ ನೀವು ಬಿಡ್ಡಿಂಗ್ ಮಾಡಬೇಕಾಗುತ್ತದೆ. ಅಂದಾಜು ಮಾಡಿದ್ದಕ್ಕಿಂದ ಹೆಚ್ಚು ಮಂದಿ ಐಪಿಒದಲ್ಲಿ ಹೂಡಿಕೆಗೆ ಮುಂದಾದರೆ ಕೆಲವು ಸಂದರ್ಭಗಳಲ್ಲಿ ಷೇರುಗಳು ಸಿಗುವುದಿಲ್ಲ. ಈ ವೇಳೆ ಎಎಸ್‌ಬಿಎ ಅಡಿ ಐಪಿಒ ಖರೀದಿಗಾಗಿ ಕಾಯ್ದಿರಿಸಿದ್ದ ಹಣವನ್ನು ಬ್ಯಾಂಕ್ ಗ್ರಾಹಕನಿಗೆ ಹಿಂದಿರುಗಿಸುತ್ತದೆ. ಐಪಿಒ ಅಡಿ ನಿಮಗೆ ಷೇರುಗಳು ಸಿಕ್ಕಿವೆ ಎಂದಾದರೆ ನಿಗದಿತ ಮೊತ್ತ ಬ್ಯಾಂಕ್ ಖಾತೆಯಿಂದ ಕಡಿತಗೊಂಡು ಐಪಿಒ ಪ್ರಕ್ರಿಯೆ ಆದ ಆರು ದಿನಗಳಲ್ಲಿ ಐಪಿಒ ಹಂಚಿಕೆ ದೃಢೀಕರಣ ಪತ್ರ (Confirmatory Allotment Note) ಲಭ್ಯವಾಗುತ್ತದೆ. ನಂತರದಲ್ಲಿ ಷೇರುಗಳು ಹಂಚಿಕೆಯಾಗಿ ಡಿ-ಮ್ಯಾಟ್ ಖಾತೆಗೆ ವರ್ಗಾವಣೆಯಾಗುತ್ತವೆ.



ಪ್ರಧಾನಿ ನರೇಂದ್ರ ಮೋದಿ ಅವರು ಕಾರ್ಮಿಕರಿಗೆ ಹೂಮಳೆಗರೆದರು ಪಿಟಿಐ ಚಿತ್ರ



ಕಾಶಿ ವಿಶ್ವನಾಥ ಧಾಮ ಉದ್ಘಾಟನೆಗೆ ದೇಶದ ವಿವಿಧ ಭಾಗಗಳಿಂದ ಬಂದಿದ್ದ ಸಂತರು– ಪಿಟಿಐ ಚಿತ್ರ

ಅಧ್ಯಾತ್ಮ ಪ್ರಜ್ಞೆಗೆ ಚೈತನ್ಯ ತುಂಬಿದ ಕಾಶಿ: ವಿಶ್ವನಾಥ ಧಾಮ ಉದ್ಘಾಟನೆ ಬಳಿಕ ಪ್ರಧಾನಿ ಪ್ರತಿಪಾದನೆ

ಕಾರ್ಮಿಕರಿಗೆ ಹೂಮಳೆಗರೆದ ಮೋದಿ

ವಾರಾಣಸಿ (ಪಿಟಿಐ): ಕಾಶಿ ವಿಶ್ವನಾಥ ಕಾರಿಡಾರ್ ಯೋಜನೆಯ ಕಾಮಗಾರಿಯಲ್ಲಿ ಭಾಗಿಯಾಗಿದ್ದ ಕಾರ್ಮಿಕರ ಗುಂಪಿನ ಮೇಲೆ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಹೂಮಳೆಗರೆದರು. ಹೊಸದಾಗಿ ನಿರ್ಮಿಸಲಾದ ಸಂಕೀರ್ಣದಲ್ಲಿ, ಕಾರ್ಮಿಕ ಜತೆಯಲ್ಲಿಯೇ ಮೋದಿ ಅವರು ಊಟ ಮಾಡಿದರು.

ದೇಶದ ವಿವಿಧ ಭಾಗಗಳ ಕಾರ್ಮಿಕರು, ಎಂಜಿನಿಯರ್‌ಗಳು, ಕುಶಲಕರ್ಮಿಗಳು ಕಾರಿಡಾರ್ ನಿರ್ಮಾಣದಲ್ಲಿ ಭಾಗಿಯಾಗಿದ್ದಾರೆ. ಪ್ರಾಚೀನ ದೇವಾಲಯ ಪ್ರದೇಶದ ಇಡೀ ಪ್ರದೇಶಕ್ಕೆ ಕಾಶಿ ವಿಶ್ವನಾಥ ಧಾಮ ಎಂದು ಹೆಸರು ಇರಿಸಲಾಗಿದೆ.

ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಬಳಿಕ ಮೋದಿ ಅವರು ದೇವಾಲಯದ ಗ್ಯಾಲರಿಯ ತಾರಸಿಯ ಮೇಲೆ ಕಾರ್ಮಿಕರ ಗುಂಪನ್ನು ಭೇಟಿಯಾದರು. ಕೈಯಲ್ಲಿ ಹೂವಿನ ಬುಟ್ಟಿ ಹಿಡಿದು ಕಾರ್ಮಿಕರ ಜತೆಗೆ ಅವರು ಹೆಜ್ಜೆ ಹಾಕಿದರು. ನಿರ್ಮಾಣ ಕಾಮಗಾರಿಯ ಸಂದರ್ಭದಲ್ಲಿ ಧರಿಸುವ ಜಾಕೆಟ್ ಧರಿಸಿದ್ದ ಕಾರ್ಮಿಕರು ಚಪ್ಪಾಳೆ ತಟ್ಟಿ, ಮೋದಿ ಅವರಿಗೆ ಕೈಮುಗಿದರು. ಗ್ಯಾಲರಿಯಲ್ಲಿ ಹಾಸಿದ ಕೆಂಪು ಹಾಸಿನ ಮೇಲೆ ಕಾರ್ಮಿಕರ ಜತೆಯೇ ಪ್ರಧಾನಿ ಕುಳಿತರು. ಕೈ ಸನ್ನೆ ಮಾಡಿ 'ಇನ್ನೂ ಹತ್ತಿರ ಬರುವಂತೆ ಸೂಚಿಸಿದರು. ಅವರ ಜತೆ ಫೋಟೊ ತೆಗೆಸಿಕೊಂಡರು.

ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಬೃಹತ್ ಚಿತ್ರಗಳಿರುವ ಬ್ಯಾನರ್ ಹಿನ್ನೆಲೆಯಲ್ಲಿ ಇತ್ತು. 'ಕನಸಿನ ಕಾಶಿ'ಯನ್ನು ನನಸು ಮಾಡಿದ್ದಕ್ಕಾಗಿ ಪ್ರಧಾನಿಗೆ ಕೃತಜ್ಞತೆ ಸಲ್ಲಿಸಲು ಈ ಬ್ಯಾನರ್ ಅಳವಡಿಸಲಾಗಿತ್ತು.

ಕಾಶಿಯು ಮೊದಲಿನಿಂದಲೂ 'ಅಧ್ಯಾತ್ಮ ಪ್ರಜ್ಞೆಯ ಕೇಂದ್ರ'ವಾಗಿತ್ತು. ಈಗ, ಹೊಸ ಭವ್ಯ ರೂಪದಲ್ಲಿ ಈ ಪ್ರಜ್ಞೆಗೆ ಚೈತನ್ಯ ತುಂಬಿದೆ' ಎಂದು ಉದ್ಘಾಟನೆಯ ಬಳಿಕ ಮೋದಿ ಹೇಳಿದರು. ಒಟ್ಟು 23 ಕಟ್ಟಡಗಳನ್ನು ಸೋಮವಾರ ಉದ್ಘಾಟಿಸಲಾಗಿದೆ. ಒಟ್ಟು ₹339 ಕೋಟಿ ವೆಚ್ಚದಲ್ಲಿ ಮೊದಲ ಹಂತ ಪೂರ್ಣಗೊಂಡಿದೆ.

ಕೋವಿಡ್ ಸಾಂಕ್ರಾಮಿದ ಸಂದರ್ಭದಲ್ಲಿಯೂ ಯೋಜನೆಯ ಕಾಮಗಾರಿಯು ನಿಗದಿತ ಅವಧಿಯಲ್ಲಿಯೇ ಪೂರ್ಣಗೊಂಡಿದೆ ಎಂದು ಪ್ರಧಾನಿ ಕಾರ್ಯಾಲಯವು ಭಾನುವಾರ ಹೇಳಿತ್ತು.

ಈಗ ಇರುವ ದೇವಾಲಯವನ್ನು ಮಹಾರಾಣಿ ಅಹಿಲ್ಯಾಬಾಯಿ ಹೋಲ್ಕರ್ ಅವರು 1780ರಲ್ಲಿ ನಿರ್ಮಿಸಿದ್ದರು. 19ನೇ ಶತಮಾನದಲ್ಲಿ ಮಹಾರಾಜ ರಂಜಿತ್ ಸಿಂಗ್ ಅವರು ದೇವಾಲಯಕ್ಕೆ ಚಿನ್ನದ ಗೋಪುರ ಅಳವಡಿಸಿದ್ದರು.

ಅಂತ್ಯ ಸಮೀಪಿಸಿದಾಗ ಕಾಶಿಗೆ ಬರುತ್ತಾರೆ: ಅಖಿಲೇಶ್

ಇಟಾವಾ (ಪಿಟಿಐ): ಅಂತ್ಯ ಸಮೀಪಿಸಿದಾಗ ಜನರು ಕಾಶಿಯಲ್ಲಿ ಬಂದು ಇರುತ್ತಾರೆ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಹೇಳಿದ್ದಾರೆ. ಕಾಶಿ ವಿಶ್ವನಾಥ ಧಾಮ ಯೋಜನೆಯ ಮೊದಲ ಹಂತಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ ದಿನವೇ ಅಖಿಲೇಶ್ ಈ ಹೇಳಿಕೆ ಕೊಟ್ಟಿದ್ದಾರೆ.

ಪ್ರಧಾನಿ ವಾರಾಣಸಿಗೆ ಬಂದಿದ್ದಾರೆ ಮತ್ತು ರಾಜ್ಯ ಸರ್ಕಾರವು ಒಂದಿಡೀ ತಿಂಗಳು ಕಾರ್ಯಕ್ರಮ ಹಮ್ಮಿಕೊಂಡ ಬಗ್ಗೆ ವಾರ್ತಾ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಅವರು ಹೀಗೆ ಪ್ರತಿಕ್ರಿಯೆ ನೀಡಿದ್ದಾರೆ.

'ಕೇವಲ ಒಂದು ತಿಂಗಳು ಏಕೆ? ಅವರು ಇಲ್ಲಿ ಎರಡು ಇಲ್ಲ ಮೂರು ತಿಂಗಳು ಇರಬೇಕು. ವಾಸ್ತವ್ಯಕ್ಕೆ ಇದು ಬಹಳ ಒಳ್ಳೆಯ ಸ್ಥಳ. ಅಂತ್ಯ ಸಮೀಪಿಸಿದಾಗ ಜನರು ಬನಾರಸ್‌ಗೆ ಬರುತ್ತಾರೆ' ಎಂದರು. ಹಿಂದೂ ನಂಬಿಕೆ ಪ್ರಕಾರ, ಜೀವನದ ಕೊನೆಯ ದಿನಗಳನ್ನು ಕಾಶಿಯಲ್ಲಿ ಕಳೆಯುವುದು ಒಳ್ಳೆಯದು.

ಕೆಲವೇ ತಿಂಗಳಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲಾಗುವುದು ಎಂದು ಎಸ್‌ಪಿ ಹೇಳುತ್ತಿದೆ.

'ನಮ್ಮ ನಿಮ್ಮ ಮುಂದೆ ಸುಳ್ಳು ಹೇಳುವುದರಲ್ಲಿ ಅವರು ನಿಸ್ಸೀಮರು. ಆದರೆ, ದೇವರ ಮುಂದೆ ಸುಳ್ಳು ಹೇಳುವುದನ್ನು ಅವರು ಬಿಡಬೇಕು' ಎಂದು ಅಖಿಲೇಶ್ ಹೇಳಿದ್ದಾರೆ. ತಮ್ಮ ಅವಧಿಯಲ್ಲಿ ಆಗಿರುವ ಅಭಿವೃದ್ಧಿ ಕಾಮಗಾರಿಗಳ ಶ್ರೇಯ ಪಡೆಯಲು ಯತ್ನಿಸುವುದನ್ನು ಬಿಜೆಪಿ ಬಿಡಬೇಕು ಎಂದರು. ಕಾಶಿ ವಿಶ್ವನಾಥ ಕಾರಿಡಾರ್ ಯೋಜನೆಗೆ ತಾವು ಮುಖ್ಯಮಂತ್ರಿಯಾಗಿದ್ದಾಗ ಒಪ್ಪಿಗೆ ನೀಡಲಾಗಿತ್ತು. ಅದರ ದಾಖಲೆಗಳು ತಮ್ಮ ಬಳಿ ಇವೆ ಎಂದು ಅಖಿಲೇಶ್ ಭಾನುವಾರ ಹೇಳಿದ್ದರು. 2012–2017ರ ಅವಧಿಯಲ್ಲಿ ಸಮಾಜವಾದಿ ಪಕ್ಷ ಉತ್ತರ ಪ್ರದೇಶದಲ್ಲಿ ಅಧಿಕಾರದಲ್ಲಿತ್ತು. ಕಾಶಿ ವಿಶ್ವನಾಥ ದೇವಾಲಯ ಅಭಿವೃದ್ಧಿಯ ವಿಸ್ತೃತ ಯೋಜನಾ ಕರಡು ವರದಿಯನ್ನು 2015ರಲ್ಲೇ ಸಿದ್ಧಪಡಿಸಲಾಗಿತ್ತು.

ಗಾಂಧೀಜಿ ಕನಸು ನನಸು: ಯೋಗಿ

ಭವ್ಯವಾದ ಕಾಶಿ ವಿಶ್ವನಾಥ ಧಾಮದ ನಿರ್ಮಾಣದ ಮೂಲಕ ಮಹಾತ್ಮ ಗಾಂಧಿ ಅವರ ಕನಸನ್ನು ನನಸು ಮಾಡಲಾಗಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಿಂದಾಗಿ ಮಾತ್ರ ಇದು ಸಾಧ್ಯವಾಗಿದೆ ಎಂದರು.

ಕಾಶಿಯ ಕಿರಿದಾದ ಬೀದಿಗಳು ಮತ್ತು ಕೊಳಕನ್ನು ಕಂಡು ಮಹಾತ್ಮ ಗಾಂಧಿ ಅವರು ಸುಮಾರು ನೂರು ವರ್ಷಗಳ ಹಿಂದೆ ಬೇಸರ ವ್ಯಕ್ತಪಡಿಸಿದ್ದರು. ಇಂದು, ವಿಶ್ವನಾಥ ಧಾಮವು ಹೊಸ ರೂಪ ಪಡೆದಿದೆ. ಈ ಮೂಲಕ ಗಾಂಧೀಜಿ ಅವರು ನೋವು ಮರೆಯಾಗಿಸಲು ಸಾಧ್ಯವಾಗಿದೆ ಎಂದು ಯೋಗಿ ಹೇಳಿದರು. ಕೆಲವರು ಅಧಿಕಾರಕ್ಕೆ ಏರುವುದಕ್ಕಾಗಿ ಗಾಂಧೀಜಿಯ ಹೆಸರನ್ನು ಉಪಯೋಗಿಸುತ್ತಾ ಬಂದಿದ್ದಾರೆ. ಆದರೆ, ಭವ್ಯವಾದ ಕಾಶಿ ವಿಶ್ವನಾಥ ಧಾಮ ನಿರ್ಮಾಣದ ಗಾಂಧೀಜಿಯ ಕನಸು ಇದೇ ಮೊದಲ ಬಾರಿಗೆ ಈಡೇರಿದೆ ಎಂದರು.

ಗೊಗೊಯಿ ವಿರುದ್ಧ ಹಕ್ಕುಚ್ಯುತಿ ನೋಟಿಸ್



ನವದೆಹಲಿ: 'ರಾಜ್ಯಸಭೆಗೆ ಹೋಗಬೇಕು ಎಂದು ನನಗೆ ಅನ್ನಿಸಿದಾಗ, ನಾನು ಹೋಗುತ್ತೇನೆ' ಎಂದು ಹೇಳಿದ್ದ ರಾಜ್ಯಸಭಾ ಸದಸ್ಯ ಮತ್ತು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯಿ ವಿರುದ್ಧ ರಾಜ್ಯಸಭೆಯಲ್ಲಿ ಕಾಂಗ್ರೆಸ್ ಮತ್ತು ಟಿಎಂಸಿ ಸಂಸದರು ಗೊಗೊಯಿ ಹಕ್ಕುಚ್ಯುತಿ ನೋಟಿಸ್ ಸಲ್ಲಿಸಿದ್ದಾರೆ. 'ಗೊಗೊಯಿ ಅವರ ಹೇಳಿಕೆಯು ರಾಜ್ಯಸಭೆಯ ಘನತೆಗೆ ಧಕ್ಕೆ ತಂದಿದೆ' ಎಂದು ನೋಟಿಸ್‌ನಲ್ಲಿ ವಿವರಿಸಲಾಗಿದೆ.

ಟಿಎಂಸಿಯ ಮೌಸಮ್ ನೂರ್ ಮತ್ತು ಜವಾಹರ್ ಸರ್ಕಾರ್, ಕಾಂಗ್ರೆಸ್‌ನ ಹಲವು ಸದಸ್ಯರು ನೋಟಿಸ್ ನೀಡಿದ್ದಾರೆ. ಮೌಸಮ್ ನೂರ್ ಅವರು ಗೊಗೊಯಿ ವಿರುದ್ಧ ರಾಜ್ಯಸಭೆಯ ನೈತಿಕ ಸಮಿತಿಗೂ ಪತ್ರ ಬರೆದಿದ್ದಾರೆ.

ರಂಜನ್ ಗೊಗೊಯಿ ಅವರು ತಾವು ರಚಿಸಿರುವ 'ಜಸ್ಟೀಸ್ ಫಾರ್ ಜಡ್ಜ್' ಪುಸ್ತಕದ ಪ್ರಚಾರದ ಸಲುವಾಗಿ ಎನ್‌ಡಿ ಟಿ.ವಿ.ಗೆ ಈಚೆಗೆ ಸಂದರ್ಶನ ನೀಡಿದ್ದರು. 2020ರ ಮಾರ್ಚ್‌ನಲ್ಲಿ ಗೊಗೊಯಿ ಅವರನ್ನು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡಲಾಗಿತ್ತು. ಅಂದಿನಿಂದ ರಾಜ್ಯಸಭೆಯಲ್ಲಿ ಅವರ ಹಾಜರಾತಿ ಪ್ರಮಾಣ ಶೇ 10ಕ್ಕಿಂತಲೂ ಕಡಿಮೆ ಇದೆ. ಹಾಜರಾತಿ ಕಡಿಮೆ ಇರುವ ಬಗ್ಗೆ ಸಂದರ್ಶನದಲ್ಲಿ ಪ್ರಶ್ನಿಸಲಾಗಿತ್ತು.

ಆಗ ಅವರು, 'ರಾಜ್ಯಸಭೆಗೆ ಹೋಗಬೇಕು ಎಂದು ನನಗೆ ಅನ್ನಿಸಿದಾಗ ಮತ್ತು ನಾನು ಮಾತನಾಡಬೇಕಾದ ಮಹತ್ವದ ವಿಚಾರಗಳು ಇವೆ ಅನ್ನಿಸಿದಾಗ, ನಾನು ಹೋಗುತ್ತೇನೆ. ನಾನು ನಾಮನಿರ್ದೇಶಿತ ಸದಸ್ಯ, ಯಾವುದೇ ಪಕ್ಷದ ಸಚೇತಕ ಉಸ್ತುವಾರಿಯಲ್ಲಿಲ್ಲ. ಕರೆ ಬಂದಾಗಲೆಲ್ಲಾ ಅವರು ಹಾಜರಾಗಬೇಕು. ಆದರೆ ಅದು ನನಗೆ ಅನ್ವಯವಾಗುವುದಿಲ್ಲ. ರಾಜ್ಯಸಭೆಗೆ ಹೋಗುವುದೂ ನನ್ನ ಆಯ್ಕೆ, ಹೊರಗೆ ಬರುವುದೂ ನನ್ನದೇ ಆಯ್ಕೆ. ನಾನು ಸದನದ ಸ್ವತಂತ್ರ ಸದಸ್ಯ' ಎಂದು ಅವರು ಹೇಳಿದ್ದರು.

'ಕೋವಿಡ್‌ನ ಕಾರಣದಿಂದ ರಾಜ್ಯಸಭೆಗೆ ಬರಲು ಸಾಧ್ಯವಿಲ್ಲ ಎಂದು ಹಲವು ಬಾರಿ ಪತ್ರ ನೀಡಿದ್ದೇನೆ. ರಾಜ್ಯಸಭೆಗೆ ಪ್ರವೇಶಿಸಲು ಆರ್‌ಟಿ-ಪಿಸಿಆರ್ ಫಲಿತಾಂಶದ ಪ್ರಮಾಣಪತ್ರ ನೀಡಬೇಕಿತ್ತು. ಅದು ನನಗೆ ಹಿತಕರವೆನಿಸುತ್ತಿರಲಿಲ್ಲ. ಸದನದಲ್ಲಿ ಕುಳಿತುಕೊಳ್ಳಲು ಮಾಡಿದ್ದ ವ್ಯವಸ್ಥೆಯೂ ಹಿತಕರವಾಗಿರಲಿಲ್ಲ. ಅಂತರ ಕಾಯ್ದುಕೊಳ್ಳುವುದನ್ನು ಸದನದ ಒಳಗೆ ಪಾಲಿಸುತ್ತಿರಲಿಲ್ಲ' ಎಂದು ಅವರು ಹೇಳಿದ್ದರು.

ಸೋಮವಾರ ಅವರು ಸದನಕ್ಕೆ ಹಾಜರಾಗಿದ್ದರು. ಸೋಮವಾರದ ಹಾಜರಿಯೂ ಸೇರಿ ಅವರು ಈವರೆಗೆ ಏಳು ಬಾರಿ ಮಾತ್ರ ಸದನದಲ್ಲಿ ಹಾಜರಾಗಿದ್ದಾರೆ.

ಸೋತ ನಂತರ ಎಂಜಲು ನೆಕ್ಕುವಂತೆ ಹೇಳಿದ್ದ ಅಭ್ಯರ್ಥಿ ಸೆರೆ

ಔರಂಗಾಬಾದ್ (ಪಿಟಿಐ): ಪಂಚಾಯಿತಿ ಚುನಾವಣೆಯ ಸೋಲಿನ ನಂತರ ಪರಿಶಿಷ್ಟರ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಬಿಹಾರದಲ್ಲಿ ಅಭ್ಯರ್ಥಿಯೊಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದಕ್ಷಿಣ ಬಿಹಾರ ವ್ಯಾಪ್ತಿಯ ದುಮ್ರಿ ಪಂಚಾಯ್ತಿಯ ಮುಖ್ಯಸ್ಥನ ಸ್ಥಾನಕ್ಕೆ ಸ್ಪರ್ಧಿಸಿ ಸೋತಿದ್ದ ಬಲ್ವಂತ್ ಸಿಂಗ್ ಬಂಧಿತ. 'ನೆಲಕ್ಕೆ ಎಂಜಲು ಉಗುಳಿ, ಅದನ್ನು ನೆಕ್ಕುವಂತೆ ಕೆಲವರಿಗೆ ಆರೋಪಿಯು ಒತ್ತಡ ಹೇರಿದ್ದ ಹಾಗೂ ಜಾತಿಯನ್ನು ಉಲ್ಲೇಖಿಸಿ ನಿಂದನೆ ಮಾಡಿದ್ದ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿತ್ತು. ಇದನ್ನು ಆಧರಿಸಿ ಬಂಧಿಸಲಾಗಿದೆ ಎಂದು ಔರಂಗಾಬಾದ್ ಉಪ ವಿಭಾಗದ ಹೆಚ್ಚುವರಿ ಎಸ್‌ಪಿ ಶಿವಕುಮಾರ್ ರಾವ್ ಅವರು ತಿಳಿಸಿದರು.

ಬ್ರಿಟನ್: ಏಪ್ರಿಲ್ ಅಂತ್ಯಕ್ಕೆ ಓಮೈಕ್ರಾನ್‌ನ ತೀವ್ರತೆ – ಅಧ್ಯಯನ ವರದಿಯಲ್ಲಿ ಉಲ್ಲೇಖ


75 ಸಾವಿರ ಜನರ ಸಾವು ಸಾಧ್ಯತೆ

ಲಂಡನ್: ಕೊರೊನಾ ವೈರಸ್‌ನ ಓಮೈಕ್ರಾನ್ ತಳಿ ಸೋಂಕು ಪ್ರಸರಣಕ್ಕೆ ಕಠಿಣ ಕ್ರಮಗಳನ್ನು ಕೈಗೊಳ್ಳದೇ ಇದ್ದರೆ, ಈ ತಳಿಯು ಬ್ರಿಟನ್‌ನಲ್ಲಿ ಮುಂದಿನ ವರ್ಷ ಏಪ್ರಿಲ್ ವೇಳೆಗೆ 75 ಸಾವಿರ ಜನರ ಸಾವಿಗೆ ಕಾರಣವಾಗಬಹುದು ಎಂದು ಅಧ್ಯಯನವೊಂದು ಹೇಳಿದೆ.

ಲಂಡನ್ ಸ್ಕೂಲ್ ಆಫ್ ಹೈಗಿನ್ ಆ್ಯಂಡ್ ಟ್ರಾಪಿಕಲ್ ಮೆಡಿಸಿನ್‌ನ ಸಂಶೋಧಕರು ಈ ಕುರಿತು ಅಧ್ಯಯನ ನಡೆಸಿದ್ದಾರೆ. ಈ ವರ್ಷ ಜನವರಿಯಲ್ಲಿ ವರದಿಯಾಗಿದ್ದಕ್ಕಿಂತಲೂ ಹೆಚ್ಚು ಪ್ರಕರಣಗಳು ಕಂಡುಬರಬಹುದು ಹಾಗೂ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆಯೂ ಅಧಿಕವಾಗಿರಲಿದೆ ಎಂದು ಸಂಶೋಧಕರು ಆತಂಕ ವ್ಯಕ್ತಪಡಿಸಿದ್ದಾರೆ.

ವ್ಯಕ್ತಿಯ ದೇಹದಲ್ಲಿನ ಪ್ರತಿಕಾಯಗಳಿಂದ ತಪ್ಪಿಸಿಕೊಳ್ಳುವ ಗುಣವನ್ನು ಓಮೈಕ್ರಾನ್ ಹೊಂದಿದೆ. ಎಂದು ಸಂಶೋಧಕರು ಹೇಳಿದ್ದಾರೆ.

ಓಮೈಕ್ರಾನ್‌ನಿಂದ ವ್ಯಕ್ತಿ ಸಾವು



ಲಂಡನ್ (ಎಎಫ್‌ಪಿ): ಓಮೈಕ್ರಾನ್ ರೂಪಾಂತರ ತಳಿಯ ಸೋಂಕಿಗೆ ಒಳಗಾದವರ ಪೈಕಿ ಕನಿಷ್ಠ ಒಬ್ಬರು ಸಾವನ್ನಪ್ಪಿದ್ದಾರೆ ಎಂದು ಬ್ರಿಟನ್ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್ ಸೋಮವಾರ ಹೇಳಿದ್ದಾರೆ.

ದೇಶದಲ್ಲಿ ಈಗಾಗಲೇ ಕೋವಿಡ್ ರೂಪಾಂತರ ತಳಿಯ ವಿರುದ್ಧ ಹೋರಾಡುವ ಬೂಸ್ಟರ್ ಡೋಸ್ ನೀಡುವ ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ಈ ಡೋಸ್ ಪಡೆಯಲು ಸೋಮವಾರ ಎಲ್ಲಾ ಲಸಿಕೆ ಕೇಂದ್ರಗಳ ಮುಂದೆ ಜನರು ಸಾಲುಗಟ್ಟಿ ನಿಂತಿದ್ದರು.

ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಧಾನಿ ಜಾನ್ಸನ್ ಅವರು, 'ಓಮೈಕ್ರಾನ್ ಸೋಂಕಿನಿಂದ ಹಲವರು ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಕನಿಷ್ಠ ಒಬ್ಬರು ಮೃತಪಟ್ಟಿದ್ದಾರೆ. ಇದು ವಿಷಾದನೀಯ. ಜನರು ಸೋಂಕಿನ ಬಗ್ಗೆ ಎಚ್ಚರಿಕೆ ವಹಿಸಬೇಕು' ಎಂದರು.

ಈ ರೂಪಾಂತರ ತಳಿಯು ಹೆಚ್ಚಿನ ಸಂಖ್ಯೆಯಲ್ಲಿ ಪ್ರಸರಣಗೊಂಡು ಅಬ್ಬರದ ಅಲೆಯಾಗುವ ಸಾಧ್ಯತೆ ಇದೆ ಎಂದು ಭಾನುವಾರ ರಾತ್ರಿ ಜಾನ್ಸನ್ ಅವರು ಟೆಲಿವಿಷನ್‌ನಲ್ಲಿ ಮಾಡಿದ ಭಾಷಣದಲ್ಲಿ ಎಚ್ಚರಿಕೆ ನೀಡಿದ್ದರು. ಇಂಗ್ಲೆಂಡ್‌ನಲ್ಲಿ 10 ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ರೂಪಾಂತರ ತಳಿ ದಕ್ಷಿಣ ಆಫ್ರಿಕಾದಲ್ಲಿ ಮೊದಲು ಪತ್ತೆಯಾಗಿತ್ತು.

ಚೀನಾ: ಡೆಲ್ಟಾದ ಉಪತಳಿ 'ಎವೈ.4' ಪ್ರಕರಣಗಳು ವರದಿ

ಬೀಜಿಂಗ್ (ಪಿಟಿಐ): ಚೀನಾದ ಜೆಜಿಯಾಂಗ್ ಪ್ರಾಂತ್ಯದಲ್ಲಿ ಕೋವಿಡ್–19 ಪ್ರಕರಣಗಳಲ್ಲಿ ಹೆಚ್ಚಳ ಕಂಡುಬಂದಿದೆ. ಕೊರೊನಾ ವೈರಸ್ ರೂಪಾಂತರಿ ಡೆಲ್ಟಾದ ನೂತನ ಉಪತಳಿ 'ಎವೈ.4' ಈ ಸೋಂಕಿಗೆ ಕಾರಣ ಎಂದು ಪ್ರಾಂತ್ಯದ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಚೀನಾದಲ್ಲಿ ಈ ಹೊಸ ತಳಿಯ ಸೋಂಕಿನ ಪ್ರಕರಣಗಳು ಇದೇ ಮೊದಲ ಬಾರಿಗೆ ವರದಿಯಾಗಿವೆ. ಈ ಉಪತಳಿ ಸೋಂಕಿನ 138 ಪ್ರಕರಣಗಳು ವರದಿಯಾಗಿದ್ದು, ಈ ಹಿನ್ನೆಲೆಯಲ್ಲಿ, ಜಿಜಿಯಾಂಗ್ ಪ್ರಾಂತ್ಯದ ಜನರು ಪ್ರಯಾಣ ಕೈಗೊಳ್ಳುವುದನ್ನು ಸರ್ಕಾರ ನಿಷೇಧಿಸಿದೆ ಎಂದು ಸರ್ಕಾರಿ ಒಡೆತನದ ಸುದ್ದಿವಾಹಿನಿ ಸಿಜಿಟಿಎನ್–ಟಿವಿ ವರದಿ ಮಾಡಿದೆ.

'ಪ್ರಾಂತ್ಯದ ರಾಜಧಾನಿ ಹ್ಯಾಂಗ್‌ಜೌನಲ್ಲಿ 17 ಪ್ರಕರಣಗಳು, ನಿಂಗ್‌ಬೊ ಹಾಗೂ ಶಾವೊಜಿಂಗ್ ನಗರಗಳಲ್ಲಿ ಕ್ರಮವಾಗಿ 44 ಹಾಗೂ 77 ಪ್ರಕರಣಗಳು ವರದಿಯಾಗಿವೆ. ಈ ಸೋಂಕಿಗೆ ವೈರಸ್‌ನ ಡೆಲ್ಟಾ ತಳಿಯ ಉಪತಳಿಯಾದ 'ಎವೈ.4' ಕಾರಣ ಎಂಬುದು ಜಿನೋಮ್ ಸೀಕ್ವೆನ್ಸಿಂಗ್'ನಿಂದ ದೃಢಪಟ್ಟಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ದಕ್ಷಿಣ ಆಫ್ರಿಕಾ ಅಧ್ಯಕ್ಷರಿಗೆ ಕೋವಿಡ್

ಜೋಹಾನ್ಸ್‌ಬರ್ಗ್ (ಪಿಟಿಐ): ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ (69) ಅವರಿಗೆ ಭಾನುವಾರ ಕೋವಿಡ್ ದೃಢಪಟ್ಟಿದೆ ಎಂದು ಅಧ್ಯಕ್ಷರ ಕಚೇರಿ ಪ್ರಕಟಣೆ ತಿಳಿಸಿದೆ.

ದಕ್ಷಿಣ ಆಫ್ರಿಕಾದಲ್ಲಿ ಓಮೈಕ್ರಾನ್ ಪ್ರಕರಣ ಹೆಚ್ಚುತ್ತಿದ್ದು, ಎರಡೂ ಲಸಿಕೆ ಪಡೆದ ಬಳಿಕವೂ ಅಧ್ಯಕ್ಷರಿಗೆ ಕೋವಿಡ್ ಸೋಂಕು ದೃಢಪಟ್ಟಿದೆ. ಇದೇ ವೇಳೆ ದೇಶದಲ್ಲಿ 37,875 ಹೊಸ ಪ್ರಕರಣಗಳು ವರದಿಯಾಗಿದೆ. ಹಿಂದಿನ ದಿನ 17,154 ಹೊಸ ಪ್ರಕರಣಗಳು ವರದಿಯಾಗಿದ್ದು ಒಂದೇ ದಿನದಲ್ಲಿ ಭಾರಿ ಏರಿಕೆ ಕಂಡು ಬಂದಿದೆ.

ಸಿರಿಲ್ ಅವರಲ್ಲಿ ಸೌಮ್ಯ ರೋಗ ಲಕ್ಷಣಗಳು ಕಾಣಿಸಿಕೊಂಡಿವೆ. ಅವರು ಕೇಪ್ ಟೌನ್‌ನಲ್ಲಿ ಪ್ರತ್ಯೇಕ ವಾಸದಲ್ಲಿದ್ದಾರೆ. ಅವರ ಆರೋಗ್ಯದ ಬಗ್ಗೆ ದಕ್ಷಿಣ ಆಫ್ರಿಕಾದ ಮಿಲಿಟರಿ ಹೆಲ್ತ್ ಸರ್ವಿಸ್ ನಿಗಾ ವಹಿಸುತ್ತಿದೆ. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಮುಂದಿನ ವಾರದ ಎಲ್ಲ ಜವಾಬ್ದಾರಿಗಳನ್ನು ಉಪಾಧ್ಯಕ್ಷ ಡೇವಿಡ್ ಮಬುಜಾ ಅವರಿಗೆ ವಹಿಸಿಕೊಡಲಾಗಿದೆ.

ಕಳೆದ ವಾರ ರಾಮಫೋಸಾ, ಪಶ್ಚಿಮ ಆಫ್ರಿಕಾದ ನಾಲ್ಕು ದೇಶಗಳಿಗೆ ಭೇಟಿ ಕೊಟ್ಟಿದ್ದರು. ಪ್ರವಾಸದ ವೇಳೆ ನಿಯೋಗದಲ್ಲಿದ್ದ ಎಲ್ಲ ಸದಸ್ಯರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಈ ಪೈಕಿ ನೈಜೀರಿಯಾದಲ್ಲಿ ಕೋವಿಡ್ ದೃಢಪಟ್ಟ ಕೆಲವು ಸದಸ್ಯರು ತವರಿಗೆ ಮರಳಿದ್ದರು.

ಕರೀನಾ ಕಪೂರ್, ಅಮೃತಾ ಅರೋರಾಗೆ ಕೋವಿಡ್ ದೃಢ

ಮುಂಬೈ (ಪಿಟಿಐ): ಬಾಲಿವುಡ್ ನಟಿಯರಾದ ಕರೀನಾ ಕಪೂರ್ ಖಾನ್ ಮತ್ತು ಅಮೃತಾ ಅರೋರಾ ಅವರಿಗೆ ಕೋವಿಡ್ ಇರುವುದು ದೃಢಪಟ್ಟಿದೆ ಎಂದು ಬೃಹನ್ ಮುಂಬೈ ನಗರಪಾಲಿಕೆ ಮೂಲಗಳು ತಿಳಿಸಿವೆ. ಶನಿವಾರ ಪರೀಕ್ಷೆ ನಡೆಸಲಾಗಿತ್ತು. ಪಾಸಿಟಿವ್ ಇರುವುದು ದೃಢಪಟ್ಟಿದೆ. ಇಬ್ಬರೂ ಕ್ವಾರಂಟೈನ್‌ನಲ್ಲಿ ಇದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಟಿಯರ ಜೊತೆ ನೇರ ಸಂಪರ್ಕದಲ್ಲಿದ್ದವರನ್ನು ಪರೀಕ್ಷೆಗೆ ಒಳಪಡಿಸಲಾಗುವುದು. ನಟಿಯರು ಮಾರ್ಗಸೂಚಿ ಉಲ್ಲಂಘಿಸಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು ಎಂಬ ವರದಿಗಳ ಬಗ್ಗೆ ಪರಿಶೀಲಿಸಲಾಗುವುದು ಎಂದು ತಿಳಿಸಿದ್ದಾರೆ.

ಪೊಲೀಸ್ ಬಸ್ ಮೇಲೆ ಉಗ್ರರ ದಾಳಿ: 14 ಮಂದಿ ಗಾಯ

ಎಎಸ್‌ಐ ಸೇರಿ ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಶ್ರೀನಗರ: ಇಲ್ಲಿನ ಶ್ರೀನಗರ-ಜಮ್ಮು ರಾಷ್ಟ್ರೀಯ ಹೆದ್ದಾರಿಯ ಝೆವಾನ್ ಪ್ರದೇಶದ ಬಳಿ ಸೋಮವಾರ ಉಗ್ರರು ಪೊಲೀಸ್ ವಾಹನದ ಮೇಲೆ ಗುಂಡಿನ ದಾಳಿ ನಡೆಸಿದ್ದು, ಎಎಸ್‌ಐ ಸೇರಿ ಇಬ್ಬರು ಮೃತಪಟ್ಟಿದ್ದಾರೆ. 14 ಮಂದಿ ಗಾಯಗೊಂಡಿದ್ದಾರೆ.

ಎಎಸ್‌ಐ ಗುಲಾಂ ಹಸನ್ ಭಟ್ ಹಾಗೂ ಹೆಡ್‌ಕಾನ್‌ಸ್ಟೆಬಲ್ ಶಫೀಕ್ ಅಲಿ ಹುತಾತ್ಮರಾದವರು. ಘಟನೆಯಲ್ಲಿ ಗಾಯಗೊಂಡ ಎಲ್ಲರನ್ನೂ ತಕ್ಷಣವೇ ಆಸ್ಪತ್ರೆಗೆ ಸಾಗಿಸಲಾಯಿತಾದರೂ ತೀವ್ರವಾಗಿ ಗಾಯಗೊಂಡಿದ್ದ ಇಬ್ಬರು ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟರು ಎಂದು ಪೊಲೀಸರು ತಿಳಿಸಿದರು



ಶ್ರೀನಗರದ ಜಮ್ಮು ಮತ್ತು ಕಾಶ್ಮೀರ ರಾಷ್ಟ್ರೀಯ ಹೆದ್ದಾರಿ ಬಳಿ ಝೆವಾನ್ ಪ್ರದೇಶದಲ್ಲಿ ಉಗ್ರರ ದಾಳಿಗೆ ಒಳಗಾದ ಪೊಲೀಸ್ ಬಸ್

'ಪಂತ್ ಚೌಕದ ಬಳಿ ತೆರಳುತ್ತಿದ್ದ ಸಶಸ್ತ್ರ ಮೀಸಲು ಪೊಲೀಸ್ 9ನೇ ತುಕಡಿಯ ಬಸ್ಸಿನ ಮೇಲೆ ಉಗ್ರರ ಗುಂಪು ಮನಬಂದಂತೆ ಗುಂಡಿನ ದಾಳಿ ನಡೆಸಿದ್ದು, ದಾಳಿಯಲ್ಲಿ 14 ಪೊಲೀಸರು ಗಾಯಗೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಉಗ್ರರ ವಿರುದ್ಧ ಭಾರಿ ಶೋಧ ಕಾರ್ಯಾಚರಣೆ ಮುಂದುವರೆದಿದೆ. ಝೆವಾನ್ ಪ್ರದೇಶವನ್ನು ಭದ್ರತಾ ಪಡೆಗಳು ಸುತ್ತುವರೆದಿವೆ. ದಾಳಿ ನಡೆದ ಸ್ಥಳದ ಸಮೀಪದಲ್ಲೇ ಡಿಐಜಿಪಿ ರ್‍ಯಾಂಕ್‌ನ ಪೊಲೀಸ್ ಅಧಿಕಾರಿ, ಭಾರತೀಯ ಸೇನೆಯ ಮೂವರು ಕಮಾಂಡಿಂಗ್ ಅಧಿಕಾರಿಗಳ ಕಚೇರಿ ಸೇರಿದಂತೆ ಸೇನೆ, ಸಿಆರ್‌ಪಿಎಫ್ ಹಾಗೂ ಬಿಎಸ್‌ಎಫ್‌ನ ಹಲವು ಶಿಬಿರಗಳಿದ್ದು, ಅತ್ಯಂತ ಸುರಕ್ಷಿತ ಪ್ರದೇಶದಲ್ಲೇ ಇಂತಹ ದಾಳಿ ನಡೆದಿರುವುದು ಪೊಲೀಸರನ್ನು ಕಂಗೆಡಿಸಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಸೋಮವಾರ ನಡೆದ ದಾಳಿಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ವಿವರ ಕೇಳಿದ್ದು, ದಾಳಿಯಲ್ಲಿ ಮೃತಪಟ್ಟವರಿಗೆ ಸಂತಾಪ ಸೂಚಿಸಿದ್ದಾರೆ.

ಘಟನೆಯನ್ನು ಖಂಡಿಸಿರುವ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿಗಳಾದ ಮೆಹಬೂಬಾ ಮುಫ್ತಿ ಹಾಗೂ ಒಮರ್ ಅಬ್ದುಲ್ಲಾ ಅವರೂ ಸಹ ಸಂತಾಪ ಸೂಚಿಸಿದ್ದಾರೆ.

'ಸ್ತ್ರೀ ವಿರೋಧಿ' ಪ್ರಶ್ನೆ ಕೈಬಿಟ್ಟ ಸಿಬಿಎಸ್‌ಇ ವಿದ್ಯಾರ್ಥಿಗಳಿಗೆ ಪೂರ್ಣ ಅಂಕ

ನವದೆಹಲಿ (ಪಿಟಿಐ): ಕೇಂದ್ರ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು (ಸಿಬಿಎಸ್‌ಇ) 10ನೇ ತರಗತಿ ಇಂಗ್ಲಿಷ್ ವಿಷಯದ ಪರೀಕ್ಷೆಗೆ ನೀಡಲಾಗಿದ್ದ ವಿವರಣಾತ್ಮಕ ಅಡಕ ಮತ್ತು ಸಂಬಂಧಿತ ಪ್ರಶ್ನೆಗಳನ್ನು ಕೈಬಿಟ್ಟಿದ್ದು, ಈ ಪ್ರಶ್ನೆಗೆ ನಿಗದಿಪಡಿಸಿದ ಅಂಕವನ್ನು ಎಲ್ಲ ವಿದ್ಯಾರ್ಥಿಗಳಿಗೆ ಪೂರ್ಣವಾಗಿ ನೀಡಲು ತೀರ್ಮಾನಿಸಿದೆ.

ಉಲ್ಲೇಖಿತ ವಿವರಣಾತ್ಮಕ ಅಡಕ ಮತ್ತು ಪ್ರಶ್ನೆಗಳ ಮೂಲಕ ಸಿಬಿಎಸ್‌ಇ, ಲಿಂಗ ಏಕತಾನತೆ ಮತ್ತು ಪ್ರತಿಗಾಮಿ ಚಿಂತನೆಗಳಿಗೆ ಪ್ರಚೋದನೆ ನೀಡುತ್ತಿದೆ ಎಂಬ ಆಕ್ಷೇಪ ವ್ಯಾಪಕವಾಗಿ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಮಂಡಳಿಯು ವಿಷಯವನ್ನು ಪರಿಣತರ ತಂಡಕ್ಕೆ ಒಪ್ಪಿಸಿದ್ದು, ಪ್ರತಿಕ್ರಿಯೆ ನೀಡುವಂತೆ ಕೋರಿತ್ತು.

ಶನಿವಾರ ನಡೆದಿದ್ದ ಇಂಗ್ಲಿಷ್ ವಿಷಯದ ಪರೀಕ್ಷೆಯಲ್ಲಿ 'ಮಹಿಳಾ ವಿಮೋಚನೆಯು ಪೋಷಕರನ್ನು ಸಂಕಟಕ್ಕೀಡುಮಾಡಿದೆ', 'ಮಕ್ಕಳ ಮೇಲಿನ ಪಾರುಪತ್ಯ', 'ಗಂಡನ ನಿಲುವನ್ನು ಒಪ್ಪುವ ಮೂಲಕ ತಾಯಿ, ಕಿರಿಯರ ವಿಧೇಯತೆಗೆ ಪಾತ್ರರಾಗುತ್ತಾಳೆ' ಎಂಬ ಸಾಲುಗಳಿದ್ದ ವಿವರಣಾತ್ಮಕ ಅಡಕ ಮತ್ತು ಸಂಬಂಧಿಸಿದ ಪ್ರಶ್ನೆಗಳಿದ್ದವು.

ಈ ಅಡಕದಿಂದ ಆಯ್ದ ಸಾಲುಗಳು '#CBSEinsultswomen' ಹ್ಯಾಷ್‌ಟ್ಯಾಗ್ ಜೊತೆಗೆ ಟ್ವಿಟರ್‌ನಲ್ಲಿ ವೈರಲ್ ಆಗಿತ್ತು. ಮಂಡಳಿಯು ಸ್ತ್ರೀ ದ್ವೇಷದ ಭಾವನೆಗಳಿಗೆ ಪುಷ್ಟಿ ನೀಡುತ್ತಿದೆ. ಸಮಾಜದಲ್ಲಿ ಪ್ರತಿಗಾಮಿ ಚಿಂತನೆಗಳನ್ನು ಬೆಳೆಸುತ್ತಿದೆ ಎಂಬ ಆಕ್ರೋಶ ವ್ಯಕ್ತವಾಗಿತ್ತು.

'ಇಂಗ್ಲಿಷ್ ವಿಷಯದ ಪರೀಕ್ಷೆಗೆ ನೀಡಿದ್ದ ಭಾಷೆ, ಸಾಹಿತ್ಯ ಕುರಿತ ಪ್ರಶ್ನೆಪತ್ರಿಕೆಯಲ್ಲಿನ ಅಡಕವು ಮಂಡಳಿಯ ಪ್ರಶ್ನೆಪತ್ರಿಕೆ ರೂಪಿಸುವ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಭಾಗಿದಾರರ ಪ್ರತಿಕ್ರಿಯೆ ಆಧರಿಸಿ, ಪರಿಣತರ ಸಮಿತಿ ಅಭಿಪ್ರಾಯ ಕೇಳಲಾಗಿತ್ತು. ಸಮಿತಿಯ ಶಿಫಾರಸಿನಂತೆ ಅದನ್ನು ಕೈಬಿಡಲು ತೀರ್ಮಾನಿಸಲಾಗಿದೆ' ಎಂದು ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕರಾದ ಸಾನ್ಯಂ ಭಾರಧ್ವಾಜ್ ತಿಳಿಸಿದರು.

ಲಸಿಕೆ: 'ಸುಪ್ರೀಂ'ಗೆ ಅರ್ಜಿ

ನವದೆಹಲಿ (ಪಿಟಿಐ): ಲಸಿಕೆ ಉತ್ಪಾದನೆಗೆ ಸಂಬಂಧಿಸಿ ಸಾರ್ವಜನಿಕ ವಲಯ ಸಂಸ್ಥೆಗಳಿಗೆ ಪುನಃಶ್ಚೇತನ ನೀಡಬೇಕು ಮತ್ತು ಅವುಗಳ ಪೂರ್ಣ ಸಾಮರ್ಥ್ಯ ಬಳಸಿಕೊಳ್ಳಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ದಾಖಲಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿತು.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎ.ಎಸ್. ಬೋಪಣ್ಣ ಅವರಿದ್ದ ಪೀಠವು, ನಾಲ್ಕು ವಾರದಲ್ಲಿ ಉತ್ತರಿಸಬೇಕು ಎಂದು ಸೂಚಿಸಿತು. 'ಈ ವಿಷಯ ಈಗಾಗಲೇ ಸರ್ಕಾರದ ನೀತಿಯಲ್ಲಿ ಸೇರಿರುವ ಕಾರಣ, ಈ ಸಂಬಂಧ ನೋಟಿಸ್ ಅಗತ್ಯವಿಲ್ಲ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಪೀಠಕ್ಕೆ ತಿಳಿಸಿದರು. ಮಾಜಿ ಐಎಎಸ್ ಅಧಿಕಾರಿ ಅಮೂಲ್ಯರತ್ನ ನಂದಾ, ಆಲ್ ಇಂಡಿಯಾ ಡ್ರಗ್ ಆ್ಯಕ್ಷನ್ ನೆಟ್‌ವರ್ಕ್, ಲೋ ಕಾಸ್ಟ್ ಸ್ಟ್ಯಾಂಡರ್ಡ್ ಥೆರಪೆಟಿಕ್ಸ್, ಮೆಡಿಕೊ ಫ್ರೆಂಡ್ ಸರ್ಕಲ್ ಈ ಸಂಬಂಧ ಅರ್ಜಿ ಸಲ್ಲಿಸಿದ್ದವು.

ಫಲಿತಾಂಶ: ಸಮಸ್ಯೆ ಆಲಿಸಲು ಸಿಬಿಎಸ್‌ಇಗೆ ಸೂಚನೆ

ನವದೆಹಲಿ: ಫಲಿತಾಂಶ ಸುಧಾರಣೆಗಾಗಿ ಮರುಪರೀಕ್ಷೆ ಬರೆದಿದ್ದ 12ನೇ ತರಗತಿ ವಿದ್ಯಾರ್ಥಿಗಳ ಸಮಸ್ಯೆಯನ್ನು ಕೇಂದ್ರ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ಸಿಬಿಎಸ್‌ಇ) ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಅವರು ಪಡೆದ ಅಂಕಗಳೇ ಆಧಾರ. ಹೀಗಾಗಿ, ಅಂಕಗಳ ಸುಧಾರಣೆ ಉದ್ದೇಶದಿಂದ ಮತ್ತೆ ಪರೀಕ್ಷೆ ಬರೆದಿದ್ದವರ ಸಮಸ್ಯೆ ಗಮನಿಸಬೇಕು ಎಂದು ಕೋರ್ಟ್ ತಿಳಿಸಿದೆ.

ವಿದ್ಯಾರ್ಥಿಗಳು ಮರುಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಲು ಆಗದಿದ್ದಲ್ಲಿ, ಈ ಹಿಂದಿನ ಫಲಿತಾಂಶವನ್ನೇ ಉಳಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಸಿಬಿಎಸ್‌ಇಯು ಇದೇ ಸಂದರ್ಭದಲ್ಲಿ ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಮತ್ತು ಸಿ.ಟಿ.ರವಿಕುಮಾರ್ ಅವರಿದ್ದ ಪೀಠಕ್ಕೆ ಮಾಹಿತಿ ನೀಡಿತು.

'ವಿದ್ಯಾರ್ಥಿಗಳು ಹಿಂದೆ ಪಡೆದಿದ್ದ ಅಂಕಗಳ ಆಧಾರದಲ್ಲಿ ಪ್ರವೇಶ ಪಡೆದಿದ್ದಾರೆ. ಹೀಗಾಗಿ ಮೂಲ ಫಲಿತಾಂಶ ಉಳಿಸಿಕೊಳ್ಳುವ ಸ್ವಾತಂತ್ರ್ಯವನ್ನು ನೀಡಬೇಕು' ಎಂದು ಅರ್ಜಿದಾರರ ಪ್ರತಿನಿಧಿಸಿದ್ದ ವಕೀಲರು ಪ್ರತಿಪಾದಿಸಿದರು.

'ಇದು, ಶಾಶ್ವತ ವ್ಯವಸ್ಥೆಯಲ್ಲ. ಒಂದು ಬಾರಿಯ ವ್ಯವಸ್ಥೆಯಾದ್ದರಿಂದ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಮಂಡಳಿಯು ಗಮನಿಸಬೇಕು' ಎಂದು ಪೀಠವು ಸಿಬಿಎಸ್‌ಇ ಪ್ರತಿನಿಧಿಸಿದ್ದ ವಕೀಲರಿಗೆ ಸೂಚಿಸಿತು.

ಈ ಬಗ್ಗೆ ಮಂಡಳಿಯ ಸಲಹೆಯನ್ನು ಪಡೆಯಲಾಗುವುದು ಎಂದು ವಕೀಲರು ಪ್ರತಿಕ್ರಿಯಿಸಿದರು.

ನಿವೃತ್ತ ನ್ಯಾಯಮೂರ್ತಿಗಳ ಪಿಂಚಣಿ ಏರಿಕೆಗೆ ರಾಜ್ಯಸಭೆಯಲ್ಲಿ ಮಸೂದೆ

ನವದೆಹಲಿ (ಪಿಟಿಐ): ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ಪಿಂಚಣಿ ಏರಿಕೆಗೆ ಸಂಬಂಧಿಸಿದಂತೆ ಮಸೂದೆಯನ್ನು ಸರ್ಕಾರ ಸೋಮವಾರ ರಾಜ್ಯಸಭೆಯಲ್ಲಿ ಮಂಡಿಸಿತು.


ಪಿಂಚಣಿ ಭಾಗಶಃ ಏರಿಕೆಗೆ ಅರ್ಹತಾ ದಿನಾಂಕ ಕುರಿತಂತೆ ಸ್ಪಷ್ಟತೆ ನೀಡುವ ಸಲುವಾಗಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ಸಂಬಳ ಮತ್ತು ಸೇವಾ ಕಾಯ್ದೆಗೆ ತಿದ್ದುಪಡಿ ತರುವುದು ಇದರ ಉದ್ದೇಶ.

ಕಾನೂನು ಸಚಿವ ಕಿರಣ್ ರಿಜಿಜು ಅವರು ಮಸೂದೆ ಮಂಡಿಸಿದರು. ಲೋಕಸಭೆಯಲ್ಲಿ ಡಿಸೆಂಬರ್ 8ರಂದು ಮಸೂದೆಗೆ ಅಂಗೀಕಾರ ದೊರೆತಿದೆ. 'ಇದೊಂದು ಸಣ್ಣ ತಿದ್ದುಪಡಿ. ನಿವೃತ್ತ ನ್ಯಾಯಮೂರ್ತಿಗಳ ಪಿಂಚಣಿಯಲ್ಲಿ ಭಾಗಶಃ ಏರಿಕೆ ಮಾಡುವುದು ಇದರ ಉದ್ದೇಶ' ಎಂದು ಸಚಿವರು ಮಸೂದೆ ಮಂಡನೆಯ ವೇಳೆ ತಿಳಿಸಿದರು.

ಮಾದಕ ವಸ್ತು ಕಾಯ್ದೆಗೆ ತಿದ್ದುಪಡಿಮಸೂದೆ ಅಂಗೀಕಾರ: ಮಾದಕ ವಸ್ತು ನಿಯಂತ್ರಣ ತಿದ್ದುಪಡಿ ಕಾಯ್ದೆಯ ಕರಡು ಲೋಪವನ್ನು ಸರಿಪಡಿಸಲು ತಿದ್ದುಪಡಿಗಾಗಿ ಸರ್ಕಾರ ಮಂಡಿಸಿದ್ದ ಮಸೂದೆಯನ್ನು ಲೋಕಸಭೆಯು ಸೋಮವಾರ ಅಂಗೀಕರಿಸಿತು.

ಕಾಯ್ದೆಗೆ ತಿದ್ದುಪಡಿ ತಂದು 2014ರಲ್ಲಿ ಸುಗ್ರೀವಾಜ್ಞೆ ಹೊರಡಿಸಲಾಗಿತ್ತು. ಆದರೆ, ಮಾದಕವಸ್ತು ಸಾಗಣೆಗೆ ಆರ್ಥಿಕ ನೆರವು ನೀಡುವ ಪ್ರಕರಣದಲ್ಲಿ ಶಿಕ್ಷೆಗೆ ಗುರಿಪಡಿಸಬೇಕಾದ ಸೆಕ್ಷನ್ ಕರಡುಪ್ರತಿಯಲ್ಲಿ ಉಲ್ಲೇಖವಾಗಿರಲಿಲ್ಲ. ಈ ಲೋಪ ಸರಿಪಡಿಸುವ ಕ್ರಮವಾಗಿ ಉಲ್ಲೇಖಿತ ಕಾಯ್ದೆಗೆ ತಿದ್ದುಪಡಿ ತರಲು ಈಗ ಮಸೂದೆ ಮಂಡಿಸಲಾಗಿತ್ತು.

ಸೂಪರ್ ಸಾನಿಕ್ ಕ್ಷಿಪಣಿ ಉಡಾವಣೆ ಯಶಸ್ವಿ



ಬಾಲಾಸೋರ್, ಒಡಿಶಾ (ಪಿಟಿಐ): ನೌಕಾ ಸ್ಫೋಟಕ ಬೆಂಬಲಿತ ಸೂಪರ್ ಸಾನಿಕ್ ಕ್ಷಿಪಣಿಯನ್ನು (ಎಸ್‌ಎಂಎಟಿ) ಇಲ್ಲಿನ ಕರಾವಳಿಯ ಅಬ್ದುಲ್ ಕಲಾಂ ದ್ವೀಪದಿಂದ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು.

ಉಡಾವಣೆಯ ಸಂದರ್ಭದಲ್ಲಿ ಈ ಕ್ಷಿಪಣಿಯ ಪೂರ್ಣ ಸಾಮರ್ಥ್ಯದ ಪ್ರಾತ್ಯಕ್ಷಿಕೆಯೂ ನಡೆಯಿತು ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ತಿಳಿಸಿದೆ.

ಜಲಾಂತರ್ಗಾಮಿ ಯುದ್ಧನೌಕೆಯ ಸಾಮರ್ಥ್ಯ ವೃದ್ಧಿಗೆ ಪೂರಕ ವ್ಯವಸ್ಥೆಯನ್ನು ಎಸ್‌ಎಂಎಟಿಯಲ್ಲಿ ಅಳವಡಿಸಲಾಗಿದೆ. ಉಡಾವಣೆ ಸಂದರ್ಭದಲ್ಲಿ ಕ್ಷಿಪಣಿಯ ಮೇಲ್ವಿಚಾರಣೆಯನ್ನು ಎಲೆಕ್ಟ್ರೋ ಆಪ್ಟಿಕ್ ಟೆಲಿಮೆಟ್ರಿ ವ್ಯವಸ್ಥೆ, ರಾಡಾರ್ ಬಳಸಿ ನಡೆಸಲಾಯಿತು ಎಂದು ತಿಳಿಸಿದೆ. ಕ್ಷಿಪಣಿಯು ನೌಕಾಸ್ಫೋಟಕ ಹೊಂದಿದ್ದು, ಪ್ಯಾರಾಚೂಟ್ ಮತ್ತು ಸ್ಫೋಟಕ ಬಿಡುಗಡೆ ಮಾಡುವ ವ್ಯವಸ್ಥೆಯನ್ನು ಒಳಗೊಂಡಿದೆ ಎಂದು ಡಿಆರ್‌ಡಿಒ ಹೇಳಿಕೆ ನೀಡಿದೆ.

ಸಂಸತ್ ಮೇಲೆ ಉಗ್ರರ ದಾಳಿಗೆ 20 ವರ್ಷ, ಹುತಾತ್ಮರ ಸ್ಮರಣೆ

ನವದೆಹಲಿ (ಪಿಟಿಐ): ಸಂಸತ್ತಿನ ಮೇಲಿನ ಉಗ್ರರ ದಾಳಿ ಘಟನೆ ನಡೆದು 20 ವರ್ಷಗಳಾಗಿದ್ದು, ಅಂದು ಹುತಾತ್ಮರಾಗಿದ್ದ ಭದ್ರತಾ ಸಿಬ್ಬಂದಿಗೆ ಸಂಸದರು ಸೋಮವಾರ ಗೌರವನಮನ ಸಲ್ಲಿಸಿದರು.

ಉಭಯ ಸದನಗಳಲ್ಲಿ ಸದಸ್ಯರು ಕೆಲಹೊತ್ತು ಮೌನವಹಿಸಿ ಗೌರವ ಸಲ್ಲಿಸಿದರು. 2001ರ ಡಿಸೆಂಬರ್ 13ರಂದು ದಾಳಿ ನಡೆದಿದ್ದು, 9 ಮಂದಿ ಸಿಬ್ಬಂದಿ ಮೃತಪಟ್ಟಿದ್ದರು.

ದಾಳಿ ನಡೆಸಿದ್ದ ಲಷ್ಕರ್ ಎ ತಯಬಾ (ಎಲ್‌ಇಟಿ) ಮತ್ತು ಜೈಷ್ ಎ ಮೊಹಮ್ಮದ್ ಸಂಘಟನೆಗೆ ಸೇರಿದ್ದ ಎಲ್ಲ ಐವರು ಭಯೋತ್ಪಾದಕರು ಬಲಿಯಾಗಿದ್ದರು.

ಸೋಮವಾರ ಕಲಾಪ ಆರಂಭವಾಗುತ್ತಿದ್ದಂತೆಯೇ ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ವಿಷಯ ಪ್ರಸ್ತಾಪಿಸಿದರು.

ರಾಜ್ಯಸಭೆಯಲ್ಲಿ ಸಭಾಪತಿ ಎಂ. ವೆಂಕಯ್ಯನಾಯ್ಡು ವಿಷಯ ಪ್ರಸ್ತಾಪಿಸಿದ್ದು, ಭಯೋತ್ಪಾದನೆಯ ವಿರುದ್ಧ ಹೋರಾಡುವ ಬದ್ಧತೆಯನ್ನು ಎಲ್ಲರೂ ಹೊಂದಬೇಕಾಗಿದೆ ಎಂದು ಹೇಳಿದರು.



2001ರ ಡಿಸೆಂಬರ್ 13ರಂದು ಸಂಸತ್ ಮೇಲೆ ಉಗ್ರರು ನಡೆಸಿದ್ದ ದಾಳಿ ವೇಳೆ ಅಸುನೀಗಿದ್ದ ಭದ್ರತಾ ಸಿಬ್ಬಂದಿಗೆ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಸೋಮವಾರ ನವದೆಹಲಿಯ ಸಂಸತ್ ಭವನದಲ್ಲಿ ಗೌರವ ನಮನ ಸಲ್ಲಿಸಿದರು

ಪ್ರಧಾನಿ ಗೌರವ ನಮನ

ನವದೆಹಲಿ (ಪಿಟಿಐ): ಸಂಸತ್ತಿನ ಮೇಲಿನ ದಾಳಿ ಘಟನೆಯ ಹುತಾತ್ಮರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಗೌರವ ನಮನ ಸಲ್ಲಿಸಿದ್ದಾರೆ.

'ಅಗಲಿದ ಸಿಬ್ಬಂದಿಯ ಸೇವೆಯು ಅನನ್ಯವಾದುದು. ಅವರ ತ್ಯಾಗವು ಪ್ರತಿಯೊಬ್ಬ ನಾಗರಿಕರಿಗೆ ಪ್ರೇರೇಪಣೆ ನೀಡಲಿದೆ' ಎಂದು ಟ್ವೀಟ್ ಮಾಡಿದ್ದಾರೆ.

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಇಂದಿನಿಂದ: ಭರವಸೆಯಲ್ಲಿ ಹಾಲಿ ಜಂಟಿ ಚಾಂಪಿಯನ್ನರು

ಭಾರತ ತಂಡಕ್ಕೆ 'ಹ್ಯಾಟ್ರಿಕ್' ಪ್ರಶಸ್ತಿ ನಿರೀಕ್ಷೆ

ಢಾಕಾ (ಪಿಟಿಐ): ಯುವ ಆಟಗಾರರನ್ನು ಒಳಗೊಂಡ ಭಾರತ ಹಾಕಿ ತಂಡ ಹೊಸ ಸವಾಲಿಗೆ ಸಜ್ಜಾಗಿದೆ. ಮಂಗಳವಾರ ಆರಂಭವಾಗಲಿರುವ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಪ್ರಶಸ್ತಿಯ ಕನಸು ಹೊತ್ತು ತಂಡ ಕಣಕ್ಕೆ ಇಳಿಯಲಿದೆ. ಭಾರತ ಮೊದಲ ದಿನ ಕೊರಿಯಾವನ್ನು ಎದುರಿಸಲಿದೆ.

ಭಾರತ 2011ರಲ್ಲಿ ಮೊದಲ ಬಾರಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡಿತ್ತು. ಈ ವರೆಗೆ ಮೂರು ಬಾರಿ ಚಾಂಪಿಯನ್ ಆಗಿದೆ. ಹಿಂದಿನ ಎರಡು ಆವೃತ್ತಿಗಳಲ್ಲಿ ಪ್ರಶಸ್ತಿ ಜಯಿಸಿರುವ ತಂಡ ಈಗ ಹ್ಯಾಟ್ರಿಕ್ ಸಾಧನೆಯ ಕನಸಿನಲ್ಲಿದೆ.

ಮಸ್ಕತ್‌ನಲ್ಲಿ ನಡೆದಿದ್ದ ಹಿಂದಿನ ಆವೃತ್ತಿಯಲ್ಲಿ ಭಾರತ ತಂಡ ಪಾಕಿಸ್ತಾನದೊಂದಿಗೆ ಪ್ರಶಸ್ತಿ ಹಂಚಿಕೊಂಡಿತ್ತು. ಮಳೆಯಿಂದಾಗಿ ಫೈನಲ್ ಪಂದ್ಯವನ್ನು ರದ್ದು ಮಾಡಿದ್ದರಿಂದ ಎರಡೂ ತಂಡಗಳನ್ನು ವಿಜಯಿ ಎಂದು ಘೋಷಿಸಲಾಗಿತ್ತು. ಕೋವಿಡ್ ಕಾರಣದಿಂದ ಈ ಬಾರಿ ಬಲಿಷ್ಠ ಮಲೇಷ್ಯಾ ಆಡುತ್ತಿಲ್ಲ. ಆದ್ದರಿಂದ ಭಾರತದ ಭರವಸೆ ಹೆಚ್ಚಿದೆ.

ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ನಂತರ ಇದೇ ಮೊದಲ ಬಾರಿ ಭಾರತ ತಂಡ ಕಣಕ್ಕೆ ಇಳಿಯುತ್ತಿದ್ದು ನಾಯಕ ಮನ್‌ಪ್ರೀತ್ ಸಿಂಗ್ ಮತ್ತು ಉಪನಾಯಕ ಹರ್ಮನ್‌ಪ್ರೀತ್ ಸಿಂಗ್ ತಂಡದ ಶಕ್ತಿಯಾಗಿದ್ದಾರೆ.

'ಒಲಿಂಪಿಕ್ಸ್ ನಂತರ ಇದು ನಮ್ಮ ಮೊದಲ ಟೂರ್ನಿ ಆಗಿರುವುದರಿಂದ ವಿಶೇಷ ಎನಿಸಿಕೊಂಡಿದೆ. ತಂಡ ಈ ಮೂಲಕ ಹೊಸ ಅಧ್ಯಾಯಕ್ಕೆ ಅಣಿಯಾಗುತ್ತಿದೆ. ಮೊದಲ ಪಂದ್ಯದಲ್ಲೇ ಉತ್ತಮ ಆರಂಭ ಕಂಡರೆ ಭರವಸೆ ಹೆಚ್ಚಲಿದೆ. ಆ ಮೂಲಕ ಪ್ರಶಸ್ತಿ ಗೆಲ್ಲುವತ್ತ ಅಡಿಯಿಡಬಹುದಾಗಿದೆ' ಎಂದು ಮನ್‌ಪ್ರೀತ್ ಸಿಂಗ್ ಹೇಳಿದರು.

ಭಾರತದ ಪಂದ್ಯಗಳು		
ದಿನಾಂಕ	ಎದುರಾಳಿ	ಸಮಯ
ಡಿ.14	ಕೊರಿಯಾ	ಮ.3.00
ಡಿ.15	ಬಾಂಗ್ಲಾದೇಶ	ಮ.3.00
ಡಿ.17	ಪಾಕಿಸ್ತಾನ	ಮ.3.00
ಡಿ.19	ಜಪಾನ್	ಮ.3.00
ಸಮಯ: ಭಾರತೀಯ ಕಾಲಮಾನ		
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್		
ಟೂರ್ನಿಯ ಅವಧಿ		
ಡಿ.14ರಿಂದ ಡಿ.22		
ಒಟ್ಟು ತಂಡಗಳು 6		
ಭಾರತದ ಸಾಧನೆ		
ಪಾಲ್ಗೊಂಡ ಆವೃತ್ತಿಗಳು	6	
ಗೆದ್ದ ಪ್ರಶಸ್ತಿಗಳು	3 (2011, 2016, 2018)	

> ಕೊರಿಯಾ ಬಲಿಷ್ಠ ತಂಡ. ನಮ್ಮ ಆಕ್ರಮಣಕ್ಕೆ ಸವಾಲೆಸೆಯುವ ಸಾಮರ್ಥ್ಯ ಆ ತಂಡಕ್ಕೆ ಇದೆ. ಹೀಗಿದ್ದರೂ ನಾವು ಎದೆಗುಂದದೆ ದಿಟ್ಟತನದಿಂದ ಆಡಲಿದ್ದೇವೆ.
> **ಮನ್‌ಪ್ರೀತ್ ಸಿಂಗ್,** ಭಾರತ ತಂಡದ ನಾಯಕ

'ಕೆಲವು ಆಟಗಾರರು ಹಿಂದಿನ ಎರಡು ವರ್ಷಗಳಿಂದ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡುವ ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ತಂಡ ಒಲಿಂಪಿಕ್ಸ್‌ಗೆ ಸಜ್ಜಾಗುತ್ತಿದ್ದ ಕಾರಣ ಕೆಲವರನ್ನು ಕಣಕ್ಕೆ ಇಳಿಸಲು ಸಾಧ್ಯವಾಗಿರಲಿಲ್ಲ. ಅವರಿಗೆಲ್ಲ ಈಗ ಅವಕಾಶದ ಬಾಗಿಲು ತೆರೆದಿದೆ' ಎಂದು ಮನ್‌ಪ್ರೀತ್ ತಿಳಿಸಿದರು.

'ತಂಡ ಈಗಲೂ ಬಲಿಷ್ಠವಾಗಿದೆ. ಭುವನೇಶ್ವರದಲ್ಲಿ ನಡೆದ ಶಿಬಿರದಲ್ಲಿ ಫಿಟ್‌ನೆಸ್‌ಗೆ ಹೆಚ್ಚು ಆದ್ಯತೆ ನೀಡಲಾಗಿದೆ. ಏಷ್ಯಾದ ಇತರ ತಂಡಗಳು ಯಾವ ರೀತಿ ಸಜ್ಜಾಗಿವೆ ಎಂಬುದನ್ನು ಈ ಟೂರ್ನಿಯಲ್ಲಿ ನೋಡಬೇಕಷ್ಟೆ. ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಈ ಟೂರ್ನಿ ನಮ್ಮ ತಂಡಕ್ಕೆ ಉತ್ತಮ ಅವಕಾಶ ಒದಗಿಸಲಿದೆ' ಎಂದು ಅವರು ಹೇಳಿದರು.


ಮನ್‌ಪ್ರೀತ್ ಸಿಂಗ್ –ಪಿಟಿಐ ಚಿತ್ರ

ಟೆಸ್ಟ್ ಸರಣಿಗೆ ರೋಹಿತ್ ಅಲಭ್ಯ: ತಂಡಕ್ಕೆ ಪ್ರಿಯಾಂಕ್

ಮುಂಬೈ (ಪಿಟಿಐ): ಮಂಡಿರಜ್ಜು ನೋವಿನಿಂದ ಬಳಲುತ್ತಿರುವ ಭಾರತ ತಂಡದ ಉಪನಾಯಕ ರೋಹಿತ್ ಶರ್ಮಾ ಅವರು ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಗೆ ಅಲಭ್ಯರಾಗಲಿದ್ದಾರೆ. ಅವರ ಬದಲಿಗೆ ಭಾರತ 'ಎ' ತಂಡದ ನಾಯಕ ಪ್ರಿಯಾಂಕ್ ಪಾಂಚಾಲ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ಮುಂಬೈಯಲ್ಲಿ ತಂಡವು ನೆಟ್ಸ್‌ನಲ್ಲಿ ಅಭ್ಯಾಸ ಮಾಡುತ್ತಿದ್ದಾಗ ರೋಹಿತ್ ಶರ್ಮಾ ಅವರಲ್ಲಿ ನೋವು ಉಲ್ಬಣಿಸಿತ್ತು. ಅವರ ಕೈಗೆ ಪೆಟ್ಟು ಕೂಡ ಬಿದ್ದಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ಬಿಸಿಸಿಐ ತಿಳಿಸಿದೆ. ರೋಹಿತ್ ಶರ್ಮಾ ಅನುಪಸ್ಥಿತಿಯಲ್ಲಿ ಉಪನಾಯಕ ಯಾರು ಆಗಲಿದ್ದಾರೆ ಎಂದು ಸ್ಪಷ್ಟಪಡಿಸಿಲ್ಲ.

ಕೆ.ಎಲ್.ರಾಹುಲ್ ಉಪನಾಯಕನಾಗುವುದು ಖಚಿತ ಎನ್ನಲಾಗಿದೆ. ರಿಷಭ್ ಪಂತ್ ಅಥವಾ ರವಿಚಂದ್ರನ್ ಅಶ್ವಿನ್ ಅವರ ಹೆಸರನ್ನು ಪರಿಗಣಿಸುವ ಸಾಧ್ಯತೆ ಇದೆ. ಅಜಿಂಕ್ಯ ರಹಾನೆ ಅವರನ್ನು ಈಗಾಗಲೇ ಆ ಸ್ಥಾನದಿಂದ ತೆರವುಗೊಳಿಸಲಾಗಿದೆ. ಮೂರು ಪಂದ್ಯಗಳ ಟೆಸ್ಟ್ ಸರಣಿ ಜನವರಿ 15ರಂದು ಕೊನೆಗೊಳ್ಳಲಿದ್ದು 19ರಿಂದ ಏಕದಿನ ಸರಣಿ ನಡೆಯಲಿದೆ.


ಪ್ರಿಯಾಂಕ್

ಕೊಹ್ಲಿ ನಾಯಕತ್ವ ಖುಷಿ ನೀಡಿದೆ-ರೋಹಿತ್: 5 ವರ್ಷ ಭಾರತ ಏಕ ದಿನ ತಂಡ ವನ್ನು ಮುನ್ನಡೆಸಿದ್ದ ವಿರಾಟ್ ಕೊಹ್ಲಿ ಅವರ ನಾಯಕತ್ವದ ಅವಧಿಯನ್ನು ಎಲ್ಲರೂ ಖುಷಿಯಿಂದ ಕಳೆದಿದ್ದಾರೆ ಎಂದು ಹೊಸ ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ.

ಬಿಸಿಸಿಐ ಡಾಟ್ ಟಿವಿ ಜೊತೆ ಮಾತನಾಡಿದ ಅವರು ಕೊಹ್ಲಿ ಅವಧಿ ತಂಡದ ಪಾಲಿಗೆ ಅತ್ಯುತ್ತಮವಾಗಿತ್ತು ಎಂದಿದ್ದಾರೆ. ಯುಎಇಯಲ್ಲಿ ನಡೆದ ವಿಶ್ವಕಪ್ ನಂತರ ಟ್ವೆಂಟಿ20 ನಾಯಕತ್ವವನ್ನು ವಿರಾಟ್ ಕೊಹ್ಲಿ ತೊರೆದಿದ್ದರು. ಈಗ ಅವರನ್ನು ಏಕದಿನ ತಂಡದ ನಾಯಕತ್ವದಿಂದ ಕೆಳಗಿಸಲಾಗಿದೆ.


ಎಚ್‌.ಎಸ್‌.ಪ್ರಣಯ್– ಎಎಫ್‌ಪಿ ಚಿತ್ರ

ವಿಶ್ವ ಬ್ಯಾಡ್ಮಿಂಟನ್: ಪ್ರಣಯ್‌ಗೆ ಗೆಲುವು

ಹುವೆಲ್ವಾ, ಸ್ಪೇನ್ (ಪಿಟಿಐ): ಹಿನ್ನಡೆಯಿಂದ ಪುಟಿದೆದ್ದ ಭಾರತದ ಎಚ್.ಎಸ್.ಪ್ರಣಯ್ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಜಯದ ಆರಂಭ ಮಾಡಿದರು.

ಸೋಮವಾರ ನಡೆದ ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ ಪ್ರಣಯ್ 13-21, 21-18, 21-19ರಿಂದ ಹಾಂಗ್‌ಕಾಂಗ್‌ನ ಎನ್‌ಜಿ ಕಾ ಲಾಂಗ್ ಎದುರು ಗೆದ್ದರು.

ವೀರೋಚಿತ ಹೋರಾಟ ನೀಡಿದ ಬಿ.ಸಾಯಿ ಪ್ರಣೀತ್ ಅವರು 21–17, 7–21, 18–21ರಿಂದ ನೆದರ್ಲೆಂಡ್ಸ್‌ನ ಮಾರ್ಕ್ ಕಾಲ್ಜೊ ಎದುರು ನಿರಾಸೆ ಅನುಭವಿಸಿದರು. ಮಿಶ್ರ ಡಬಲ್ಸ್ ವಿಭಾಗದಲ್ಲಿ ವೆಂಕಟ್ ಗೌರವ್ ಪ್ರಸಾದ್ ಮತ್ತು ಜೂಹಿ ದೇವಾಂಗನ್ 8-21 4-21ರಿಂದ ಡೆನ್ಮಾರ್ಕ್‌ನ ಮಥಾಯಿಸ್ ತಿರಿ – ಮಯಿ ಸುರೊ ಎದುರು, ಉತ್ಕರ್ಷ್ ಅರೋರಾ– ಕರಿಷ್ಮಾ ವಾಡಕರ್ 20-22, 16-21ರಿಂದ ಜರ್ಮನಿಯ ಪ್ಯಾಟ್ರಿಕ್ ಶಿಯೆಲ್–ಫ್ರಾನ್ಸಿಸ್ಕಾ ವೊಲ್ಕಮನ್ ಎದುರು ಸೋತರು.

ಪುರುಷರ ಡಬಲ್ಸ್‌ನಲ್ಲಿ ಅರುಣ್ ಜಾರ್ಜ್–ಸನ್ಯಾಮ್ ಶುಕ್ಲಾ ಕೂಡ ನಿರಾಸೆ ಅನುಭವಿಸಿದರು.

ವಿಶಾಲ್, ಚಿನ್ಮಯ್ ಶತಕ

ಬೆಂಗಳೂರು: ವಿಶಾಲ್ ಒನಟ್ (ಬ್ಯಾಟಿಂಗ್ 170) ಹಾಗೂ ಚಿನ್ಮಯ್ ಎನ್.ಎ. (ಬ್ಯಾಟಿಂಗ್ 153) ಅವರ ಭರ್ಜರಿ ಶತಕ ಗಳಿಸಿದರು. ಅವರ ಆಟದ ನೆರವಿನಿಂದ ಕರ್ನಾಟಕ ತಂಡವು ಕೂಚ್ ಬೆಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಪಂದ್ಯದಲ್ಲಿ ಉತ್ತಮ ಮೊತ್ತ ಗಳಿಸಿತು.

ಆಂಧ್ರಪ್ರದೇಶದ ವಿಜಯನಗರಂನ ಕಂದುಕೂರಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ದಿನ ಕರ್ನಾಟಕ ತಂಡವು ಬರೋಡಾ ಎದುರು 90 ಓವರ್‌ಗಳಲ್ಲಿ 3 ವಿಕೆಟ್‌ಗೆ 356 ರನ್ ಗಳಿಸಿತು. 280 ಎಸೆತಗಳನ್ನು ಎದುರಿಸಿದ ವಿಶಾಲ್ 26 ಬೌಂಡರಿ ಒಂದು ಸಿಕ್ಸರ್ ಹೊಡೆದರೆ, ಚಿನ್ಮಯ್ ಅವರ 236 ಎಸೆತಗಳಲ್ಲಿ ಇನಿಂಗ್ಸ್‌ನಲ್ಲಿ 23 ಬೌಂಡರಿಗಳಿದ್ದವು.



ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ(ಎನ್‌ಸಿಎ) ಮುಖ್ಯಸ್ಥರಾಗಿ ಬೆಂಗಳೂರಿನಲ್ಲಿ ಸೋಮವಾರ ಅಧಿಕಾರ ಸ್ವೀಕರಿಸಿದ ಮಾಜಿ ಕ್ರಿಕೆಟಿಗ ವಿ.ವಿ.ಎಸ್.ಲಕ್ಷ್ಮಣ್ (ಬಲ) ಅವರು ವೇಳಾಪಟ್ಟಿಯನ್ನು ಪರಿಶೀಲಿಸಿದರು– ಟ್ವಿಟರ್ ಚಿತ್ರ

ವಿಜಯ್ ಹಜಾರೆ ಟ್ರೋಫಿ: ಕರ್ನಾಟಕಕ್ಕೆ ಬಂಗಾಳ ಸವಾಲು

ಮನೀಷ್ ಪಡೆಗೆ ನಾಕೌಟ್ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸತತ ಎರಡು ಪಂದ್ಯಗಳಲ್ಲಿ ಜಯ ಗಳಿಸಿ ಭರವಸೆಯಲ್ಲಿರುವ ಕರ್ನಾಟಕದ ತಂಡ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಮಂಗಳವಾರ ಬಂಗಾಳವನ್ನು ಎದುರಿಸಲಿದೆ. ತಿರುವನಂತಪುರದ ಮಂಗಳಾಪುರಂ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

'ಬಿ' ಗುಂಪಿನ ಕೊನೆಯ ಪಂದ್ಯ ಇದಾಗಿದ್ದು ಗೆದ್ದರೆ ಕ್ವಾರ್ಟರ್ ಫೈನಲ್ ಪ್ರವೇಶದ ಹಾದಿ ಸುಲಭವಾಗಲಿದೆ. ಗುಂಪಿನಲ್ಲಿ ತಮಿಳುನಾಡು ಮತ್ತು ಕರ್ನಾಟಕ ನಾಲ್ಕು ಪಂದ್ಯಗಳ ಪೈಕಿ ತಲಾ ಮೂರನ್ನು ಗೆದ್ದುಕೊಂಡಿವೆ. ಆದರೆ ರನ್ ರೇಟ್ ಆಧಾರದಲ್ಲಿ ತಮಿಳುನಾಡು ಅಗ್ರ ಸ್ಥಾನದಲ್ಲಿದೆ.

ಪುದುಚೇರಿ ಮತ್ತು ಬಂಗಾಳ ತಲಾ ಎರಡು ಪಂದ್ಯಗಳಲ್ಲಿ ಗೆದ್ದು ಎರಡಲ್ಲಿ ಸೋತಿವೆ. ಬಂಗಾಳಕ್ಕೆ ನಾಕೌಟ್ ಹಂತ ಪ್ರವೇಶದ ಹಾದಿ ಕಠಿಣವಾಗಿದೆ. ಆದ್ದರಿಂದ ಮಂಗಳವಾರದ ಪಂದ್ಯದಲ್ಲಿ ಭಾರಿ ಅಂತರದ ಜಯದ ಕನಸಿನೊಂದಿಗೆ ಕಣಕ್ಕೆ ಇಳಿಯಲಿದೆ.

ಮೊದಲ ಪಂದ್ಯದಲ್ಲಿ 236 ರನ್‌ಗಳಿಂದ ಪುದುಚೇರಿಯನ್ನು ಮಣಿಸಿದ್ದ ಕರ್ನಾಟಕ ನಂತರ ಮುಗ್ಗರಿಸಿತ್ತು. ಎರಡನೇ ಪಂದ್ಯದಲ್ಲಿ ತಮಿಳುನಾಡಿಗೆ ಎಂಟು ವಿಕೆಟ್‌ಗಳಿಂದ ಮಣಿದಿತ್ತು. ಆದರೆ ಮುಂಬೈ ಮತ್ತು ಬರೋಡಾ ವಿರುದ್ಧ ಉತ್ತಮ ಸಾಮರ್ಥ್ಯ ತೋರಿ ಲಯಕ್ಕೆ ಮಣಿದಿತ್ತು. ಮುಂಬೈಯನ್ನು ಏಳು ವಿಕೆಟ್‌ಗಳಿಂದ ಮತ್ತು ಬರೋಡವನ್ನು ಆರು ವಿಕೆಟ್‌ಗಳಿಂದ ಸೋಲಿಸಿತ್ತು.

ಆರ್.ಸಮರ್ಥ್ ಮತ್ತು ಕೆ.ವಿ. ಸಿದ್ಧಾರ್ಥ್ ಬ್ಯಾಟಿಂಗ್‌ನಲ್ಲಿ ಅಮೋಘ ಸಾಮರ್ಥ್ಯ ಪ್ರದರ್ಶಿಸುತ್ತಿದ್ದು ನಿರ್ಣಾಯಕ ಘಟ್ಟದಲ್ಲಿ ತಂಡದ ಕೈಹಿಡಿದು ಜಯದತ್ತ ಸಾಗಿಸಿದ್ದಾರೆ. ಬೌಲಿಂಗ್‌ನಲ್ಲಿ ಸ್ಪಿನ್ನರ್ ಪ್ರವೀಣ್ ದುಬೆ ಮಿಂಚುತ್ತಿದ್ದು ಹಿಂದಿನ ಎರಡು ಪಂದ್ಯಗಳಲ್ಲಿ ತಂಡದ ಗೆಲುವಿಗೆ ಪ್ರಮುಖ ಕಾಣಿಕೆ ನೀಡಿದ್ದಾರೆ. ಅವರಿಗೆ ಕೆ.ಸಿ.ಕಾರ್ಯಪ್ಪ ಅವರಿಂದ ಉತ್ತಮ ಸಹಕಾರ ಸಿಗುತ್ತಿದೆ.

ಬಂಗಾಳ ತಂಡದಲ್ಲಿ ಶಹಬಾಜ್ ಅಹಮ್ಮದ್ ಅವರನ್ನು ಹೊರತುಪಡಿಸಿದರೆ ಬ್ಯಾಟಿಂಗ್‌ನಲ್ಲಿ ಇತರ ಯಾರಿಂದಲೂ ನಿರೀಕ್ಷೆಗೆ ತಕ್ಕ ಪ್ರದರ್ಶನ ಕಂಡುಬಂದಿಲ್ಲ. ಬೌಲಿಂಗ್‌ನಲ್ಲಿ ಆಕಾಶ್‌ದೀಪ್ ಮಾತ್ರ ಈ ವರೆಗೆ ಮಿಂಚಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 9.00

ವೇಟ್‌ಲಿಫ್ಟಿಂಗ್: ಅಜಯ್‌ಗೆ ಚಿನ್ನ

ತಾಷ್ಕೆಂಟ್ (ಪಿಟಿಐ): ಅತ್ಯುತ್ತಮ ಸಾಮರ್ಥ್ಯ ತೋರಿದ ಅಜಯ್ ಸಿಂಗ್ ಅವರು ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಇದರೊಂದಿಗೆ 2022ರ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೂ ಅರ್ಹತೆ ಗಳಿಸಿದರು.

ಪುರುಷರ 81 ಕೆಜಿ ವಿಭಾಗದಲ್ಲಿ ಸ್ಪರ್ಧಿ ಸಿದ್ದ ಅಜಯ್ ಭಾನುವಾರ ರಾತ್ರಿ ಒಟ್ಟು 322 ಕೆಜಿ ಭಾರ ಎತ್ತಿದರು. ಈ ಮೂಲಕ ಸ್ನ್ಯಾಚ್ (147 ಕೆಜಿ) ರಾಷ್ಟ್ರೀಯ ದಾಖಲೆಯನ್ನು ಬರೆದರು.

ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಒಲಿದ ಮೂರನೇ ಚಿನ್ನದ ಪದಕ ಇದು.

ಮಹಿಳೆಯರ 59 ಕೆಜಿ ವಿಭಾಗದಲ್ಲಿ ಪೋಪಿ ಹಜಾರಿಕಾ ಅವರು ಬೆಳ್ಳಿ ಪದಕ ಗೆದ್ದರು. ಅವರು ಒಟ್ಟು 189 ಕೆಜಿ (84 + 105) ಸಾಧನೆ ಮಾಡಿದರು.


ಅಜಯ್ ಸಿಂಗ್

ಅಜಯ್ ಅವರು ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯಲಿರುವ ಚಾಂಪಿಯನ್‌ಷಿಪ್‌ಗೆ ನೇರ ಅರ್ಹತೆ ಗಿಟ್ಟಿಸಿದ ಭಾರತದ 3ನೇ ವೇಟ್ ಲಿಫ್ಟರ್ ಎನಿಸಿಕೊಂಡರು. ಜೆರೆಮಿ ಲಾಲ್‌ರಿನ್ನುಂಗಾ (67 ಕೆಜಿ ವಿಭಾಗ) ಮತ್ತು ಅಚಿಂತ ಶೆವುಲಿ (73 ಕೆಜಿ) ಚಾಂಪಿಯನ್‌ಷಿಪ್‌ನಲ್ಲಿ ಈಗಾಗಲೇ ಚಿನ್ನ ಗೆದ್ದು ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಪ್ರವೇಶ ಪಡೆದಿದ್ದಾರೆ.

ಸ್ಯಾಫ್: ಭಾರತಕ್ಕೆ ಭರ್ಜರಿ ಜಯ

ಢಾಕಾ (ಪಿಟಿಐ): ಭಾರತ ತಂಡ 19 ವರ್ಷದೊಳಗಿನ ಮಹಿಳೆಯರ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ 5–0ಯಿಂದ ಜಯಿಸಿತು. ಸಂತೋಷ್ (2ನೇ ನಿಮಿಷ),, ಕರೇನ್ ಎಸ್ಟ್ರೋಸಿಯೊ (5ನೇ ನಿ), ನೀತು ಲಿಂಡಾ (9 ಮತ್ತು 41ನೇ ನಿ), ಪ್ರಿಯಾಂಕ ದೇವಿ (82ನೇ ನಿ) ಗೋಲು ಗಳಿಸಿದರು.

ಐಎಸ್‌ಎಲ್: ನಾರ್ತ್ ಈಸ್ಟ್ ವಿರುದ್ಧ ಹೈದರಾಬಾದ್‌ಗೆ ಜಯ

ವಾಸ್ಕೊ (ಪಿಟಿಐ): ಬಾರ್ತೊಲೋಮೆ ಒಗ್ಬೆಚೆ ಮತ್ತೊಮ್ಮೆ ಅಮೋಘ ಆಟವಾಡಿ ಫುಟ್‌ಬಾಲ್ ಪ್ರೇಮಿಗಳನ್ನು ರಂಜಿಸಿದರು. ಅವರು ಗಳಿಸಿದ ಎರಡು ಗೋಲುಗಳ ಬಲದಿಂದ ಹೈದರಾಬಾದ್ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಸೋಮವಾರ ಭರ್ಜರಿ ಜಯ ಗಳಿಸಿತು.

ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ತಂಡವನ್ನು ಹೈದರಾಬಾದ್ ಎಫ್‌ಸಿ 5–1ರ ಜಯ ಸಾಧಿಸಿತು.

ಚಿಂಗ್ಲೆನ್ಸಾನ ಸಿಂಗ್ ಅವರ ಗೋಲಿನ ಮೂಲಕ 12ನೇ ನಿಮಿಷದಲ್ಲಿ ಹೈದರಾಬಾದ್ ಮುನ್ನಡೆ ಸಾಧಿಸಿತು. 27 ಮತ್ತು 78ನೇ ನಿಮಿಷಗಳಲ್ಲಿ ಬಾರ್ತೊಲೋಮೆ ಚೆಂಡನ್ನು ಗುರಿ ಮುಟ್ಟಿಸಿದರು.

90ನೇ ನಿಮಿಷದಲ್ಲಿ ತಂಡ ಎರಡು ಗೋಲುಗಳನ್ನು ಗಳಿಸಿತು. ಅನಿಕೇತ್ ಜಾದವ್ ಅವರ ಮೋಹಕ ಗೋಲಿನ ಬೆನ್ನಲ್ಲೇ ಜೇವಿಯರ್ ಸಿವೆರಿಯೊ ಯಶಸ್ಸು ಕಂಡರು. ನಾರ್ತ್ ಈಸ್ಟ್ ತಂಡದ ಗೋಲು ಗಳಿಸಿದವರು ಲಾಲ್ ದನ್ಮಾವಿಯ ರಾಲ್ಟೆ (43ನೇ ನಿಮಿಷ).

ಜಮ್ಷೆಡ್‌ಪುರಕ್ಕೆ ಒಡಿಶಾ ಸವಾಲು: ವಾಸ್ಕೊದಲ್ಲಿ ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಜಮ್ಷೆಡ್‌ಪುರ ಎಫ್‌ಸಿ ಮತ್ತು ಒಡಿಶಾ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ.


ಪ್ರಶಸ್ತಿಯೊಂದಿಗೆ ಆಳ್ವಾಸ್ ಕಾಲೇಜು ತಂಡ. (ಎಡದಿಂದ): ನಂದಕುಮಾರ್, ಸಂಜಯ್, ಶ್ರೀನಿವಾಸ್, ಮಹಾದೇವಸ್ವಾಮಿ, ಚೇತನ್, ಸಚಿನ್ ಮತ್ತು ಮುತ್ತಮಿಳರಸು

ಬಾಲ್ ಬ್ಯಾಡ್ಮಿಂಟನ್: ಆಳ್ವಾಸ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಡಬಿದಿರೆ ಆಳ್ವಾಸ್ ಶಿಕ್ಷಣ ಸಂಸ್ಥೆಯ ತಂಡ, ಭರತ್ ಸಾಯಿಕುಮಾರ್ ಸ್ಮಾರಕ ರಾಜ್ಯಮಟ್ಟದ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದುಕೊಂಡಿತು.

ತುಮಕೂರು ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಸಂಸ್ಥೆಯ ಸಹಯೋಗದಲ್ಲಿ ಗಾಂಧಿನಗರ ಸ್ಪೋರ್ಟ್ಸ್ ಕ್ಲಬ್ ಆಶ್ರಯದಲ್ಲಿ ತುಮಕೂರಿನ ಸಿದ್ಧಾರ್ಥ ಕಾಲೇಜು ಆವರಣದಲ್ಲಿ ನಡೆದ ಟೂರ್ನಿಯ ಫೈನಲ್ ಹಣಾಹಣಿಯಲ್ಲಿ ಆಳ್ವಾಸ್ ತಂಡ ಬೆಂಗಳೂರಿನ ಬನಶಂಕರಿ ಸ್ಪೋರ್ಟ್ಸ್ ಕ್ಲಬ್ ವಿರುದ್ಧ 35-22, 35-14ರಲ್ಲಿ ಜಯ ಗಳಿಸಿತು.

24 ತಂಡಗಳು ಭಾಗವಹಿಸಿದ್ದ ಲೀಗ್–ನಾಕೌಟ್ ಮಾದರಿಯ ಟೂರ್ನಿಯ ಸೆಮಿಫೈನಲ್‌ನಲ್ಲಿ ಆಳ್ವಾಸ್, ಸಹ್ಯಾದ್ರಿ ಸ್ಪೋರ್ಟ್ಸ್ ಕ್ಲಬ್ ವಿರುದ್ಧ 35-21, 35-18ರಲ್ಲಿ ಮಣಿಸಿತು. ಬನಶಂಕರಿ ತಂಡದವರು ಗಾಂಧಿನಗರ ಕ್ಲಬ್‌ಅನ್ನು ಸೋಲಿಸಿದರು. ಗಾಂಧಿನಗರ 3ನೇ ಸ್ಥಾನ ಗಳಿಸಿತು.

ಆಳ್ವಾಸ್‌ನ ಚೇತನ್ ಅತ್ಯುತ್ತಮ ಫ್ರಂಟ್ ಪ್ಲೇಯರ್, ಬನಶಂಕರಿ ತಂಡದ ತರುಣ್ ಅತ್ಯುತ್ತಮ ಬ್ಯಾಕ್ ಪ್ಲೇಯರ್ ಹಾಗೂ ಗಾಂಧಿನಗರ ಕ್ಲಬ್‌ನ ಪ್ರದೀಪ್ ಅತ್ಯುತ್ತಮ ಸೆಂಟರ್ ಪ್ಲೇಯರ್ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡರು.

ಮೈಸೂರು ರೇಸ್

ಟ್ರೇಸರ್ ಬುಲೆಟ್ ಗೆಲ್ಲುವ ನಿರೀಕ್ಷೆ

ಪಿ.ಎಂ.ಚನ್ನಬಸಪ್ಪ ಮೆಮೋರಿಯಲ್ ಟ್ರೋಫಿ ಮಂಗಳವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟ್ರೇಸರ್ ಬುಲೆಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಫ್ಲಾಶ್ ಬಾಂಡ್ 6, ಚಾಶ್ನಿ 4, ಬಿಗ್ ಬೂನ್ 2
2ನೇ ರೇಸ್: ಡ್ಯಾಡೀಸ್ ಗರ್ಲ್ 10, ವೈಲ್ಡ್ ಸ್ವೆಲ್ 5, ರೈಸಿಂಗ್ ಸನ್ 4
3ನೇ ರೇಸ್: ಡಿ ಥರ್ಟೀನ್ ಟ್ವೆಲ್ವ್ 4, ಲೀಪ್ ಆಫ್ ಫೈತ್ 2, ಗುಡ್ ಅರ್ಥ್ 1
4ನೇ ರೇಸ್: ಟ್ರೇಸರ್ ಬುಲೆಟ್ 12, ಫ್ಲೈಯಿಂಗ್ ಫಾಲ್ಕನ್ 2, ಶೀ ಈಸ್ ಎ ಬ್ಯೂಟಿ 11
5ನೇ ರೇಸ್: ಟ್ರಸ್ಟ್ ಗೋಲ್ಡ್ 6, ಡಿ ಗೋಲ್ಡ್ 5, ಸ್ವೇರ್ ದಿ ಸರ್ಕಲ್ 2
6ನೇ ರೇಸ್: ಇನ್‌ಫಿನೈಟ್‌ಪಾಸಿಬಿಲಿಟಿ 3, ಆಕರ್ 2, ಕಂಟ್ರೇಸ್ ಫೇಮ್ 6

ಉತ್ತಮ ಬೆಟ್: ಫ್ಲಾಶ್ ಬಾಂಡ್

ಜಾಕ್‌ಪಾಟ್	ಟ್ರಿಬಲ್	ಎಕ್ಸಾಕ್ಟ
3,4,5,6,7	4,5,6	5 ಮತ್ತು 6

ಚಾಂಪಿಯನ್ ಪಟ್ಟಕ್ಕೇರಿದ ವರ್ಸ್ಟಾಪನ್: ಮೈಕೆಲ್ ಮೇಲೆ ಆರೋಪಗಳ ಮಳೆ

ಫಾರ್ಮುಲಾ–1 ಫೈನಲ್: ವಿವಾದದ ಅಲೆ

ನವದೆಹಲಿ (ಪಿಟಿಐ/ರಾಯಿಟರ್ಸ್): ದುಬೈನಲ್ಲಿ ಭಾನುವಾರ ಕೊನೆಗೊಂಡ ಈ ವರ್ಷದ ಫಾರ್ಮುಲಾ–1 ರೇಸ್ ಬಗ್ಗೆ ವಿವಾದದ ಅಲೆ ಎದ್ದಿದೆ. ಅನಗತ್ಯ ರೇಸ್ ನಿಯಂತ್ರಣ 'ಕಾಲ್'ಗಳ ಮೂಲಕ ಪ್ರಮುಖರ ಎದೆಗುಂದಿಸುವ ಪ್ರಯತ್ನ ನಡೆದಿದೆ ಎಂಬ ಆರೋಪ ಕೇಳಿಬಂದಿದೆ.

ಮರ್ಸಿಡಿಸ್ ಚಾಲಕ, ಬ್ರಿಟನ್‌ನ ಲೂಯಿಸ್ ಹ್ಯಾಮಿಲ್ಟನ್ ಅವರನ್ನು ಹಿಂದಿಕ್ಕಿ ರೆಡ್‌ಬುಲ್ ಚಾಲಕ ನೆದರ್ಲೆಂಡ್ಸ್‌ನ ಮ್ಯಾಕ್ಸ್ ವರ್ಸ್ಟಾಪನ್ ಚೊಚ್ಚಲ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದರು. ಈ ರೇಸ್‌ನಲ್ಲಿ ಗೆದ್ದಿದ್ದರೆ ದಾಖಲೆಯ ಎಂಟನೇ ಪ್ರಶಸ್ತಿ ಗೆದ್ದ ಸಾಧನೆ ಹ್ಯಾಮಿಲ್ಟನ್ ಅವರದಾಗುತ್ತಿತ್ತು. ವರ್ಸ್ಟಾಪನ್ ಅವರನ್ನು ಗೆಲ್ಲಿಸುವುದಾಗಿ ನಿರ್ಧರಿಸಿಯೇ ಕೆಲವರು ರಂಗಕ್ಕೆ ಇಳಿದಂತೆ ಇತ್ತು ಎಂದು ಭಾರತದ ಮೊದಲ ಫಾರ್ಮುಲಾ–1 ಚಾಂಪಿಯನ್ ನಾರಾಯಣ್ ಕಾರ್ತಿಕೇಯನ್ ಅಭಿಪ್ರಾಯಪಟ್ಟಿದ್ದಾರೆ.

'ರೇಸ್ ಉದ್ದಕ್ಕೂ ಸಂದೇಹಗಳಿಗೆ ಎಡೆಮಾಡುವ ಪ್ರಸಂಗಗಳು ನಡೆದಿದ್ದವು. ಚಾಂಪಿಯನ್‌ಷಿಪ್‌ಗೆ ಭಾರಿ ಪೈಪೋಟಿ ನಡೆದಿತ್ತು. ಫಾರ್ಮುಲಾ–1ನಲ್ಲಿ ಇದು ಸಹಜ ಕೂಡ. ಆದರೆ ಭಾನುವಾರದ ಸ್ಪರ್ಧೆ ಅಹಿತಕರವಾಗಿತ್ತು' ಎಂದು ಕಾರ್ತಿಕೇಯನ್ ಹೇಳಿದರು.



ಪ್ರಶಸ್ತಿಯೊಂದಿಗೆ ಮ್ಯಾಕ್ಸ್ ವರ್ಸ್ಟಾಪನ್ ಸಂಭ್ರಮ –ರಾಯಿಟರ್ಸ್ ಚಿತ್ರ

58 ಲ್ಯಾಪ್‌ಗಳ ರೇಸ್‌ನಲ್ಲಿ ಹ್ಯಾಮಿಲ್ಟನ್ ವಿಜಯದತ್ತ ಮುನ್ನುಗ್ಗಿದ್ದರು. ಆದರೆ 53ನೇ ಲ್ಯಾಪ್‌ನಲ್ಲಿ ನಿಕೋಲಸ್ ಲತೀಫ್ ಅವರ ವಾಹನ ಅಪಘಾತಕ್ಕೊಳಗಾಯಿತು. ಹೀಗಾಗಿ ಸುರಕ್ಷತಾ ಕಾರನ್ನು ಟ್ರ್ಯಾಕ್‌ಗೆ ಇಳಿಸಲಾಗಿತ್ತು.

ವರ್ಸ್ಟಾಪನ್ ವಾಹನಕ್ಕೆ ಮೃದು ಟೈರ್‌ಗಳನ್ನು ಅಳವಡಿಸಲು ಅವಕಾಶ ನೀಡಿದರೆ ಹ್ಯಾಮಿಲ್ಟನ್ ಗಡುಸು ಟೈರ್‌ಗಳನ್ನು ಬಳಸಿಕೊಂಡೇ ಚಲಾಯಿಸಿದರು. ಕೊನೆಯ ಲ್ಯಾಪ್‌ನಲ್ಲಿ ರೇಸ್ ನಿರ್ದೇಶಕ ಮೈಕೆಲ್ ಮ್ಯಾಸಿ ಐವರು ಬ್ಯಾಕ್ ಮಾರ್ಕರ್‌ಗಳಿಗೆ ಅವಕಾಶ ನೀಡಿ ದಶಕದಲ್ಲೇ ದೊಡ್ಡ ಪ್ರಮಾದ ಎಸಗಿದ್ದರು. ಇದರಿಂದ ವರ್ಸ್ಟಾಪನ್ ಗೆಲುವು ಅತಿ ಸುಲಭವಾಯಿತು ಎಂಬ ದೂರುಗಳು ಕೇಳಿಬಂದಿವೆ.

ಫೈನಲ್ ನಂತರ ಸಾಮಾಜಿಕ ತಾಣಗಳಲ್ಲೂ ಭಾರಿ ಚರ್ಚೆ ನಡೆದಿದ್ದು ರೇಸ್ ನಿರ್ದೇಶಕರ ವಿರುದ್ಧ ಅನೇಕರು ಟೀಕಾಪ್ರಹಾರ ಮಾಡಿದ್ದಾರೆ.

ಸುರಕ್ಷತಾ ಕಾರು ಬಳಸುವ ಅವಧಿಯನ್ನು ಮುಗಿಸಿದ ವಿವಾದಕ್ಕೆ ಸಂಬಂಧಿಸಿ ಹೇಳಿಕೆ ನೀಡಿರುವ ಜಾರ್ಜ್ ರಸೆಲ್ 'ಮ್ಯಾಕ್ಸ್ ಅತ್ಯುತ್ತಮ ಚಾಲಕನಾಗಿದ್ದು ಈ ಋತುವಿನಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ. ಆದರೆ ಭಾನುವಾರ ಆಗಿರುವ ಪ್ರಮಾದಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ' ಎಂದಿದ್ದಾರೆ.

ಫಾರ್ಮುಲಾ–1 ಮಾಜಿ ಚಾಂಪಿಯನ್ ಡ್ಯಾಮನ್ ಹಿಲ್, ಫುಟ್‌ಬಾಲ್ ಆಟಗಾರ ಹ್ಯಾರಿ ಕೇನ್ ಮುಂತಾದವರು ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮಾಜಿ ಚಾಲಕ ಜಾಕಿ ಸ್ಟೀವರ್ಟ್ ಮತ್ತು ಕೆಲವರು ವರ್ಸ್ಟಾಪನ್ ಸಾಧನೆಯನ್ನು ಕೊಂಡಾಡಿದ್ದಾರೆ.

ಹಾಕಿ ತಂಡಕ್ಕೆ ಪೂವಣ್ಣ ನಾಯಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಜೂನಿಯರ್ ಹಾಕಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ಪುರುಷರ ತಂಡವನ್ನು ಪ್ರಕಟಿಸಲಾಗಿದೆ. ಸಿ.ಬಿ. ಪೂವಣ್ಣ ಅವರು ರಾಜ್ಯ ತಂಡದ ಸಾರಥ್ಯ ವಹಿಸಿದ್ದಾರೆ.

ತಮಿಳುನಾಡಿನ ಕೋವಿಲಪಟ್ಟಿಯಲ್ಲಿ ಡಿಸೆಂಬರ್ 16ರಿಂದ 25ರವರೆಗೆ ರಾಷ್ಟ್ರೀಯ ಜೂನಿಯರ್ ಚಾಂಪಿಯನ್‌ಷಿಪ್ ನಿಗದಿಯಾಗಿದೆ. ಕರ್ನಾಟಕ ತಂಡವು ಚಂಡೀಗಡ, ಆಂಧ್ರ ಮತ್ತು ಮಿಜೋರಾಂ ತಂಡಗಳಿರುವ ಡಿ ಗುಂಪಿನಲ್ಲಿ ಸ್ಥಾನ ಪಡೆದಿದೆ.

ತಂಡ: ಸಿ.ಬಿ. ಪೂವಣ್ಣ (ನಾಯಕ), ಮೋಹಿತ್ ಎಚ್.ಎಸ್. (ಗೋಲ್ ಕೀಪರ್), ದೀಕ್ಷಿತ್ ಎ.ಎಚ್, ಮಜ್ಜಿ ಗಣೇಶ್, ಅರ್ಜುನ್ ಬಿ, ಆಶಿಕ್ ಎನ್. ಆರ್, ವಿಶ್ವಾಸ್ ಜಿ, ಪ್ರಜ್ವಲ್ ಬಿಜವಾಡ. ದೇಶ್ ಪೂವಯ್ಯ ಎ.ಎ, ಭರತ್ ಎಂ.ಕೆ, ಬಿಪಿನ್ ಬಿ.ಆರ್, ರಾಹುಲ್ ಸಿ.ಜೆ, ಭವಿನ್ ಕುಶಾಲಪ್ಪ ಕೆ.ಆರ್, ಚಿರಣ್ ಮೇದಪ್ಪ, ಲಕ್ಕಲ ಹಿತೇಶ್ ರಾವ್, ನಿಖಿಲ್ ಜೋಸೆಫ್ ಕೆ.ಜೆ, ನೆಹಲ್ ತಮ್ಮಯ್ಯ ಎಂ.ಡಿ, ಶಾನ್ ಮೊನ್ನಪ್ಪ ಎಂ.ಎ (ಗೋಲ್ ಕೀಪರ್). ಮ್ಯಾನೇಜರ್: ನಾಗಲಿಂಗ ಸ್ವಾಮಿ, ಕಂಡಿಷನರ್: ಅವಿನಾಶ್ ಕೆ.ಸಿ, ಕೋಚ್: ತನು ನಂಜಪ್ಪ